SRI S. SRINIVASA IYENGAR.—Certainly, Sir. There are areas in T. Narasipur and Malavalli Taluks remaining undeveloped. The claim of the Government is that the store of water is not enough to develop that area. My point is, you are wasting water at the head-works with which you would have developed the land; you have not been able to control it, most of the water is lost there ; and consequently the area remains undeveloped.

Sir, there is a monumental instance also. As the Hon'ble the Minister has rightly reminded me, I have always fought for the cause of the completion of work under the Turuganur Branch extension. In the year 1942, the Government undertook some expansion ; the expansion would bring in about 7,000 acres under development. For this expansion they have spent in the year 1942 nearly Rs. 5 lakhs. From 1942 to 1954 they never cared to allow water in the canal. They simply forgot. They thought that that expenditure was out of the borrowed funds, and a thing of the past. In 1954 I agitated and the Hon'ble the Minister was pleased to allow water in that channel. The work remains still incomplete. It must be immediately done.

Sir, we are working under an agreement between the Government of Madras and the Government of Mysore. We have an agreement to share the waters of Cauvery and suppose we are unable to complete the programme of development of the area, then we have to surrender our right to them. They acquire prescriptive right. The agreement was perhaps made in the year 1924 and it would last till 1974. For 19 years, if the Government of Mysore do not develop the area as provided for under the agreement, I think, we have to surrender our rights to the Government of Madras and they acquire the prescriptive right. They have already developed the Lower Bhavani work. They are quite sure about the returns. Therefore, I think, Sir, it is very necessary for the Government to devote some personal attention to this. Irrigation projects are an asset to us ; they develop our wealth. Why should we lose the advantage ? We can use the

(SRI S. SRINIVASA IYENGAR.)

stored water much better in Krishnarajasagara. For Hydro-electric generation the Shivasamudram is supplying water during summer months. We can save that water if we construct Kapini project. If the Kapini Project is put up, more water could be let in for the generation of Hydro-electric power and to that extent the water of Krishnarajasagar is conserved. And therefore, I submit for the development of Thungabhadra greater attention is to be devoted.

I think I have covered almost all the projects. We are spending not a great amount for the irrigation projects. For the repairs and maintenance after all we are spending Rs. 81 lakhs out of a budget provision of nearly 27 crores. This amount is insignificant so for as the maintenance of the tanks are concerned. Sir, the Hon'ble the Minister inspected a tank, I think, in the year 1952 (Algud tank). I accompanied the Hon'ble Minister; of course, the Chief Engineer was also there. Two Chief Engineers have already come and gone, and yet the work remains where it was. I would like to know whether it is possible for the Government to take up the work and give us the relief that we so earnestly pray for. Thank you, Sir.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ನಮ್ಮ ಸಂಸ್ಥಾನದಲ್ಲಿ ಮೈನರ್ ಕೆರೆಗಳೇ ಒಂದಾನೊಂದು ಕಾಲದಲ್ಲಿ ಜನಗಳಿಗೆ ಆಶ್ರಯವಾಗಿದ್ದಂಥವು. ಈಗ ಅವು ಬಹಳ ಮಟ್ಟಿಗೆ ಇಲ್ಲವಾಗಿವೆ. ಮೈಸೂರು ದೇಶದಲ್ಲಿ ಯಾವ ಗ್ರಾಮದಲ್ಲೂ ಒಂದು ಕೆರೆಯಿಲ್ಲದಿರಲಿಲ್ಲ. ಒಂದು ರೀತಿಯಲ್ಲಿ, ಇಂಥ ಮೈನರ್ ಕೆರೆಗಳಿದ್ದುದರಿಂದ Soil Erosion ನಿಂತು ಹೋಗಿ ದೊಡ್ಡ ದೊಡ್ಡ ಕೆರೆಗಳಿಗೆ ಹೂಳು ಬರುವುದು ನಿಂತು ಹೋಗುತ್ತಿತ್ತು. ಅಲ್ಲದೆ, ಈಗಿನಂತೆ ಒಂದು ಕಡೆಯೇ ಹೆಚ್ಚು ನೀರಾವರಿಯಾಗಿ ಅಲ್ಲಿನ ಜನರ ಆರ್ಥಿಕ ಸ್ಥಿತಿ ಮಾತ್ರ ಉತ್ತಮವಾಗುವುದಕ್ಕೆ ಬದಲಾಗಿ ಇಡೀ ದೇಶದಲ್ಲಿ ಎಲ್ಲಾ ಕಡೆಯಲ್ಲೂ ಜನಗಳು ಆರ್ಥಿಕವಾಗಿ ಮುಂದುವರಿಯುವುದಕ್ಕೆ ಅವಕಾಶವಾಗುತ್ತಿತ್ತು. ನೀರಾವರಿ ಅನುಕೂಲತೆಯಿಲ್ಲದೆ ಬರೀ ಮಳೆಯ ಆಶ್ರಯದಿಂದ 12 ತಿಂಗಳೂ ಮಳೆಯನ್ನೇ ನೋಡಿಕೊಂಡು ಬೆಳೆ ಬೆಳೆಯುವುದೆಂದರೆ ಸಾಧ್ಯವಿಲ್ಲದ ಮಾತು. ಅದರಿಂದ ಅವನ ಆರ್ಥಿಕ ಸ್ಥಿತಿ ಉತ್ತಮವಾಗುವುದಿಲ್ಲ. ನೀರಾವರೀ ಸೌಕರ್ಯವಿದ್ದರೇನೇ ರೈತನ ಆರ್ಥಿಕ ಸ್ಥಿತಿ ಉತ್ತಮವಾದೀತೆಂಬುದು ನಿರ್ವಿವಾದವಾದ ಮಾತು. ಈಗ ನೀವೇ ನೋಡಿರುವಂತೆ, ಎಲ್ಲಿ ಕೆರೆ, ನಾಲೆಗಳು ಹೆಚ್ಚಾಗಿವೆಯೋ, ಅಲ್ಲಿ ಜನಗಳು ತಮ್ಮ ಜೀವನಕ್ಕೆ ಸಾಕಾದಷ್ಟು ಬೆಳೆದು ಕೊಳ್ಳುತ್ತಿದ್ದಾರೆ. ಹೀಗಿರುವಾಗ ನಮ್ಮ ಮಿತ್ರರಾದ ಶ್ರೀಮಾನ್ ಮ್ಯಾಸ್‌ಕರನ್ಹಾಸ್‌ರವರು ಒಂದು ಮಾತು ಹೇಳಿದರು. ನಮಗೆ ಈಗಿರುವ ನೀರಾವರೀ ಯೋಜನೆಗಳೇ ಸಾಕು, ನಾವೀಗ ಬೆಳೆಯುತಕ್ಕ ಆಹಾರ ಪದಾರ್ಥಗಳೇ ಸಾಕೆಂದು ಹೇಳಿದರು. ಅವರು ಹೇಳುವುದು ಸರಿಯಲ್ಲ. ನಮ್ಮಲ್ಲಿ ಬೆಳೆಯುವ ಆಹಾರ ಪದಾರ್ಥ ಎಂದೆಂದಿಗೂ ಸಾಕಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ದೇಶದಲ್ಲಿ ಜನ ಜಾಸ್ತಿಯಾಗುತ್ತಿರುವುದು ಒಂದೇ ಅಲ್ಲ, ಜನರ ಆರ್ಥಿಕ ಸ್ಥಿತಿ ಉತ್ತಮವಾದಂತೆಲ್ಲಾ ಹೆಚ್ಚಿಗೆ ದವಸ ಬೇಕಾಗುತ್ತದೆ. ಈಗ ಅನೇಕ ಜನರಿಗೆ ಕೊಳ್ಳತಕ್ಕ ಶಕ್ತಿ ಇಲ್ಲ. ನಮ್ಮ ದೇಶದಲ್ಲಿ 75 ಭಾಗದಷ್ಟು ಜನ ಈಗ ಸರಿಯಾಗಿ ಎರಡು ಹೊತ್ತು ಊಟಮಾಡುತ್ತಿಲ್ಲ. ಅವರಿಗೆ ದೊರಕುವ ಆಹಾರ ಸಾಕಷ್ಟು ಪುಷ್ಟಿಕರವಾಗಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಈಗ ಮಾನ್ಯ ಸದಸ್ಯರು ಶೇಕಡ 75 ಮಂದಿಗೆ ಆಹಾರ ಸಿಕ್ಕುವುದಿಲ್ಲವೆಂದು ಹೇಳುತ್ತಿದ್ದಾರೆ. ಹಿಂದೆ, ಸಾಯುವವರ ಸಂಖ್ಯೆ ಕಡಮೆ ಯಾಗಿದೆ, ಜನರಲ್ಲಿ ಆರೋಗ್ಯ ಜಾಸ್ತಿಯಾಗುತ್ತಿದೆಯೆಂದು ಅವರೇ ಹೇಳಿದರು. ಅವರ ವಾದ ಒಂದಕ್ಕೊಂದಕ್ಕೆ ಹೇಗೆ ಸರಿಹೋಗುತ್ತದೆಯೋ ಗೊತ್ತಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಒಬ್ಬ ಮನುಷ್ಯನಿಗೆ ಒಂದು ದಿವಸಕ್ಕೆ 2,000 ಕ್ಯಾಲರಿಗಳಷ್ಟು ಉಷ್ಣಾಂಶ ಇರಬೇಕೆಂದು ಶಾಸ್ತ್ರಜ್ಞರು ಹೇಳುತ್ತಾರೆ. ಆ ಪ್ರಕಾರ ನೋಡುವುದಾದರೆ, ಅದರಲ್ಲಿ ಅರ್ಧ ಕೂಡ ಸಿಕ್ಕದಿರುವ ಜನ ನಮ್ಮ ದೇಶದಲ್ಲಿ ಎಷ್ಟು ಜನರಿದ್ದಾರೆಂದು ತಾವೇ ನೋಡಿಕೊಳ್ಳಬಹುದು. ಮಾನ್ಯ ಸದಸ್ಯರು ಪ್ರತಿಯೊಬ್ಬರೂ ತಮ್ಮ ತಮ್ಮ ಊರಿನಲ್ಲಿ ಸರಿಯಾಗಿ ಎರಡು ಹೊತ್ತು ಊಟಮಾಡುವವರು ಎಷ್ಟು ಜನರಿದ್ದಾರೆಂಬುದನ್ನು ಅವರೇ ಲೆಕ್ಕಮಾಡಿಕೊಂಡು ಹೇಳಲಿ. ಮಾನ್ಯ ಸದಸ್ಯರೇನೋ ಪುಷ್ಟಿಕರವಾಗಿ ಊಟಮಾಡಿಕೊಂಡು ಬರುತ್ತಾರೆ. ಜೊತೆಗೆ ಮಧ್ಯಾಹ್ನ ಫಲಾಹಾರ, ಬೆಳಗ್ಗೆ ಫಲಾಹಾರ ಬೀಳುತ್ತದೆ. ಇವರಿಗೆ ಆ ಜನರ ಕಷ್ಟ-ಜೀವನದ ಅರಿವಾಗದಿರಬಹುದು.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).-ಅವರ ಊರಿನಲ್ಲಿ ಎಷ್ಟು ಜನರು ಹೊಟ್ಟೆಗೆ ಆಹಾರವಿಲ್ಲದೆ ಇದ್ದಾರೆ ಎಂಬುದನ್ನು ಮುಂಚೆ ಹೇಳಲಿ.

ಶ್ರೀ ಬಿ. ಹುಚ್ಚೇಗೌಡ.—ಶೇಕಡ 75 ಜನರು ಹೀಗೆ ಒಂದೇ ಹೊತ್ತು ಊಟಮಾಡುತ್ತಿರುವುದರಿಂದ ನಮ್ಮ ಗ್ರಾಮದಲ್ಲಿ ಆರ್ಥಿಕ ಸರ್ವೆ ನಡೆಸುವುದು ಎಷ್ಟು ಕಷ್ಟವಾಯಿತೆಂಬುದನ್ನು ಹೇಳುತ್ತೇನೆ. ನಮ್ಮ ಗ್ರಾಮದಲ್ಲಿ 208 ಕುಟುಂಬಗಳಿವೆ. ಅದರಲ್ಲಿ ಮೂರು ಎಕರೆಗಳೊಳಗೆ ಜಮೀನಿರುವವರು 120ರ ಮೇಲೆ ಇದ್ದಾರೆ. 50 ಕುಟುಂಬಗಳಿಗೆ ಜಮೀನಿಲ್ಲವೇ ಇಲ್ಲ. ಹೋದ ವರ್ಷ ಮಳೆ ಬೆಳೆಯಾಗದೆ ಸುತರಾಂ ಊಟವಿಲ್ಲದೆ ಅನೇಕ ಜನ ಒದ್ದಾಡಿದರು. Manganese ಗಣಿ ಬಂದ ಮೇಲೆ ಸ್ವಲ್ಪ ಊಟಕ್ಕೆ ಸಿಕ್ಕುವಂತಾಯಿತು. ಅಲ್ಲಿ ಬಲಾತ್ಕಾರ ಮಾಡಿ ಮನೆಯ ಮಕ್ಕಳನ್ನು ಬೆಳಗ್ಗೆ ಸ್ಕೂಲಿಗೆ ನಾವು ಕಳುಹಿಸಿಕೊಟ್ಟರೆ, ಮಧ್ಯಾಹ್ನ ಹೇಗಾದರೂ ಮಾಡಿ ಮನೆಯ ತಂದೆತಾಯಿಗಳು ಸ್ಕೂಲಿಗೆ ಹೋಗದಂತೆ ಮಾಡಿ ಎಲ್ಲಿಯಾದರೂ ಮೂರು ರೂಪಾಯಿ ತಿಂಗಳಿಗೆ ಕೂಲಿಸಿಕ್ಕುವಕಡೆಗೆ ಕೂಲಿಗೆ ಕಳುಹಿಸುತ್ತಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡ (ಬೇಲೂರು).—ಮಾನ್ಯ ಸದಸ್ಯರು ಈ ಡಿಮ್ಯಾಂಡಿನ ಮೇಲೆ ಮಾತನಾಡುತ್ತಿದ್ದಾರೆಯೇ ಅಥವಾ general ಆಗಿ ಮಾತನಾಡುತ್ತಿದ್ದಾರೆಯೇ ?

ಶ್ರೀ ಬಿ. ಹುಚ್ಚೇಗೌಡ.—ಆದ್ದರಿಂದ, ನೀರಾವರೀ ಸೌಕರ್ಯಗಳನ್ನು ಹೆಚ್ಚು ಮಾಡಿಕೊಡಿ ಎಂಬುದಕ್ಕೆ ಇದು

ಒಂದು ಕಾರಣ. ಅಲ್ಲದೆ ನಮ್ಮ ಪ್ರದೇಶದಲ್ಲಿ ಹರಿಯತಕ್ಕ ಹೊಳೆಗಳೆಲ್ಲಾ ಹೊರಕ್ಕೆ ಹರಿಯುತ್ತಾ ನಮ್ಮದು ಪ್ರಸ್ಥಭೂಮಿಯಾಗಿದೆ. ದೈವಿಕವಾಗಿ ಬರುವ ಮಳೆಯಿಂದಲೇ ಫಸಲು ಮಾಡಬೇಕೆಂದರೆ 12 ತಿಂಗಳು ಕಷ್ಟಪಟ್ಟರೂ ಕೊನೆಗೆ ಒಂದು ಹದ ಮಳೆಬಾರದೆ ಹೋದರೂ ಎಲ್ಲಾ ನಷ್ಟವಾಗುತ್ತದೆ. ಹೀಗೆ ಆಗಿ ಹೋದ ವರುಷ ರಾಗಿ ಫಸಲೆಲ್ಲಾ ಹೋಯಿತು. ಆದ್ದರಿಂದ ನಮ್ಮ ಕಡೆಗೆ ನೀರಾವರಿ ಸೌಕರ್ಯ ಅತ್ಯಗತ್ಯವಾಗಿದೆ. ನಮ್ಮ ಒಂದೇ ತಾಲ್ಲೂಕಿನ ವಿಷಯ ನಾನು ಹೇಳುತ್ತಿಲ್ಲ. ನಮ್ಮ ಸಂಸ್ಥಾನದಲ್ಲಿರತಕ್ಕ ಮೈನರ್ ಕೆರೆಗಳೆಲ್ಲವನ್ನೂ ದುರಸ್ತು ಮಾಡಿಸಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ. ನಮ್ಮ ದೇಶದಲ್ಲಿರುವ 26,000 ಕೆರೆಗಳಲ್ಲಿ $8\frac{1}{2}$ ಸಾವಿರ ಕೆರೆಗಳು ಮಾತ್ರ ಈಗ ಉಪಯೋಗದಲ್ಲಿವೆ. ಉಳಿದ ಕೆರೆಗಳನ್ನು ಇನ್ನು 10 ವರ್ಷಗಳಲ್ಲಾದರೂ ರಿಪೇರಿ ಮಾಡಿಕೊಡಬೇಕು. ಮೇಜರ್ ಕೆರೆಗಳು ಎರಡು ಸಾವಿರದಷ್ಟು ಇರುವಲ್ಲಿ 350 ಕೆರೆಗಳು ದುರಸ್ತಿಲ್ಲದೆ ನಿಂತಿವೆ. ಅವನ್ನೂ ಆದಷ್ಟು ಜಾಗ್ರತೆ ಸರಿಮಾಡಿಸಿ ಕೊಡಬೇಕು.

ಇಂಜನಿಯರಿಂಗ್ ಇಲಾಖೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನಾಡುತ್ತೇನೆ. ಅಲ್ಲಿ ಎಷ್ಟರ ಮಟ್ಟಿಗೆ ಕೆಲಸ ನಡೆಯುತ್ತಿದೆಯೋ ಅದಕ್ಕೆ ಸರಿಯಾಗಿ ಜನ ಸಿಬ್ಬಂದಿಯಿದ್ದರೆ ಚೆನ್ನಾಗಿರುತ್ತದೆ. ಜಾಸ್ತಿಯಿದ್ದರೆ ಕೆಟ್ಟು ಹೋಗುತ್ತದೆ, ಕಡಮೆಯಿದ್ದರೆ ಕೆಲಸ ತೃಪ್ತಿಕರವಾಗಿ ನಡೆಯುವುದಿಲ್ಲ. ಒಬ್ಬ ಎಗ್ಸಿಕ್ಯೂಟಿವ್ ಎಂಜಿನಿಯರನ್ನು ನೇಮಿಸಬೇಕಾದರೆ ಎಷ್ಟು ಕೆಲಸ ಇದೆ, ಎಲ್ಲಾ ಕೆಲಸಗಳೂ ಒಂದೇ ಕಡೆಯೇ ಇವೆಯೇ ಅಥವಾ ಬೇರೆಬೇರೆ ಸೆಕ್ಟರ್‌ಗಳಲ್ಲಿವೆಯೇ ನೋಡಬೇಕು. ತುಂಗ ಅಣೆಕಟ್ಟಿನ ವಿಷಯವನ್ನೇ ತೆಗೆದುಕೊಳ್ಳೋಣ. ಅಲ್ಲಿಗೆ ಒಬ್ಬರು ಎಗ್ಸಿಕ್ಯೂಟಿವ್ ಎಂಜಿನಿಯರಿದ್ದಾರೆ. 20 ಲಕ್ಷ ರೂಪಾಯಿಗಳ ಕೆಲಸವೆಂದ ಮಾತ್ರಕ್ಕೆ ಒಬ್ಬ ಎಗ್ಸಿಕ್ಯೂಟಿವ್ ಎಂಜಿನಿಯರನ್ನು ಹಾಕಬೇಕೇ? ಸಾಮಾನ್ಯವಾಗಿ ಒಂದು ಪೂರಾ ಡಿಸ್ಟ್ರಿಕ್ಟಿಗೆ ಒಬ್ಬರು ಎಗ್ಸಿಕ್ಯೂಟಿವ್ ಎಂಜಿನಿಯರನ್ನು ಹಾಕುತ್ತಾರೆ. ಭದ್ರಾ ಅಣೆಕಟ್ಟಿನಲ್ಲಿ ನೋಡುವುದಾದರೆ ಅಲ್ಲಿ 5 ಜನ ಎಗ್ಸಿಕ್ಯೂಟಿವ್ ಎಂಜಿನಿಯರಿರುತ್ತಾರೆ. ಆ 5 ಜನರೂ ಸುಮ್ಮನೆ ನಿಂತಿರುತ್ತಾರೆ. ಅವರಿಗೊಂದು ಆಫೀಸಿಲ್ಲ, ಸಿಬ್ಬಂದಿಯಿಲ್ಲ, ಟೈಪ್ರೈಟರ್ ಕೂಡ ಬಂದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಯಾವ ಕಾಲದ ಮಾತು ಹೇಳುತ್ತಿದ್ದೀರಿ?

ಶ್ರೀ ಬಿ. ಹುಚ್ಚೇಗೌಡ.—ತಾವು ಯಾವಾಗ ಕೊಟ್ಟಿದ್ದು ಹೇಳಿ. ಮಾನ್ಯ ಅಧ್ಯಕ್ಷರೂ ನಮ್ಮ ಜೊತೆಯಲ್ಲೇ ಇದ್ದರು.

Mr. SPEAKER.—Your suggestion was . . . .

ಶ್ರೀ ಬಿ. ಹುಚ್ಚೇಗೌಡ.—ಅವರು ಅದನ್ನೂ ಮಾಡಲಿಲ್ಲ. 5 ಜನರನ್ನೂ ಸುಮ್ಮನೆ ಕಳುಹಿಸಿದರು. ಒಬ್ಬೊಬ್ಬರಿಗೂ ನಾಲ್ಕು-ನಾಲ್ಕು ಜನ ಅಸಿಸ್ಟೆಂಟ್ ಎಂಜಿನಿಯರುಗಳು ಬೇರೆ. 17 ಜನ ಅಸಿಸ್ಟೆಂಟ್ ಎಂಜಿನಿಯರುಗಳನ್ನು ಕಳುಹಿಸಿ ಕೊಟ್ಟ ಮೇಲೆ ಮುಂದಿನ ಪರಿಣಾಮವೇನೆಂಬುದನ್ನು ನೋಡಬೇಕು. ಒಂದು dam ಕಟ್ಟಬೇಕಾದರೆ ಸಾವಿರ ಸಾವಿರ ಅಡಿಗೊಬ್ಬರು ನಿಂತಿದ್ದರೆ ಏನು ಪ್ರಯೋಜನ? ಹೀಗೆ ಒಂದೇ ಕಡೆ ಅಸಿಸ್ಟೆಂಟ್ ಎಂಜಿನಿಯರುಗಳನ್ನಿಡುವ ಬದಲು ತರೀಕೆರೆ ಭಾಗದಲ್ಲಿ ಒಬ್ಬರು, ಭದ್ರಾವತಿ ಭಾಗದಲ್ಲಿ ಒಬ್ಬರು—ಈ ರೀತಿ ಹಾಕಿದ್ದರೆ ಎಷ್ಟೋ ಚೆನ್ನಾಗಿತ್ತು. ಇಲ್ಲೆಲ್ಲಾ ಟೆಂಪೊರರಿ ಕಟ್ಟಡಗಳನ್ನು ಕಟ್ಟಿಸಿಕೊಟ್ಟು ಅವ್ಯವಸ್ಥೆ ಮಾಡುವುದಕ್ಕಿಂತ, 50-50 ಮೈಲಿಗಳಿಗೆ ದೂರದಲ್ಲಿ ಬೇಕಾದರೆ ಒಬ್ಬ ಎಗ್ಸಿಕ್ಯೂಟಿವ್ ಎಂಜಿನಿಯರನ್ನು ಹಾಕಿ ಅಲ್ಲಿಗೆ ಒಂದು ಡಿವಿಜನ್ ಮಾಡಿದ್ದರೆ ಅದಾದರೂ ಚೆನ್ನಾಗುತ್ತಿತ್ತು. ಕೆಲಸ ಮಾಡಿಸುವುದೊಂದೇ ಮುಖ್ಯವಲ್ಲ; ಖರ್ಚು ಕಡಮೆ ಮಾಡುವುದನ್ನೂ ನೋಡಬೇಕು. ಒಂದು ನಿದರ್ಶನ ಹೇಳುವುದಾದರೆ, ಸುಣ್ಣವನ್ನು ಅಲ್ಲಿಗೇ ತಂದು ಕಮ್ಮಿ ಬೆಲೆಗೆ supply ಮಾಡಿದರೆ ಯಾವ ಕಮ್ಮಿ ಬೆಲೆಗೆ ಸಿಕ್ಕುತ್ತಿತ್ತೋ ಅದೇ ಬೆಲೆಗೆ 27 ಮೈಲಿ ದೂರದಲ್ಲಿ ಕೊಂಡುಕೊಂಡು ಲಾರಿಯಲ್ಲಿ ತರಿಸುತ್ತಿದ್ದಾರೆ।

2-30 P.M.

ಈ ದಿವಸ ನಮ್ಮ ಸಂಸ್ಥಾನದಲ್ಲಿರತಕ್ಕಂಥ ಸುಮಾರು 26 ಸಾವಿರ ಕೆರೆಗಳಲ್ಲಿ $8\frac{1}{2}$ ಸಾವಿರ ಕೆರೆಗಳು ಮಾತ್ರ ಉಪಯೋಗಕಾರಿಗಳಾಗಿರುತ್ತವೆ. ಇನ್ನು ಮೇಜರ್ ಕೆರೆಗಳು ಸುಮಾರು ಎರಡು ಸಾವಿರದ ಮೇಲಿರುತ್ತವೆ. ಈ ದಿವಸ ಈ ಆಡಳಿತ ಶಾಖೆಯಲ್ಲಿ ಏನಾದರೂ ಪ್ರಯತ್ನ ಮಾಡಿ ಸ್ವಲ್ಪ ಖರ್ಚುಗಳನ್ನು ಕಡಮೆ ಮಾಡುತ್ತಿದ್ದಾರೆಯೇ ಎಂದು ನೋಡಿದರೆ ಅದು ದಿನ ದಿನಕ್ಕೂ ಏರುತ್ತಿದೆ. ಅವರಿಗೆ ಸ್ಥಳದಲ್ಲಿ ಅಷ್ಟು ಕೆಲಸಗಳಿಲ್ಲದಿದ್ದರೂ ಒಬ್ಬ ಅಧಿಕಾರಿಯನ್ನಿಟ್ಟಿದ್ದಾರೆ. ಸುಮ್ಮನೆ ಟೆಂಡರುಗಳನ್ನು ಕರೆದು ಅವುಗಳನ್ನು ಮೇಲೆ ಇರತಕ್ಕಂಥ ಮತ್ತೊಬ್ಬ ಅಧಿಕಾರಿಗಳಿಗೆ ಕಳುಹಿಸುವುದಕ್ಕೇ ಒಬ್ಬ ಅಧಿಕಾರಿಯನ್ನಿಟ್ಟುಕೊಂಡಿರುತ್ತಾರೆ. ಹೀಗೆ ಇವರು ಅಧಿಕಾರಿ ವರ್ಗದಲ್ಲಿ ವೆಚ್ಚವನ್ನು ಅಧಿಕ ಮಾಡುತ್ತಾ ಹೋಗುತ್ತಿದ್ದಾರೆ. ಅಲ್ಲಿ ಒಂದೇ ಸ್ಥಳದಲ್ಲಿ ಐದು ಜನ ಇಂಜಿನಿಯರ್ ಅಧಿಕಾರಿಗಳಿರತಕ್ಕದ್ದು ಬಹಳ ಜಾಸ್ತಿಯಾಯಿತು. ಆ ಭದ್ರಾ ಅಣೆಕಟ್ಟು 1946 ರಲ್ಲೇ ಮಂಜೂರಾಯಿತು. ಎಂಟು ಕೋಟಿ ರೂಪಾಯಿಗಳಿಗೆ ಮಂಜೂರಾಯಿತು. 1950 ರ ತನಕ ಹಾಗೇ ಅದು ಕುಂಟಿಕೊಂಡು ನಡೆಯಿತು. ಅನಂತರ ಅಧಿಕಾರಕ್ಕೆ ಬಂದ ಸರ್ಕಾರ ಅದನ್ನು 'go slow' ಪಾಲಿಸಿ ಎಂದು ಹಿಂದಕ್ಕೆ ತಳ್ಳಿದರು. ಕಾರಣವೇನೆಂದು ಆಗ ಕೇಳಿದ್ದಕ್ಕೆ ಅದಕ್ಕೆ ಆಗುವಷ್ಟು ದುಡ್ಡು ನಮ್ಮಲ್ಲಿಲ್ಲ ಎಂದು ಹೇಳುತ್ತಿದ್ದರು. ಆದರೆ ಆ ದಿವಸವೇ ಈ ವಿಧಾನ ಸೌಧದ ಕಟ್ಟಡವನ್ನು ಪ್ರಾರಂಭಮಾಡಿದರು. ಹಾಗೆ ತಮ್ಮಲ್ಲಿ ದುಡ್ಡಿಲ್ಲ ಎಂದು ಹೇಳಿದ ಮೇಲೆ ತಾವು ಈ ಕಟ್ಟಡದ ಕೆಲಸವನ್ನೂ ಕೂಡ ನಿಲ್ಲಿಸಬೇಕಾಗಿತ್ತು. ಆದರೆ ಈ ಕೆಲಸವನ್ನು ಆ ಜಲಾಶಯದ ಕೆಲಸದಂತೆ ತಾವೇನೂ ಕೈಬಿಡಲಿಲ್ಲ. ನೀವು ಯಾವುದಾದರೂ ಒಂದು ಕೆಲಸಕ್ಕೆ ಹಾಗೆ ಕೈಹಾಕಲೇಬಾರದು; ಹಾಕಿದ ಮೇಲೆ ಅದನ್ನು ಪುನಃ ಕೈಬಿಡಕೂಡದು. "Beg, borrow or steal" ಎಂದು ಹೇಳುತ್ತಾರಲ್ಲ ಅದರಂತೆ ತಾವು ಏನಾದರೂ ಮಾಡಿ ಕೆಲಸವನ್ನು ಪೂರ್ತಿಗೊಳಿಸಬೇಕೇ ಶಿವಾಯಿ ಅದನ್ನು ಹಿಂದಕ್ಕೆ ಹಾಕಬಾರದು. (ಸಭೆಯಲ್ಲಿ ನಗು!)

ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ಆ 'stealing' ವಿಚಾರದ ಪರಿಶ್ರಮವೇ ಇಲ್ಲವಲ್ಲ (ನಗು!)

Mr. SPEAKER.—I do not think we permit stealing.

ಶ್ರೀ ಬಿ. ಹುಚ್ಚೇಗೌಡ.—ಈ ಕೆಲಸ ಕಾರ್ಯಗಳಿಗೆ ಯದ್ವಾತದ್ವ ದುಡ್ಡು ಖಜಾನೆಯಿಂದ ಖರ್ಚಾಗುತ್ತಿದೆ. ಮೊದಲು ಈ ಪ್ರಾಜೆಕ್ಟಿಗೆ ಎಂಟು ಕೋಟಿ ರೂಪಾಯಿಗಳ ಅಂದಾಜಾಗಿತ್ತು. ಈಗ ಅದು ಏಕ್‌ದಂ 18 ಕೋಟಿಗೆ ಏರಿ ಹೋಗಿದೆ. ಆದರೆ ಅಲ್ಲಿ ಈವರೆಗೆ ಆಗಿರತಕ್ಕ ಕೆಲಸ ಒಂದೂವರೆ ಕೋಟಿ ರೂಪಾಯಿಗಳದು

(ಶ್ರೀ ಬಿ. ಹುಚ್ಚೇಗೌಡ.)

ಮಾತ್ರ. ಇಷ್ಟಕ್ಕೆ ಈ ದಿವಸ ಅಲ್ಲಿ ಕೆಲಸ ಮಾಡುತ್ತಿರುವವರು ಐದು ಜನ ಎಗ್ಜಿಕ್ಯುಟೀವ್ ಇಂಜಿನಿಯರುಗಳು ಮತ್ತು ಒಬ್ಬ ಸೂಪರಿಂಟೆಂಡೆಂಟ್ ಇಂಜಿನಿಯರು. ಇಷ್ಟು ಚಿಕ್ಕಪುಟ್ಟ ಕೆಲಸಗಳಿಗೆಲ್ಲ ಇಷ್ಟೊಂದು ಅಗಾಧವಾದಂಥ ಸಿಬ್ಬಂದಿ ನೇಮಿಸಿದರೆ ಖರ್ಚು ಬಹಳ ದುಬಾರಿ ಆಗುತ್ತದೆ. ಕೆಲಸ ಕೂಡ ಒಂದು ಹಿಡಿತಕ್ಕೆ ಬರುವುದಿಲ್ಲ. ಹೀಗೆಲ್ಲಾ ಮಾಡಬಾರದು. ಮಿತವ್ಯಯದಿಂದ ಕೆಲಸ ಮಾಡುವುದಕ್ಕೆ ಅನೇಕ ಮಾರ್ಗಗಳಿರುತ್ತವೆ. ಇನ್ನು ಅಂಬಲಿಗೊಳದ ವಿಚಾರದಲ್ಲೂ ಹೀಗೆ ಮಾಡಿದ್ದಾರೆ. ಅದರ ಅಂದಾಜು 56·00 ಲಕ್ಷ ರೂಪಾಯಿಗಳು. ಅದರಿಂದ ಏಳು ಸಾವಿರ ಎಕರೆ ಜಮೀನು ನೀರು ಸಾಗಿಗೆ ಬರುತ್ತದೆ. ಮೊದಲು ಇದರ ಅಂದಾಜನ್ನು 48 ಲಕ್ಷಕ್ಕೆ ಮಾಡಿದ್ದರು. ಆಗ 11 ಸಾವಿರ ಎಕರೆ ಸಾಗುವಳಿಗೆ ಬರುತ್ತಿತ್ತು. ಆದರೆ ಯಾರೋ ಒಬ್ಬ ಕಾಂಗ್ರೆಸ್ ಮುಖಂಡರ ಜಮೀನುಗಳೆಲ್ಲಾ ಮುಳುಗಡೆಯಾಗುತ್ತವೆಂದು ಖರ್ಚನ್ನು 56 ಲಕ್ಷಕ್ಕೆ ಹೆಚ್ಚಿಸಿದರು. ಸಾಗುವಳಿಗೆ ಬರತಕ್ಕ ಜಮೀನು ಕೂಡ ಕಡಮೆಯಾಯಿತು.

Mr. SPEAKER.—It was re-investigated.

Sri Kadidal MANJAPPA.—I am hearing for the first time this allegation.

ಶ್ರೀ ಬಿ. ಹುಚ್ಚೇಗೌಡ.—ನೀವು ಆ ಸ್ಥಳವನ್ನು ಸರಿಯಾಗಿ ಇನ್ವೆಸ್ಟಿಗೇಟ್ ಮಾಡಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಇನ್ವೆಸ್ಟಿಗೇಷನ್‌ಗಳನ್ನೂ ಮಾಡಿದ್ದಾಯಿತು. ಆದರೆ ಈಗ ಹಾಲಿ ನಿರ್ಧರ ಮಾಡಿರತಕ್ಕ ಸೈಟೇ ಸರಿಯಾದದ್ದು—ಇನ್ನು ಬೇರೆ ಯಾವ ಕಡೆಗೂ ಇದನ್ನು ಬದಲಾಯಿಸುವುದಕ್ಕಾಗುವುದಿಲ್ಲ ಎಂದು ನಮ್ಮ ಇಂಜಿನಿಯರ್ ಅವರು ಹೇಳಿದ್ದಾರೆ.

Mr. SPEAKER.—I think only on account of that objection and some petitions, Government delayed the starting of the project for three years, re-investigated twice and found that it was not feasible.

ಶ್ರೀ ಬಿ. ಹುಚ್ಚೇಗೌಡ.—ನನಗೆ ತಿಳಿದು ಬಂದ ವಿಚಾರಗಳೇನಿವೆಯೋ ಅವುಗಳ ಪ್ರಕಾರ ನಾನೀಗ ಹೇಳುತ್ತಿದ್ದೇನೆ. ಹಾಗೆ ತಪ್ಪಿದ್ದರೆ ತಾವು ಸರಿಪಡಿಸಿ ಹೇಳಬಹುದು. ಇದು ಇರತಕ್ಕ ವಾಸ್ತವಾಂಶವೇ ಆಗಿದೆ. ಏನೇ ಇರಲಿ ತಾವು ಮಾತ್ರ ಈ ಕೆಲಸಗಳನ್ನೆಲ್ಲಾ ಜಾಗ್ರತೆ ಮುಗಿಸಬೇಕೆಂದು ಹೇಳುತ್ತೇನೆ. ಈ ಕೆಲಸಗಳು ಬೇಗ ಮುಗಿಯದೆ ಇದ್ದರೆ ರೈತರಿಗೆ ಅನುಕೂಲವಾಗುವುದಿಲ್ಲ. ಆದರೆ ಈ ಎಸ್ಟಾಬ್ಲಿಷ್‌ಮೆಂಟ್ ಖರ್ಚುಗಳು, ಆಫೀಸ್ ಸಂಬಳ ಸಾರಿಗೆಗಳು ಬಹಳ ಜಾಸ್ತಿಯಾಗುತ್ತಿವೆ. ನಮ್ಮ ತುಮಕೂರು ಜಿಲ್ಲೆಯಲ್ಲಿ ಹೇಮಾವತಿ ನದಿಗೆ ಒಂದು ಅಣೆಕಟ್ಟನ್ನು ಹಾಕಬೇಕೆಂದು ಎಷ್ಟೋ ದಿವಸಗಳಿಂದ ಕೇಳಿಕೊಳ್ಳುತ್ತಿದ್ದೇವೆ. ಮೊದಲು ಒಂಭತ್ತು ಸಾವಿರಕ್ಕೆ ಒಂದು ಪ್ರಾಜೆಕ್ಟನ್ನು ತಯಾರಿಸಿದ್ದರು. ಆದರೆ ಅದರ ನೀರನ್ನು ನಮ್ಮವರೆಗೂ ಬರುವ ಹಾಗೆ ಮಾಡಿಲ್ಲ. ಆದರೆ ಈಗ ಈ ಚನ್ನಗಿರಿ ಹತ್ತಿರ ಛಾನಲ್‌ಗೆ ಒಂದು ಟನಲ್ ಹೊಡೆದು ನೀರನ್ನು ಗುಡ್ಡದಿಂದಾಚೆಗೆ ಸಾಗಿಸಿದ್ದಾರಲ್ಲ ಹಾಗೆ, ನಮ್ಮಲ್ಲಿಯೂ ಒಂದು ಮಧ್ಯೆ ಗುಡ್ಡವಿದೆ, ಅದರಲ್ಲಿ ಸುಮಾರು ಹೀಗೆ ಮೂರು ಮೈಲಿಗಳವರೆಗೆ ಸ್ವಲ್ಪ ದುಡ್ಡನ್ನು ಖರ್ಚುಮಾಡಿ ಒಂದು ಸುರಂಗ ಹೊಡೆದರೆ ಅನುಕೂಲವಾಗಬಹುದು. ನಮ್ಮ ಸೀಮೆ ಬೈಲು ಪ್ರದೇಶ. ಇಲ್ಲಿಗೆ ಒಂದು ನೀರಾವರಿ ಯೋಜನೆಯನ್ನು ಏರ್ಪಾಟು ಮಾಡಿಕೊಡಬೇಕೆಂದು ಅಲ್ಲಿಗೆ ಮಾನ್ಯ ಮಂತ್ರಿಗಳು ಬಂದಿದ್ದಾಗ ಕೂಡ ಅನೇಕ ಜನರು ಮನವಿಗಳನ್ನು ಕೊಟ್ಟಿದ್ದಾರೆ. ಆದುದರಿಂದ ತಾವು ಈ ವಿಚಾರವನ್ನು ಪರಿಶೀಲನೆಮಾಡಿ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಎಲ್. ಸಿದ್ದಪ್ಪ (ಚೆನ್ನಗಿರಿ).—ಸ್ವಾಮಿ, ಈ ದಿವಸ ನಮ್ಮ P.W.D. ನಲ್ಲಿ ಏನೇನು ಕೆಲಸ ಕಾರ್ಯಗಳು ನಡೆಯುತ್ತಿವೆ ಅನ್ನುವುದರ ಬಗ್ಗೆ ಸರ್ಕಾರದವರು ಒಂದು ಸಣ್ಣ ಹೊತ್ತಿಗೆಯನ್ನು ಪ್ರಿಂಟ್ ಮಾಡಿಸಿ ಅದನ್ನು ಸದಸ್ಯರುಗಳಿಗೆಲ್ಲಾ ಹಂಚಿಸಿದ್ದಾರೆ. ಆ ಹೊತ್ತಿಗೆಯ ಕೊನೆ ಪುಟದಲ್ಲಿ ಕೊಟ್ಟಿರತಕ್ಕಂಥ ಒಂದು ಪಟ್ಟಿಯನ್ನು ನೋಡಿದರೆ ಮಧ್ಯಮ ತರಗತಿಗೆ ಸೇರಿರುವಂಥ 49 ಕಾಂಗಾರಿಗಳನ್ನು ಕೈಕೊಂಡಿದ್ದರಲ್ಲಿ ಈಗಾಗಲೇ 19 ಕಾಂಗಾರಿಗಳ ಕೆಲಸ ಸಂಪೂರ್ಣವಾಗಿ ಮುಗಿಸಲ್ಪಟ್ಟಿದೆಯೆಂಬ ವಿಷಯವನ್ನು ಕೇಳಿದರೆ ದೇಶದಲ್ಲಿರತಕ್ಕ ಜನರಿಗೆಲ್ಲ ಬಹಳ ಆನಂದ ಉಂಟಾಗುತ್ತದೆ. ಹೀಗೆ ದೇಶದಲ್ಲಿರಕ್ಕಂಥ ಜನರಿಗೆ ಅನುಕೂಲಗಳನ್ನುಂಟು ಮಾಡುತ್ತಿರುವುದನ್ನು ನೋಡಿದರೆ ನನಗೂ ಕೂಡ ಬಹಳ ಸಂತೋಷವಾಗುತ್ತಿದೆ. ಇದರ ಬಗ್ಗೆ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ. ಆದರೆನಾನು ಹೀಗೆ ಸರ್ಕಾರದವರನ್ನು ಅಭಿನಂದಿಸುವಾಗ ಈ ಹಿಂದೆ ನಾವು ಏನೇನು ಕೆಲಸಗಳನ್ನು ಕೈಗೊಳ್ಳಬೇಕೆಂದು ಮನಸ್ಸು ಮಾಡಿದ್ದೆವು, ಆ ಪೈಕಿ ಎಷ್ಟೆಷ್ಟು ಕಾಮಗಾರಿಗಳು ಪೂರ್ತಿಯಾಗಿವೆ ಎನ್ನತಕ್ಕ ಬಗ್ಗೆ ಒಂದು ಸಣ್ಣ ಸರ್ವೆ ಪರಿಶೀಲನೆಯನ್ನು ನಡೆಸಿ ನೋಡುವುದಕ್ಕೆ ಪ್ರಯತ್ನಿಸೋಣ.

ಈ ಹಿಂದೆ ಸರ್ಕಾರದವರು ಅಂಗೀಕರಿಸಿದ್ದಂಥ ಕಾಮಗಾರಿಗಳನ್ನೆಲ್ಲಾ ಕೈಗೊಂಡಿರುತ್ತಾರೆಂದು ನಾವೆಲ್ಲರೂ ಆಶಿಸಿದ್ದೆವು. ಉದಾಹರಣೆಗಾಗಿ ಹೇಳುವುದಾದರೆ, ನಮ್ಮ ಚೆನ್ನಗಿರಿ ತಾಲ್ಲೂಕನ್ನೇ ಈಗ ತೆಗೆದುಕೊಳ್ಳೋಣ. ಆದರೆ ನಾನು ಹೀಗೆ ಏನೋ ಪ್ರಾಸಂಗಿಕವಾಗಿ ನಮ್ಮ ತಾಲ್ಲೂಕನ್ನೇ ತೆಗೆದುಕೊಳ್ಳೋಣ ಎಂದು ಹೇಳಿದ್ದರಿಂದ ನಾನೊಂದು ಸ್ವಾರ್ಥಭಾವನೆಯಿಂದ ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ವಿಚಾರಗಳನ್ನೇ ಹೇಳುತ್ತಿದ್ದೇನೆ ಎಂದು ಯಾರೂ ದಯವಿಟ್ಟು ಭಾವಿಸಬಾರದು. ಈ ಹಿಂದೆ ನಮ್ಮ ಚೆನ್ನಗಿರಿ ತಾಲ್ಲೂಕಿನಲ್ಲಿ ಮಾವಿನಹೊಳೆ ಪ್ರಾಜೆಕ್ಟ್ ಅನ್ನುವುದನ್ನು ಕಟ್ಟಿಸತಕ್ಕ ಬಗ್ಗೆ ಸರ್ಕಾರದವರು ಒಂದು ಎಸ್ಟಿಮೇಟನ್ನು 1948 ರಲ್ಲೇ ಮಂಜೂರು ಮಾಡಿದರು. ಆಮೇಲೆ ಆ ಕೆಲಸವನ್ನು ಕೈಗೊಳ್ಳಬೇಕೆಂದು 1949 ನೆಯ ಬಡ್ಜೆಟ್ಟಿನಲ್ಲಿ ಹಣವನ್ನು ಪ್ರೊವೈಡ್ ಮಾಡಿದರು. ಆದರೆ ಆ ವರ್ಷ ಆ ಕೆಲಸವನ್ನೇ ಕೈಗೊಳ್ಳಲಿಲ್ಲ. ಆ ವರ್ಷದ ವಿಚಾರವೂ ಹೋಗಲಿ, ಆಗೇನೋ ಹಾಗಾಯಿತು. ಆದರೆ ಅದರ ಮಾರನೆಯ ವರ್ಷ ಪುನಃ ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸಿದರು. ಹಾಗೆ 1950 ರಲ್ಲಿ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದಾಗ್ಗೂ ಕೂಡ ಆ ಕೆಲಸವನ್ನು ಮಾತ್ರ ಆಗಲೂ ಪ್ರಾರಂಭ ಮಾಡಲೇ ಇಲ್ಲ. ಹೀಗಾದುದನ್ನೆಲ್ಲಾ ನೋಡಿದರೆ ಜನಗಳಿಗೆ ಈ ರೀತಿಯಾಗಿ ಬಡ್ಜೆಟ್ಟಿನಲ್ಲಿ ಒಂದು ಮೊಬಲಗನ್ನು ಒದಗಿಸಿ ಬಿಟ್ಟು ಅದರಿಂದ ಜನಗಳಿಗೊಂದು ಒಳ್ಳೆಯ ಅಭಿಪ್ರಾಯ ಹುಟ್ಟುವಂತೆ ಮಾಡಿ, ಅವರು ಅಷ್ಟರಲ್ಲೇ ತೃಪ್ತಿಪಟ್ಟುಕೊಳ್ಳುವಂತೆ ಮಾಡಬೇಕೆಂಬ ಅಭಿಪ್ರಾಯ ಸರ್ಕಾರಕ್ಕಿದ್ದಂತೆ ಕಂಡುಬರುತ್ತಿದೆ.

ಆಗ ಅದೇ ಸಮಯಕ್ಕೆ ಸರಿಯಾಗಿ ಒಂದು ಚಿಕ್ಕ ಪುಸ್ತಕವನ್ನು "Draft Five-Year Plan relating to Mysore State." ಈಗ ಮಾಡಿಸಿರುವ ಹಾಗೆ, ಬೇರೆ ಅಚ್ಚು ಹಾಕಿಸಿದ್ದರು. ಆ ಪುಸ್ತಕದಲ್ಲಿ ಕೂಡ ಈಗ ನಾನು ಹೇಳಿದಂಥ ಕಾಮಗಾರಿಗಳೆಲ್ಲಾ ಸೇರಿಸಲ್ಪಟ್ಟಿದ್ದವು. ಆ ಒಂದು ರೀತಿಯಲ್ಲೂ ಸಹ ಆಗ ನಮಗೆಲ್ಲಾ ಏನೋ ಒಂದು ಸಂತೋಷ ಉಂಟಾಗಿತ್ತು. ಈ ಹಿಂದೆ ನಾನು ಇದೇ ವಿಚಾರವಾಗಿ ಒಂದು ಪ್ರಶ್ನಾವಳಿಯನ್ನೂ ಕೂಡ ಈ ಸಭೆಯ ಮುಂದೆ ತಂದಿದ್ದೆ. ಆಗ ಸರ್ಕಾರದವರು ಉತ್ತರ ಕೊಡುವಾಗ ಆ ಕೆಲಸವನ್ನು ಕೂಡಲೇ ಮಾಡಿಸಿಕೊಡುವುದಾಗಿ ಭರವಸೆ ಕೊಟ್ಟಿದ್ದರು. ಈ ಕೆಲಸ 1949 ರಲ್ಲೇ ಮಂಜೂರಾಗಿತ್ತು. ಈ ಕೆಲಸಕ್ಕಾಗಿ ಸರ್ಕಾರದವರು 1950–1951 ಮತ್ತು 1951-52 ನೆಯ ಸಾಲಿನ ಬಡ್ಜೆಟ್ಟಿನಲ್ಲಿ ಹಣವನ್ನೂ ಕೂಡ ಒದಗಿಸಿದ್ದರು. ಆದರೆ ಈ ಪ್ರಾಜೆಕ್ಟಿನ ಕೆಲಸ ಮಾತ್ರ ಈ ಹೊತ್ತಿಗೂ ಕೈಬಿಟ್ಟು ಬಿಡಲಾಗಿದೆ. ಹೀಗೆ ಒಂದು ಕೆಲಸ ಮಂಜೂರಾಗಿದ್ದು, ಅದಕ್ಕೆ ಬಡ್ಜೆಟ್ಟಿನಲ್ಲಿ ಹಣವನ್ನು ಕೂಡ ಒದಗಿಸಿದ್ದರೂ ಆ ಕೆಲಸವನ್ನು ಕೈಗೊಳ್ಳದೆ ಇರತಕ್ಕದ್ದು ತುಂಬ ವಿಷಾದಕರವಾದಂಥ ವಿಚಾರ.

ಶ್ರೀ ಕಡಿವಾಳ್ ಮಂಜಪ್ಪ.—ಆದರೆ ಭದ್ರಾ ಪ್ರಾಜೆಕ್ಟಿನ ನಾಲೆಯ ನೀರು ಆ ಪ್ರದೇಶಕ್ಕೆ ಬರುತ್ತದೆಂದು ಇಂಜಿನಿಯರ್‌ಗಳು ತಿಳಿಸಿದ್ದರಿಂದ ಆ ಕೆಲಸವನ್ನು ಕೈಬಿಡಲಾಯಿತು.

ಶ್ರೀ ಎಲ್. ಸಿದ್ದಪ್ಪ.—ಆ ಅಭಿಪ್ರಾಯ ಸರಿಯಾದುದಲ್ಲ. ಕಾರಣವೇನೆಂದರೆ ಮಧ್ಯೆ ಉಟ್ಟಾಣಿ ಬೆಟ್ಟಗಳು ಬರುತ್ತವೆ. ಆದುದರಿಂದ ಆ ಪ್ರದೇಶ ಬಹಳ ಹೈ ಲೆವಲ್‌ನಲ್ಲಿರುತ್ತದೆ. ಆ ಪ್ರದೇಶಕ್ಕೆ ಈ ನಾಲೆ ನೀರು ಹತ್ತುವುದಿಲ್ಲ. ಒಂದುವೇಳೆ ತಾವು ಅಲ್ಲಿ ಟನಲ್ ಹೊಡೆದಾಗ್ಯೂ ಕೂಡ ಆ ನೀರು ಮುಂದೇನಾದರೂ ಹೋಗಬಹುದೇ ಶಿವಾಯಿ ಈ ಪ್ರದೇಶಕ್ಕೆ ಮಾತ್ರ ಆ ನೀರು ಹತ್ತುವುದಿಲ್ಲ. ಹೀಗಿದ್ದರೂ ಎಷ್ಟೋ ವೇಳೆ ಇಂಜಿನಿಯರ್‌ಗಳು ಹೀಗೆ ಆಫ್ ಹ್ಯಾಂಡ್ ಆಗಿ ಹೇಳುವುದೂ ಉಂಟು. ಆದುದರಿಂದ ತಾವು ಆ ಅಭಿಪ್ರಾಯಗಳನ್ನೆಲ್ಲಾ ನಂಬಬಾರದೆಂದು ಹೇಳುತ್ತೇನೆ.

ಇದೇ ರೀತಿಯಾಗಿ ತಾವೀಗ ಇನ್ನೂ ಎಷ್ಟೋ ಹೊಸ ಹೊಸ ಕಾಂಗಾರಿಗಳನ್ನು ಹೊಳಲ್ಕೆರೆ ತಾಲ್ಲೂಕಿನಲ್ಲೂ ಕೈಗೊಂಡಿದ್ದೀರಿ. ಆ ತಾಲ್ಲೂಕಿನಲ್ಲೂ ಕೆಲವು ಹೊಸ ಪ್ರಾಜೆಕ್ಟುಗಳನ್ನು ತಾವೀಗ ಕೈಗೊಂಡಿದ್ದೀರಿ. ಅವುಗಳಿಗಾಗಿ ಬಡ್ಜೆಟ್ಟಿನಲ್ಲಿ ಹಣವನ್ನು ಕೂಡ ಒದಗಿಸಿದ್ದೀರಿ. ಕಾಗಿಲುಗೆರೆ ಪ್ರಾಜೆಕ್ಟಿಗೆ 3 ಲಕ್ಷ 75 ಸಾವಿರ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದೀರಿ. ಈ ಪ್ರಾಜೆಕ್ಟ್ ಹೊಳಲ್ಕೆರೆ ತಾಲ್ಲೂಕಿಗೆ ಸೇರಿದೆ. ಈ ಹಿಂದೆ ನಾನು ಮಂತ್ರಿಯಾಗಿದ್ದಾಗಿನಿಂದಲೂ ಆ ಪ್ರದೇಶದ ಜನಗಳು ಸುಮಾರು 1945-46ನೆಯ ಸಾಲಿನಿಂದಲೂ ಈ ಪ್ರಾಜೆಕ್ಟನ್ನು ಕಟ್ಟಿಸಿ ಕೊಡಬೇಕೆಂದು ಕೇಳುತ್ತಲೇ ಬಂದಿದ್ದಾರೆ. ತಾವೀಗ ಅದರ ಅಂದಾಜನ್ನು ಕೂಡ ತಯಾರಿಸಿ, ಅದನ್ನು ಮಂಜೂರು ಮಾಡಿದ್ದೀರಿ. ಅದಕ್ಕಾಗಿ ಬಡ್ಜೆಟ್ಟಿನಲ್ಲಿ ಹಣವನ್ನೂ ಕೂಡ ಮೀಸಲಾಗಿ ತೆಗೆದಿಟ್ಟಿದ್ದೀರಿ. ಬಹಳ ಸಂತೋಷ. ಆದರೆ ತಾವು ದಯವಿಟ್ಟು ಈ ಕೆಲಸಗಳನ್ನಾದರೂ ಆ ಮಾವಿನಹೊಳೆ ಪ್ರಾಜೆಕ್ಟಿಗೆ ಮಾಡಿದಂತೆ ಮಾಡಬಾರದೆಂದು ತಿಳಿಸಲಿಚ್ಛಿಸುತ್ತೇನೆ. ತಾವು ಯಾವಾಗ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸುತ್ತೀರೋ ಆಗ ಆ ಕೆಲಸವನ್ನು ಕೈಗೊಳ್ಳಲೇಬೇಕು. ಇದು ಬಹಳ ಮುಖ್ಯವಾದ ಅಂಶ. ಆದರೆ ಆ ಮಾವಿನಹೊಳೆ ಪ್ರಾಜೆಕ್ಟಿಗೆ ಬಂದಂಥ ದುರ್ಗತಿ ಮಾತ್ರ ಇವುಗಳಿಗೆ ಬರಬಾರದು ಅನ್ನುವುದನ್ನು ಮತ್ತೊಮ್ಮೆ ಒತ್ತಿ ಹೇಳಲಪೇಕ್ಷಿಸುತ್ತೇನೆ. ಈಗ ತಾವೇನೋ ಅನೇಕ ಹೊಸ ಹೊಸ ಕಾಮಗಾರಿಗಳನ್ನು ಕೈಗೊಳ್ಳತಕ್ಕ ಬಗ್ಗೆ ಬಡ್ಜೆಟ್ಟಿನಲ್ಲಿ ಮೊಬಲಗನ್ನು ತೆಗೆದಿಟ್ಟಿದ್ದೀರಿ. ಹೀಗೆ ತಾವು ಯಾವ ಯಾವ ಬಾಬುಗಳಿಗೆ ಹಣವನ್ನು ಮೀಸಲಾಗಿಟ್ಟಿದ್ದೀರೋ ಅಂಥ ಬಾಬುಗಳ ಬಗ್ಗೆ ಜಾಗ್ರತೆಯಾಗಿ ಅಂದಾಜುಗಳನ್ನು ತರಿಸಿಕೊಂಡು ಅವುಗಳ ಅಡ್ಮಿನಿಸ್ಟ್ರೇಟೀವ್ ಮತ್ತು ಟೆಕ್ನಿಕಲ್ ಸ್ಯಾಂಕ್ಷನ್‌ಗಳೆರಡನ್ನೂ ಮಾಡಿ, ಕೆಲಸವನ್ನು ಬೇಗ ಪ್ರಾರಂಭಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಅಲ್ಲಿ ಏನಾದರೂ ಈ ಅಂಬಲಿಗೊಳದಂಥ ತಕರಾರುಗಳು ಬಂದರೋ ?

ಶ್ರೀ ಎಲ್. ಸಿದ್ದಪ್ಪ.—ಬಹುಶಃ ನನಗೆ ತಿಳಿದ ಮಟ್ಟಿಗೂ ಅಲ್ಲಿ ಅಂಥ ತಕರಾರುಗಳೇನೂ ಬರಲಾರವು. ಆದರೆ ಈಗ ತಾನೆ ಮಾನ್ಯ ಸದಸ್ಯರಾದ ಶ್ರೀ ಬಿ. ಹುಚ್ಚೇಗೌಡರು ಆ ಅಂಬಲಿಗೊಳದ ಸೈಟನ್ನು ಬದಲಾಯಿಸುವುದಕ್ಕೆ ಕಾರಣ ಶ್ರೀ ಬದರಿನಾರಾಯಣಯ್ಯಂಗಾರ್ ಅವರ ಜಮೀನು ಮುಳುಗಡೆಯಾಗುತ್ತಿದ್ದವೆಂದು ಅದನ್ನು ಬೇರೆ ಕಡೆಗೆ ಬದಲಾಯಿಸಿದ್ದಾರೆಂದು ಹೇಳಿದರು. ಆದರೆ ಇದು ನಿಜವಲ್ಲ. ನನಗೆ ತಿಳಿದಮಟ್ಟಿಗೂ ಷಿಕಾರಿಪುರದ ತಾಲ್ಲೂಕಿನಲ್ಲಿ ಶಿರಾಳಕೊಪ್ಪ ಬಹಳ ಬೆಂಗಾಡು ಪ್ರದೇಶ. ಆ ಪ್ರದೇಶಕ್ಕೆ ಒಂದು ಹೆಚ್ಚು ಅನುಕೂಲವಾಗುವಂತೆ ಮೇಲ್ಭಾಗದಲ್ಲಿ ಒಂದು ಅಣೆಕಟ್ಟನ್ನು ಹಾಕಬೇಕೆಂದು ಅಲ್ಲಿನ ಜನರು ನಾನು ಹಿಂದೆ ಮಂತ್ರಿಯಾಗಿದ್ದ ಕಾಲದಲ್ಲೂ ಕೂಡ ಕೇಳುತ್ತಲೇ ಇದ್ದರು. ಆದರೆ ಹಾಗೆ ಮಾಡುವುದಕ್ಕಾಗಲಿಲ್ಲ. ಹಾಗೆ ಅದು ಸಾಧ್ಯವಾಗದೆ ಹೋದುದರಿಂದ ಅದನ್ನು ಬೇರೆಕಡೆಗೆ ಬದಲಾಯಿಸಲೇಬೇಕಾಯಿತು. ಇಷ್ಟೇ ವಿನಾ ಇದರಲ್ಲಿ ಮತ್ತೆ ಯಾವ ಕಾರಣವೂ ಇಲ್ಲ. ಆದುದರಿಂದ ಈಗ ತಾನೆ ಮಾನ್ಯ ಸದಸ್ಯರು ಏನು ಹೇಳಿದರೋ ಅದು ಅಷ್ಟು ಸಕಾರಣವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ಇನ್ನೂ ಒಂದು ವಿಚಾರವಿದೆ. ತಾವು ಈ ಹೊಸ ಹೊಸ ಕೆಲಸಗಳ . . . .

ಶ್ರೀ ಬಿ. ಹುಚ್ಚೇಗೌಡ.—ಈ P.W.D. ಇಲಾಖೆಗೆ ಮಂತ್ರಿಗಳಾಗಿ ಬಂದಿರತಕ್ಕವರೆಲ್ಲರೂ ಒಂದೇ ಜಿಲ್ಲೆಯವರಾಗಿರುವುದರಿಂದ ಅವರು ಹೇಳುವುದೆಲ್ಲಾ ಒಂದೇ ಆಗಿದೆ.

ಶ್ರೀ ಎಲ್. ಸಿದ್ದಪ್ಪ.—ಈಗ ತಾವು ಹೊಸ ಹೊಸ ಕೆಲಸಗಳ ಬಗ್ಗೆ ತರಿಸಿಕೊಳ್ಳಬೇಕಾಗಿರತಕ್ಕಂಥ ಎಸ್ಟಿಮೇಟುಗಳಲ್ಲಿ ಕೆಲವು ಎಗ್ಸಿಕ್ಯುಟಿವ್ ಇಂಜಿನಿಯರ್‌ಗಳಲ್ಲಿ ನಿಂತಿರುತ್ತವೆ, ಮತ್ತೆ ಕೆಲವು ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರ ಕಛೇರಿಯಲ್ಲಿ ನಿಂತಿರುತ್ತವೆ. ಕೆಲವು ಚೀಫ್ ಇಂಜಿನಿಯರ್ ಅವರ ಕಛೇರಿಯಲ್ಲಿ ಮುಲ್ಕಿ ಬಿದ್ದಿರುತ್ತವೆ. ಹೀಗೆ ಎಲ್ಲೆಲ್ಲಿ ಮುಲ್ಕಿ ಬಿದ್ದಿರುತ್ತವೆಯೋ ಅವುಗಳನ್ನೆಲ್ಲಾ ಬೇಗ ತರಿಸಿಕೊಂಡು ಅವುಗಳ ಅಂದಾಜನ್ನು ಮಂಜೂರುಮಾಡಿ ಈ ವರ್ಷವೇ ಕೆಲಸವನ್ನು ಪ್ರಾರಂಭಿಸಬೇಕೆಂದು ಹೇಳುತ್ತೇನೆ.

ನಾನು ಈಗ ಮತ್ತೊಂದು ವಿಚಾರವನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಭದ್ರಾ ರಿಜರ್ವಾಯಿರ್ ಕೆಲಸವನ್ನು ಈ ಹಿಂದಿದ್ದ ಸರ್ಕಾರದವರು 'go slow' ಪಾಲಿಸಿ ಮೇಲೆ ನಡೆಸಿಕೊಂಡು ಹೋಗುತ್ತಿದ್ದೇವೆ ಎಂದು ಹೇಳುತ್ತಿದ್ದರು. ಹೀಗಾಗಿ ನಮ್ಮ ಚೆನ್ನಗಿರಿ ತಾಲ್ಲೂಕಿಗೆ ಬಹಳ ತೊಂದರೆಯಾಗಿದೆ. ಈಗಾಗಲೇ ಈ ಛಾನಲ್ ಕೆಲಸ ಮುಂದುವರಿಯುತ್ತಾ

(ಶ್ರೀ ಎಲ್. ಸಿದ್ದಪ್ಪ.)

ಬಂದಿದೆ. ನಮ್ಮ ಚೆನ್ನಗಿರಿ ಹತ್ತಿರ ಒಂದು ಟನಲ್ ಹೊಡೆದು ಇದನ್ನು ಚೆನ್ನಗಿರಿಯಿಂದ ಮುಂದಕ್ಕೆ ತೆಗೆದುಕೊಂಡು ಹೋದಮೇಲೆ ಅಲ್ಲಿ ಈ ಛಾನಲ್ ಎರಡು ಭಾಗವಾಗಿ ಒಡೆಯುತ್ತದೆ. ಒಂದು ದಾವಣಗೆರೆ ಬ್ರಾಂಚ್, ಮತ್ತೊಂದು ಮಲೆ ಬೆನ್ನೂರು ಬ್ರಾಂಚ್. ನಮ್ಮ ತಾಲ್ಲೂಕಿನಲ್ಲಿರತಕ್ಕ ಸೂಳೇಕೆರೆಗೆ ಈ ದಾವಣಗೆರೆ ಬ್ರಾಂಚಿನ ಮೂಲಕ ನೀರನ್ನು ಕೊಡಬಹುದು. ಆದರೆ ಈಗ ಅದಕ್ಕೆ ನೀರನ್ನು ಈ ಮಲೆಬೆನ್ನೂರ್ ಬ್ರಾಂಚಿನಿಂದ ಒದಗಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಆ ಸೂಳೆಕೆರೆ ಏರಿಯನ್ನು ಇನ್ನೂ ಸ್ವಲ್ಪ ಎತ್ತರಿಸಬೇಕೆಂದು ಹೇಳುತ್ತಿದ್ದಾರೆ. ಇಂಥ ಒಂದು ಸ್ಕೀಂ ಇದ್ದಂತೆ ನನಗೆ ತಿಳಿದು ಬಂದಿದೆ. ಆದರೆ ಹಾಗೆ ಆ ಕೆರೆಯ ಏರಿಯನ್ನು ಎತ್ತರಿಸಬೇಕಾದದ್ದು ಅನವಶ್ಯಕವೆಂದು ನನಗೆ ತೋರುತ್ತದೆ. ಕಾರಣವೇನೆಂದರೆ ದಾವಣಗೆರೆಗೆ ಹೋಗತಕ್ಕಂಥ ಛಾನಲ್ಲನ್ನು ಸೂಳೆಕೆರೆ ಮುಖಾಂತರವೇ ತೆಗೆದುಕೊಂಡು ಹೋಗಬಹುದು. ಈ ಬಗ್ಗೆ ಸರ್ಕಾರದವರು ಯಾವ ತೀರ್ಮಾನವನ್ನು ಕೈಗೊಂಡಿದ್ದಾರೆಂಬುದು ನಮಗಿನ್ನೂ ನಿರ್ಧಾರವಾಗಿ ತಿಳಿದು ಬಂಟಿಲ್ಲ. ಆದರೆ ತಾವು ಯಾವ ವಿಚಾರವಿದ್ದರೂ ಮೊದಲೇ ಅದನ್ನು ಜನರಿಗೆ ತಿಳಿಸುವುದು ಒಳ್ಳೆಯದು. ಇಲ್ಲದಿದ್ದರೆ ಮುಂದೆ ಜನರಿಗೆ ತುಂಬ ಅನಾನುಕೂಲವಾಗಬಹುದು. ಈಗ ಸೂಳೆಕೆರೆಯ ಸುತ್ತ ಮುತ್ತಲೂ ಅನೇಕ ದೊಡ್ಡ ದೊಡ್ಡ 40 ಗ್ರಾಮಗಳಿವೆ. ಪ್ರತಿಯೊಂದು ಗ್ರಾಮದಲ್ಲೂ 800 ರಿಂದ ಹಿಡಿದು 1,200ರ ವರೆಗೂ ಜನಸಂಖ್ಯೆಯಿದೆ. ತಮಗೆ ಹೀಗಿರುವುದರಿಂದ ತಾವೇನಾದರೂ ಈ ದಿವಸ ಸೂಳೆಕೆರೆಯ ಏರಿಯನ್ನು ಎತ್ತರಿಸುವ ಅಭಿಪ್ರಾಯವಿದ್ದರೆ, ಹಾಗೆ ಅದರಲ್ಲಿ ನೀರನ್ನು ಹೆಚ್ಚಾಗಿ ರಿಜರ್ವ್ ಮಾಡುವ ಹಾಗಿದ್ದರೆ ಈ ವಿಚಾರವನ್ನು ತಾವು ಮೊದಲೇ ಜನರಿಗೆ ತಿಳಿಸುವುದು ಬಹಳ ಉತ್ತಮವಾದದ್ದು. ಅವರು ತಮಗೆ ಬೇರೆ ಎಲ್ಲೆಲ್ಲಿ ಅನುಕೂಲತೆ ಗಳಿರುತ್ತವೆಯೋ ಅಥವಾ ಇಲ್ಲವೋ ಅದನ್ನು ತೀರ್ಮಾನ ಮಾಡಿಕೊಂಡು ಅವರು ಆ ಸ್ಥಳವನ್ನು ಬದಲಾಯಿಸುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳ ಬೇಕಾಗುತ್ತದೆ. ಆದುದರಿಂದ ಸರ್ಕಾರದವರು ಈ ವಿಷಯವನ್ನು ಮುಂಚಿತವಾಗಿಯೇ ತಿಳಿಸುವುದು ಸಕಾರಣವಾಗಿದೆ. ಆದುದರಿಂದ ಈಗಲೇ ಅವರಿಗೆ ತಿಳಿವಳಿಕೆ ಕೊಟ್ಟರೆ ಅವರು ಎಲ್ಲಿಯಾದರೂ ಬೇರೆ ಕಡೆ ಜಮೀನುಗಳನ್ನು ಸಂಪಾದಿಸಿಕೊಂಡು ಅಲ್ಲಿಗೆ ಹೋಗುವುದಕ್ಕೆ ಏರ್ಪಾಡುಮಾಡಿಕೊಳ್ಳುವುದಕ್ಕನುಕೂಲವಾಗುತ್ತದೆ. ಈ ಬಗ್ಗೆ ಕನ್ನಡ ಪತ್ರಿಕೆಗಳಲ್ಲಿ ಆಗಾಗ ಜನರು ಬರೆಯುತ್ತಿದ್ದಾರೆ. ಈ ವಿಚಾರವನ್ನು ಸರ್ಕಾರಕ್ಕೆ ತಿಳಿಸಬೇಕೆಂದು ನಮಗೂ ಅಲ್ಲಿನ ಜನರು ಹೇಳುತ್ತಿದ್ದಾರೆ. ಮೊನ್ನೆ ಸಂಬಂಧಪಟ್ಟ ಮೂರು ನಾಲ್ಕು ಗ್ರಾಮಗಳವರು ಬಂದು 'ಸರ್ಕಾರದವರು ಯಾವ ರೀತಿ ನಿರ್ಧಾರ ಮಾಡಿದ್ದಾರೆ, ಅಲ್ಲಿಂದ ನಾವು ಬಿಟ್ಟುಹೋಗಬೇಕಾದರೆ ತಕ್ಕ ಏರ್ಪಾಡುಮಾಡಿಕೊಳ್ಳಬೇಕು, ಆದಕಾರಣ ಯಾವುದನ್ನೂ ನಮಗೆ ತಿಳಿಸಬೇಕು' ಎಂದು ಹೇಳಿದರು. ಆದುದರಿಂದ ಸಂಬಂಧಪಟ್ಟ ಇಂಜಿನಿಯರಿಂಗ್ ಅಧಿಕಾರಿಗಳಿಂದ ಈ ವಿಷಯವನ್ನು ತಿಳಿದು ಆ ಹಳ್ಳಿಯವರಿಗೆ ನಿರ್ಧಾರವನ್ನು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

*ಶ್ರೀ ಬಿ. ಎಲ್. ಬೋರಣ್ಣಗೌಡ.-ಸ್ವಾಮಿ, ನಾನು ಕಳುಹಿಸಿರತಕ್ಕ ಖೋತಾ ನಿರ್ಣಯವನ್ನು ಸಮರ್ಥಿಸುತ್ತಾ ಒಂದೆರಡು ವಿಷಯಗಳನ್ನು ಹೇಳಲಿಚ್ಛಿಸುತ್ತೇನೆ. ಮಲೆನಾಡಿನಲ್ಲಿ ಕೆಲವು ಕೆರೆಗಳಿವೆ. ಈ ಕೆರೆಗಳ ಅಭಿವೃದ್ಧಿಗಾಗಿ ಸರ್ಕಾರದವರು ಹೋದ ವರ್ಷ ಹಾಸನ ಜಿಲ್ಲೆಗೆ ಆರು ಲಕ್ಷ ರೂಪಾಯಿಗಳನ್ನು ಕೊಟ್ಟರು ; ಬಹಳ ಸಂತೋಷ. ಆದರೆ ಆರು ಲಕ್ಷ ರೂಪಾಯಿ ಕೊಟ್ಟರೂ ಕೂಡ ಕೇವಲ ನೂರು ಕೆರೆಗಳು ರಿಪೇರಿಯಾಗುವುದಕ್ಕೂ ಅವಕಾಶವಾಗಲಿಲ್ಲ. ಹಾಸನ ಜಿಲ್ಲೆ ಕೆರೆಗಳ ತವರೂರೆಂದು ಹೇಳಬಹುದು. ಈ ಜಿಲ್ಲೆಯಲ್ಲಿ ಯಾವ ನಾಲಾ ಪ್ರದೇಶವೂ ಇಲ್ಲ. ಇದ್ದರೂ ಬಹಳ ಸ್ವಲ್ಪ. ಈ ನಾಲಾ ಪ್ರದೇಶದಿಂದ ಹೆಚ್ಚು ನೀರು ಒದಗಿ ಅಷ್ಟಾಗಿ ಅನುಕೂಲವಾಗಿಲ್ಲ. ಚಿಕ್ಕ ಕೆರೆಗಳು ಒಡೆದುಹೋಗಿ ನೀರು ಹೋಗಿ ಅನೇಕ ಸಂದರ್ಭಗಳಲ್ಲಿ ಬಹಳ ತೊಂದರೆಯಾಗಿದೆ. ಇದು ಸರ್ಕಾರದವರ ಗಮನಕ್ಕೆ ಬಂದು, ಆರು ಲಕ್ಷ ರೂಪಾಯಿ ಒದಗಿಸಿದರು. ಆದರೆ ಇದರಿಂದ ನೂರು ಕೆರೆಗಳು ಕೂಡ ರಿಪೇರಿಯಾಗಲಿಲ್ಲ. ಸಾವಿರಾರು ಕೆರೆಗಳಿವೆ. ಇಪ್ಪತ್ತು ಕೆರೆ ಅಚ್ಚುಕಟ್ಟಿರುವ ಕೆರೆಗಳಿವೆ: ಐದೆಕರೆ ಅಚ್ಚುಕಟ್ಟಿರುವ ಕೆರೆಗಳೂ ಇವೆ. ಒಂದೊಂದು ಕೆರೆಗೆ ಐನೂರು ಆರುನೂರು ರೂಪಾಯಿಗಳಂತೆ ಕೊಟ್ಟರೂ ಎಷ್ಟೋ ಕೆರೆಗಳು ಅಭಿವೃದ್ಧಿಯಾಗುತ್ತವೆ. ಬೇರೆ ಜಿಲ್ಲೆಯವರು ಹೆಚ್ಚಿನ ಧನ ಸಹಾಯ ಹೊಂದಿದರು, ದೊಡ್ಡ ದೊಡ್ಡ ಕೆರೆಗಳನ್ನು ಪಡೆದರು ; ಸಂತೋಷ. ಚಿತ್ರದುರ್ಗ ಜಿಲ್ಲೆಗೆ ಕೊಟ್ಟಿರುವುದರ ಹತ್ತನೆಯ ಒಂದು ಭಾಗದಷ್ಟು ಹಣವನ್ನು ಹಾಸನಕ್ಕೆ ಕೊಟ್ಟಿದ್ದರೂ ಎಷ್ಟೋ ಅನುಕೂಲವಾಗುತ್ತಿತ್ತು. 'ಬಾಯುಳ್ಳವರು ಬರದಲ್ಲಿಯೂ ಸಾಯರು' ಎಂದು ಒಂದು ಗಾದೆಯಿದೆ ; ಹಾಗಾಗಿದೆ ಈಗ. ನಮ್ಮ ಜಿಲ್ಲೆಯಲ್ಲಿ ಹೊಸ ಕೆರೆಗಳನ್ನು ಕಟ್ಟಿಸಿ ಎಂದರೆ, ಕಟ್ಟಿಸುವುದಿಲ್ಲ. ಮಂತ್ರಿಗಳನ್ನು ಈ ವಿಚಾರದಲ್ಲಿ ಅನೇಕಸಾರಿ ನೋಡಿದೆವು ; ಪ್ರಯೋಜನವಾಗಲಿಲ್ಲ. ಹತ್ತು ಹದಿನೈದು ಲಕ್ಷ ರೂಪಾಯಿ ಖರ್ಚಾಗುವ ಕೆರೆಗಳು ಒಂದು ಲಕ್ಷ ರೂಪಾಯಿ ಖರ್ಚಿನಲ್ಲಿ ಆಗುತ್ತವೆಂದು ಯಾರೋ ಒಬ್ಬರು ಒಂದು ಸಲಹೆಯನ್ನು ಕೊಟ್ಟರು. ಇದಕ್ಕೆ ಇಂಜಿನಿಯರಿಂಗ್ ಇಲಾಖೆಯವರು ಏನು ಹೇಳಿದರೋ ಗೊತ್ತಿಲ್ಲ. ಈಗ ಅದೇ ಕೆಲಸಕ್ಕೆ ಇಪ್ಪತ್ತು ಇಪ್ಪತ್ತೈದು ಲಕ್ಷ ರೂಪಾಯಿ ಬೇಕಾಗುತ್ತದೆ . . . .

ಶ್ರೀ ಜೆ. ಮಹಮದ್ ಇಮಾಂ.—ಹಾಸನ ಜಿಲ್ಲೆಯಲ್ಲಿ ಎರಡೂವರೆ ಸಾವಿರ ಕೆರೆಗಳಿವೆ, ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಕೇವಲ ಮುನ್ನೂರು ಕೆರೆಗಳಿವೆ !

ಅಧ್ಯಕ್ಷರು.—ಮುನ್ನೂರು ಕೆರೆಗಳಿಗೇ ಇಷ್ಟು ಖರ್ಚು ಮಾಡಿದ್ದಾರೆ!

ಶ್ರೀ ಜೆ. ಮಹಮದ್ ಇಮಾಂ.—ಚಿತ್ರದುರ್ಗ ಜಿಲ್ಲೆಯಲ್ಲಿ ಎರಡೂವರೆ ಸಾವಿರ ಕೆರೆಗಳಾಗುವವರೆಗೆ ಇನ್ನಾವ ಜಿಲ್ಲೆಗೂ ಕೊಡಬಾರದು.

ಶ್ರೀ ಬಿ. ಎಲ್. ಬೋರಣ್ಣಗೌಡ.—ದೇಶದಲ್ಲಿ ಆಹಾರವಿಲ್ಲದೇಇದ್ದಾಗ ಹಾಸನ, ಚಿಕ್ಕಮಗಳೂರು ಜಿಲ್ಲೆಗಳು ಒದಗಿಸದೇಯಿದ್ದಿದ್ದರೆ ಏನು ಗತಿಯಾಗುತ್ತಿತ್ತೆಂಬುದನ್ನು ಯೋಚನೆಮಾಡಬೇಕು. ಅದಕ್ಕೇ ನಾನು ಹೇಳಿದ್ದು—'ಬಾಯಿ ಇದ್ದವರು ಬರದಲ್ಲಿಯೂ ಸಾಯರು' ಎಂದು. ಬಾಯಿ ಇದ್ದವರಿಗೆ ಯಾರಾದರೂ ಅನ್ನ ಕೊಡುತ್ತಾರೆ, ಇವರು ಸುಖವಾಗಿಯೇ ಇರುತ್ತಾರೆ.

ಮೈನರ್ ಕೆರೆಗಳ ಕಾಮಗಾರಿಗೆ ಪ್ರತಿವರ್ಷವೂ ಸರ್ಕಾರದವರು ಹಣ ಕೊಡುತ್ತಿದ್ದಾರೆ, ಸಂತೋಷ. ಆದರೆ ನಮ್ಮ ಹಾಸನ ಜಿಲ್ಲೆಯಲ್ಲಿ ಒಂದು ದೊಡ್ಡ ನೀರಾವರಿ ಯೋಜನೆಯೂ ಕೂಡ ಇಲ್ಲ. ಒಂದು ಲಕ್ಷ ರೂಪಾಯಿ ಖರ್ಚುಮಾಡಿ ಒಂದು ಕೆರೆಯನ್ನು ಕೂಡ ಕಟ್ಟಿಸಿಲ್ಲ. ಈ ವಿಚಾರದಲ್ಲಿ ನಾನೊಂದು ಅಲ್ಪ

ಕಾಲಾವಧಿ ಪ್ರಶ್ನೆಯನ್ನೂ ಕೂಡ ಕಳುಹಿಸಿದ್ದೇನೆ. ಸರ್ಕಾರದವರು ಕಟ್ಟಿಸುತ್ತೇವೆಂದು ಹೇಳಿದರು. ಇಂಜಿನಿಯರಿಂಗ್ ಇಲಾಖೆಯವರು ಬೇಕಾದಷ್ಟು ಅಂದಾಜುಗಳನ್ನು ತಯಾರು ಮಾಡುತ್ತಾರೆ, ಆದರೆ ನಮ್ಮ ಜಿಲ್ಲೆಯ ವಿಚಾರದಲ್ಲಿ ಔದಾರ್ಯವಿಲ್ಲ. ನಮ್ಮ ಜಿಲ್ಲೆಯವರು ಒಂದು ಕಾಸೂ ಬಾಕಿ ನಿಲ್ಲಿಸದೆ ಕಂದಾಯ ವಗೈರೆಗಳನ್ನು ಕೊಡುತ್ತಾರೆ. ನಮ್ಮ ಜಿಲ್ಲೆಯ ಜನ ಜಗಳ ಮಾಡುವವರಲ್ಲ; ಹೇಳಿದುದನ್ನು ಕೇಳಿಕೊಂಡು ಹೋಗುವವರು. ಇದರಿಂದ ನಾವು ಏನು ಕೇಳಿದರೂ ಮಾಡಿಕೊಡಬಾರದೆಂಬ ಮನೋಭಾವ ಸರ್ಕಾರಕ್ಕುಂಟಾಗಿರಬಹುದು. ಇನ್ನು ನಾವು ಮೇಲೆ ಬೀಳುವುದೊಂದು ಬಾಕಿ ಇದೆ, ಅಷ್ಟೆ. ಮಲೆನಾಡಿನ ವಿಷಯವನ್ನು ಎತ್ತಿದರೆ ಎಲ್ಲರೂ ನಮ್ಮ ಕಡೆ ನೋಡುತ್ತಾರೆ! ಮಲೆನಾಡಿನವರ ಪ್ರತಿನಿಧಿಗಳಾಗಿರುವವರು ಎರಡು ಮೂರು ಜನ ಸದಸ್ಯರು. ನಮ್ಮ ಕಷ್ಟವನ್ನು ಹೇಳಿದರೆ, 'ಸುಖವಾಗಿದ್ದೀರಿ' ಎಂದು ಸರ್ಕಾರದವರು ಹೇಳುತ್ತಾರೆ. ಮಲೆನಾಡಿನವರು ಮಂತ್ರಿಗಳಾಗಿದ್ದರೂ ಕೂಡ ಮಲೆನಾಡಿನ ಜನರ ಮೇಲೆ ಅವರಿಗೆ ಅಭಿಮಾನವಿಲ್ಲ! ವಾಸ್ತವವಾಗಿ ನಮಗೆ ಕೆರೆಗಳ ರಿಪೇರಿ ಬಹಳ ಅಗತ್ಯ. ನೀರಾವರಿ ಕಾಮಗಾರಿಗಳಿಗೆ ಹೆಚ್ಚು ಹಣವನ್ನೊದಗಿಸಿ ಮಲೆನಾಡಿನ ಅಭಿವೃದ್ಧಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

*ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ-ಗುಡಿಬಂಡೆ).—ಸ್ವಾಮಿ, ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಈ ಜಿಲ್ಲೆಗಳಲ್ಲಿ ಇಪ್ಪತ್ತು ಇಪ್ಪತ್ತನಾಲ್ಕು ಅಂಗುಲಗಳಮೇಲೆ ಮಳೆ ಬೀಳುವುದಿಲ್ಲ. ಇದನ್ನು ಮನಗಂಡು ಹಣವನ್ನೊದಗಿಸಿದ್ದಾರೆ. ಪ್ರತಿವರ್ಷವೂ ಈ ಜಿಲ್ಲೆಗಳಿಗೆ ಡಿಸ್ಟ್ರೆಸ್ ರಿಲೀಫ್ ವರ್ಕ್ಸ್‌ಗೆ ಹಣವನ್ನೊದಗಿಸುವುದಲ್ಲದೆ ರೆಮಿಷನ್ ಕೂಡ ಕೊಡುತ್ತಿದ್ದರೆ, ನಮಗೆ ಯಾವ ಯೋಜನೆಯೂ ಬೇಡ. ಅಲ್ಲಿ ರಿವರ್ ವ್ಯಾಲಿಗಳೂ ಇಲ್ಲ, ಹೊಳೆಗಳೂ ಇಲ್ಲ. ಒಂದೊಂದು ವರ್ಷ ಕೇವಲ ಐದಾರು ಅಂಗುಲದಷ್ಟು ಮಳೆ ಬೀಳುತ್ತದೆ. ಆ ನೀರು ಕೂಡ ಬೇರೆ ಕಡೆ ಇರುವ ದೊಡ್ಡ ಹೊಳೆಗಳಿಗೆ ಬಂದು ಸೇರಿ ಸಮುದ್ರಕ್ಕೆ ಸೇರುತ್ತದೆ. ನಮ್ಮ ಆ ಜಿಲ್ಲೆಗಳಲ್ಲಿ ನೂರಾರು ವರ್ಷಗಳ ಹಿಂದೆ ಸಾವಿರಾರು ಕೆರೆಗಳನ್ನು ಕಟ್ಟಿಸಿದ್ದಾರೆ. ಈಗ ಸರ್ಕಾರವೇನೂ ಕಟ್ಟಿಸಬೇಕಾಗಿಲ್ಲ; ಕಟ್ಟಿಸುವುದಕ್ಕೆ ಅವರಿಂದ ಆಗುವುದೂ ಇಲ್ಲ. ಹಿಂದಿನವರೇ ಮಾಡಿದ್ದಾರೆ. ಇರುವ ಕೆರೆಗಳೇ ರಿಪೇರಿ ಇಲ್ಲದೆ ಅನ್ಯಾಯವಾಗುತ್ತಿವೆ. ಇವುಗಳನ್ನು ರಿಪೇರಿ ಮಾಡಿಸಿ, ಹೂಳು ತೆಗೆಸಿ, ಇವುಗಳಿಂದ ಖಾತರಿಯಾಗಿ ನೀರು ಒದಗುವಂತೆ ಮಾಡಬೇಕು. ಎಷ್ಟೋ ಕಡೆ ಕೆರೆಗಳು ಎರಡು ಮೂರು ಸಾರಿ ಒಡೆದುಹೋಗಿವೆ. ಒಂದೊಂದು ಕೆರೆಯ ಕೆಳಗೆ ಎಪ್ಪತ್ತು, ಎಂಭತ್ತು ಎಕರೆ ಅಚ್ಚುಕಟ್ಟಿದ್ದು ಎಕರೆಗೆ ಆರರಿಂದ ಎಂಟು ರೂಪಾಯಿವರೆಗೆ ಕಂದಾಯ ಕೊಡುತ್ತಿದ್ದಾರೆ. ಕೆಲವು ಜಮೀನುಗಳಿಗೆ ನೀರು ಕೊಟ್ಟರೆ ವಾಟರ್ ರೇಟ್ ಕೊಡಬೇಕೆಂದು ಹೇಳುತ್ತಾರೆ. ಏನು ಕಾರಣ? ಆ ರೈತರು ನೂರಾರು ವರ್ಷಗಳಿಂದ ಕಂದಾಯ ಕೊಡುತ್ತಿದ್ದಾರೆ, ಆದರೂ ಖಾತರಿಯಾದ ನೀರು ಸರಬರಾಯಿ ಅವರ ಜಮೀನಿಗಿಲ್ಲ. ಮಳೆಯಿಂದ ಕೆರೆ ತುಂಬಬೇಕು, ಹೂತುಹೋಗಿರುವ ಕೆರೆಗಳನ್ನು ಸರಿಮಾಡಿಸಿ ನೀರು ಒದಗುವಂತೆ ಮಾಡಿ ಎಂದು ಕೇಳಿದರೆ, ಅದಕ್ಕೆ ವಾಟರ್ ರೇಟ್ ಕೊಡಿ ಎಂದು ಕೇಳುವುದು ಯಾವ ನ್ಯಾಯ? ನಮ್ಮ ತಾಲ್ಲೂಕಿನ ವಿಷಯವನ್ನು ಹೇಳುವುದಾದರೆ, ಅಲ್ಲಿ ಒಂದೇ ಒಂದು ಕೆರೆ ಇದೆ. ಚಿತ್ರಾವತಿ ಹೊಳೆ ಎಂದು ದೊಡ್ಡ ಹೆಸರು. ಆದರೆ ಅದು ವಿಚಿತ್ರಾವತಿ ಎಂದು ಹೇಳಬಹುದು. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ದೊಡ್ಡ ಅಣೆ ಕಟ್ಟಲು ತಿರುಮಣಿ ಅಣೆಗೊಂದು ಐದು ಲಕ್ಷ ರೂಪಾಯಿ ಒದಗಿಸಿದ್ದಾರೆ. ಈ ಸಂಬಂಧದಲ್ಲಿ ಈ ಸರ್ಕಾರಕ್ಕೂ ಮದರಾಸು ಮತ್ತು ಆಂಧ್ರ ಸರ್ಕಾರಗಳಿಗೂ ಏನು ವ್ಯವಹಾರ ನಡೆಯುತ್ತಿದೆಯೋ ಗೊತ್ತಿಲ್ಲ. ಇದನ್ನು ಕಾರ್ಯಗತ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಯಾವ ರೀತಿ ಮಾತುಕತೆ ವ್ಯವಹಾರ ನಡೆಸುತ್ತಿದ್ದಾರೋ, ಏನು ತಿಳಿದುಕೊಂಡಿದ್ದಾರೋ ಗೊತ್ತಿಲ್ಲ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ತಮ್ಮನ್ನೇ ಕಳುಹಿಸುತ್ತೇವೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಕಳುಹಿಸಿದರೆ ಹೋಗಿಯೇ ಹೋಗುತ್ತೇನೆ; ನಾನು ಈ ಕೆಲಸ ಬಿಟ್ಟಿ ಮಾಡುತ್ತೇನೆ, ನನಗೆ ಏನೂ ಕೊಡಬೇಡಿ, ಮಾಡುತ್ತೇನೆ.

ಒಂದು ವಿಚಾರವನ್ನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ; ಇದನ್ನು ಸಾವಧಾನವಾಗಿ ಯೋಚನೆ ಮಾಡಬೇಕು. ನಮ್ಮ ಸಂಸ್ಥಾನದಲ್ಲಿ ಮಲೆನಾಡು, ಮೈದಾನ ಎಂದಿದೆ. ಮೈದಾನ ಜಿಲ್ಲೆಗಳಾದ ಮೈಸೂರು, ಕೋಲಾರ, ಚಿತ್ರದುರ್ಗ ಜಿಲ್ಲೆಗಳಿಗೂ ಬಹಳ ವ್ಯತ್ಯಾಸವಿದೆ. ನಮ್ಮ ಜಿಲ್ಲೆಯಲ್ಲಿ ಫಲವತ್ತಾದ ಜಮೀನಿದೆ. ಬೇರೆ ಹೆಚ್ಚಿನ ಸಹಾಯ ಕೊಡಬೇಕಾಗಿಲ್ಲ; ಇರುವ ಕೆರೆಗಳನ್ನು ರಿಪೇರಿ ಮಾಡಿ ನೀರು ಒದಗುವಂತೆ ಮಾಡಿದರೆ ಸಾಕು. ನಮ್ಮ ಕಡೆ ಸರಿಯಾದ ಕಣ್ಣಿಂದ ನೋಡಿ . . . .

ಶ್ರೀ ಡಿ. ದೇವರಾಜ ಅರಸ್.—ಕೋಲಾರ ಜಿಲ್ಲೆಗೆ ಜಾಸ್ತಿ ಕೊಡುತ್ತಿದ್ದರೂ ಇನ್ನೂ ಕೇಳುತ್ತಿರುತ್ತಾರೆ!

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಹೆಚ್ಚು ಕೊಡಲೇಬೇಕು, ಅವರಿಗೇಕೆ ಹೊಟ್ಟೆಕಿಚ್ಚು? ನಮ್ಮದು ಗುಡ್ಡಗಾಡು ಪ್ರದೇಶ. ಗುಡ್ಡಗಳ ಮಧ್ಯೆ ಅಣೆ ಕಟ್ಟಿದ್ದಾರೆ. ಪ್ರತಿಯೊಂದು ಕೆರೆಯ ಅಂಗಳದಲ್ಲಿಯೂ ನೀರಿರುತ್ತದೆ. ಪ್ರತಿಯೊಂದು ಕೆರೆಯ ಅಂಗಳದಲ್ಲಿಯೂ ಸರ್ಕಾರದ ಖರ್ಚಿನಿಂದ ಬಾವಿ ತೆಗೆಸಿಕೊಡಬೇಕೆಂದು ಕೇಳುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯ, ವಿದ್ಯುಚ್ಛಕ್ತಿಗೆ ಸಂಬಂಧಪಟ್ಟದ್ದು. ಎಷ್ಟೆಷ್ಟು ಬೇಗ ವಿದ್ಯುಚ್ಛಕ್ತಿಯನ್ನು ಜನರು ಕೇಳಿದರೆ ಅಷ್ಟು ಬೇಗ ಕೊಟ್ಟರೆ ಆಯಾ ಪ್ರದೇಶ ಅಭಿವೃದ್ಧಿಯಾಗುತ್ತದೆ. ಇದೊಂದು national wealth ಎಂದು ತಾವೇ ಹೇಳುತ್ತಿದ್ದರೂ ಸರ್ಕಾರ ಏಕೆ ಬರಿಯ ಹಣದಮೇಲೆ ಕುಳಿತಿದ್ದಾರೋ ಗೊತ್ತಿಲ್ಲ. ಜನರ ಕ್ಷೇಮಕ್ಕಾಗಿ ಮಾಡಬೇಕು. ಹಣ ಬೇಕಾದರೆ ಬೇರೆ ವ್ಯಾಪಾರ ಮಾಡಲಿ. ಲಾಭದಮೇಲಿನ ದೃಷ್ಟಿಯನ್ನು ಬಿಟ್ಟು ಲಕ್ಷಾಂತರ ಪ್ರಜೆಗಳಿಗೆ ಸೌಕರ್ಯ ಮಾಡಿ ಅವರ ಅಭಿವೃದ್ಧಿಯನ್ನು ಸಾಧಿಸಿ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೇ ಸರ್ಕಾರವಿರುವುದು. ಅದು ಬಿಟ್ಟು ಏನೋ ಮಾಡುತ್ತೇವೆ, ಇಂಜಿನಿಯರಿಗೆ ಹೇಳಿದ್ದೇವೆ, ನೋಡೋಣ ಎಂದು ಹೇಳುವುದು ಪ್ರಯೋಜನವಿಲ್ಲದಿರುವ ಮಾತು. ಅದರಲ್ಲಿಯೂ ನಮ್ಮ ತಾಲ್ಲೂಕಿನ ವಿಷಯ ಸರ್ಕಾರದವರ ತಲೆಗೇ ಹತ್ತುವುದಿಲ್ಲ. . . .

ಶ್ರೀ ಕಡಿದಾಳ್ ಮಂಜಪ್ಪ.—ಚೆನ್ನಾಗಿ ಹತ್ತಿದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಹತ್ತಿದ್ದರೂ ಪ್ರಯೋಜನವಿಲ್ಲ. ಕೊನೆಯದಾಗಿ ನಾನು ಇಷ್ಟು ಹೇಳುತ್ತೇನೆ. ಕೆರೆಗಳ ಕೋಡಿಗಳನ್ನೆತ್ತರಿಸುವುದು, ಹೂಳು ತೆಗೆಸುವುದು, ಜೀರ್ಣೋದ್ಧಾರ ಮಾಡುವುದು

(ಶ್ರೀ ಬಿ. ವಿ. ನಾರಾಯಣರೆಡ್ಡಿ.)
ಇಂಥ ಕೆಲಸಗಳನ್ನು ಸರ್ಕಾರದವರು ಮಾಡಿಸುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

3 P.M.

ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—ಸ್ವಾಮಿ, ಶ್ರೀಮಾನ್ ಬೋರಣ್ಣಗೌಡರು ಹೇಳಿದಹಾಗೆ ನಮ್ಮ ಡಿಸ್ಟ್ರಿಕ್ಟ್ ಕೆರೆಗಳ ಜೀರ್ಣೋದ್ಧಾರ, restoration ವಿಷಯದಲ್ಲಿ ಬಹಳ ಉದಾಸೀನ ಮಾಡಲ್ಪಟ್ಟ, ಅಲಕ್ಷಿಸಲ್ಪಟ್ಟ ಡಿಸ್ಟ್ರಿಕ್ಟ್ ಆಗಿದೆ. ಅಕಸ್ಮಾತ್ ಅಲ್ಪ ಸ್ವಲ್ಪ ದುಡ್ಡು ಬಂದರೂ ಕೂಡ ನಮ್ಮ ಶ್ರೀಮಾನ್ ಬೋರಣ್ಣಗೌಡರು ಹೇಳಿದ ಹಾಗೆ ಎಷ್ಟು ಲಕ್ಷ ಬಂದರೂ ಕೂಡ ಏನು ದುರದೃಷ್ಟವೋ ಅರಸೀಕೆರೆ, ಚನ್ನರಾಯಪಟ್ಟಣಗಳಿಗೆ share ಬರುತ್ತಾ ಇಲ್ಲ. ಬಂದದ್ದೂ ಕೂಡ ಮಲೆನಾಡಿಗೆ ಬಂದಿದೆ; ಯಾವಾಗಲೂ ದುಡ್ಡೆಲ್ಲಾ ಆ ಕಡೆಗೇ ಹೋಗುತ್ತಿದೆ. ಇದು ಒಂದು ದೊಡ್ಡ ಕಷ್ಟವಾಗಿದೆ. ನಮ್ಮ ತಾಲ್ಲೂಕು ಮಲೆನಾಡು ಡಿಸ್ಟ್ರಿಕ್ಟಿಗೆ ಸೇರಿದ್ದರೂ ಸಹ ಅದು ಮೈದಾನ ತಾಲ್ಲೂಕಾಗಿ ಪರಿಗಣಿಸಲ್ಪಟ್ಟಿದೆ. ಅದರಲ್ಲೂ ಅರಸೀಕೆರೆ ತಾಲ್ಲೂಕಿನಲ್ಲಿ ರಸ್ತೆಗಳು ತುಂಬ ಕೆಟ್ಟುಹೋದ ಪರಿಸ್ಥಿತಿಯಲ್ಲಿದೆ. ಈ minor tanks, major tanks ಪ್ರಶ್ನೆ ಬಂದಾಗ ಹಿಂದೆ ಆರು ಲಕ್ಷ ರೂಪಾಯಿ quota ಬಂದಾಗ ಕೇವಲ 25 ಸಾವಿರ ರೂಪಾಯಿ ನಮ್ಮ ತಾಲ್ಲೂಕಿಗೆ ಒದಗಿಸಿದರು. ಈ ವಿಷಯದಲ್ಲಿ ಸರ್ಕಾರದವರಿಗೆ, ರೆವೆನ್ಯೂ ಮಂತ್ರಿಗಳು ಅನೇಕಸಾರಿ ಬಂದಾಗ ಈ ರಿಪೇರಿ ವಿಷಯದಲ್ಲಿ ಎಷ್ಟೋ ಪ್ರಾರ್ಥನೆಮಾಡಿಕೊಂಡಾಗಿದೆ, ಅವರ ಗಮನಕ್ಕೆ ತಂದಿದ್ದಾಗಿದೆ. ಪುಣ್ಯವಶಾತ್ ಅವರು ಶಿವಮೊಗ್ಗಕ್ಕೆ ಹೋಗುವಾಗಲೆಲ್ಲ ಅರಸೀಕೆರೆಯಲ್ಲಿ Camp ಮಾಡುತ್ತಾರೆ. ಈ ವಿಷಯದಲ್ಲಿ ಮನಸ್ಸನ್ನು ದೊಡ್ಡದುಮಾಡಿ, ನಮ್ಮ ತಾಲ್ಲೂಕಿನಲ್ಲಿ ಹೆಚ್ಚು ಕಡಿಮೆ minor tanks ಇಲ್ಲದೆಹೋದರೂ ಇರತಕ್ಕ ಕೆರೆಗಳನ್ನು ಜಾಗ್ರತೆ ರಿಪೇರಿ ಮಾಡಿಸಬೇಕು ಎಂದು ನಾನು ಸರ್ಕಾರವನ್ನು ಈ ಮೂಲಕ ಪ್ರಾರ್ಥಿಸುತ್ತೇನೆ.

Mr. SPEAKER.—The House will now adjourn and meet at 3-30.

The House adjourned for Lunch at Two Minutes past Three of the Clock and re-assembled at Thirty-five Minutes past Three of the Clock.

[MR. SPEAKER in the Chair].

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಸ್ವಾಮಿ, ಈ ಸಂಬಂಧದಲ್ಲಿ ಇರುವ ಡಿಮ್ಯಾಂಡನ್ನು ಪುಷ್ಟೀಕರಿಸುತ್ತ ಒಂದೆರಡು ಸಲಹೆ ಗಳನ್ನು ಸರ್ಕಾರಕ್ಕೆ ಕೊಡಬೇಕೆಂದು ಇಚ್ಛೆಪಡುತ್ತೇನೆ.

ಮೈಸೂರು ಸಂಸ್ಥಾನದಲ್ಲಿ ಅನೇಕ ನಮೂನೆಯ ಕಂಟ್ರಾಕ್ಟರುಗಳು ಕೆಲಸಮಾಡುತ್ತಿದ್ದಾರೆ. ಹೊರಗಡೆಯಿಂದಲೂ ಬಂದಿದ್ದಾರೆ, ಮೈಸೂರಿನಲ್ಲಿ ಬಹಳ ವರ್ಷಗಳಿಂದಲೂ ಕೆಲಸಮಾಡುತ್ತಿರುವವರೂ ಇದ್ದಾರೆ. ಇವರಲ್ಲಿ ಅನೇಕರು ಹೊಸಬರು. ಕಂಟ್ರಾಕ್ಟ್ ಕೆಲಸಕ್ಕೆ ಬಂದು ಕೆಲವು ಲೋಪದೋಷಗಳಾಗುತ್ತಿವೆ. ಆದ್ದರಿಂದ ಸರ್ಕಾರದವರು ಕಂಟ್ರಾಕ್ಟರುಗಳನ್ನು A, B, C, ಎಂದು ಗ್ರೇಡುಗಳ ಪ್ರಕಾರ ವಿಂಗಡಿಸಿ ಅವರವರ ದರ್ಜೆಗೆ ತಕ್ಕಂಥ ಕೆಲಸ ಕೊಡುವುದಕ್ಕೆ ಪ್ರಾರಂಭಮಾಡಿದ್ದರೆ ಒಳ್ಳೆಯದು. ಕಾರಣವೇನೆಂದರೆ ಒಬ್ಬನ ಹತ್ತಿರ ಎರಡು ಸಾವಿರ ರೂಪಾಯಿ ಬಂಡವಾಳ ಇರುತ್ತದೆ; ಅಂಥವನು 25 ಸಾವಿರ, ಒಂದು ಲಕ್ಷ ರೂಪಾಯಿ ಆಗತಕ್ಕ ಕೆಲಸಕ್ಕೆ ಟೆಂಡರ್ಸ್ ಹಾಕಿ, ಅನೇಕ ತೊಂದರೆಗಳಿಗೊಳಗಾಗಿ ಕೆಲಸವನ್ನು ಸಮರ್ಪಕವಾಗಿ ಮಾಡುವುದಿಲ್ಲ ಮತ್ತು ಅವನಿಗೆ ಅನುಭವ ಕೂಡ ಇರುವುದಿಲ್ಲ. ಆದುದರಿಂದ ಹಳಬರಾಗಿರತಕ್ಕಂಥವರು ಸಮರ್ಪಕವಾಗಿ ಬಂಡವಾಳವನ್ನು ಇಟ್ಟುಕೊಂಡು ಕೆಲಸಮಾಡುವವರು, ಅಂಥವರನ್ನು, ಒಂದು ಮಟ್ಟದಲ್ಲಿ, ಸಾಧಾರಣವಾಗಿ ಕೆಲಸವನ್ನು ಮಾಡುವವರನ್ನು ಒಂದು ಮಟ್ಟದಲ್ಲಿ, ಹೊಸದಾಗಿ ಬರುವವರನ್ನು ಒಂದು ಮಟ್ಟದಲ್ಲಿ, ಈ ರೀತಿಯಾಗಿ, ಎ, ಬಿ, ಸಿ, ಎಂದು classification ಮಾಡಿ ಕಂಟ್ರಾಕ್ಟರುಗಳನ್ನು ರಿಜಿಸ್ಟರ್ ಮಾಡಿ ಅವರವರಿಗೆ ಸರಿಯಾದ ಕೆಲಸವನ್ನೇ ಒದಗಿಸುವುದರಿಂದ ಸಮರ್ಪಕವಾಗಿ ಕೆಲಸ ನಡೆಯುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಟೆಂಡರುಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಯಾರು ಯಾರು ಟೆಂಡರು ಕೊಟ್ಟಿರುತ್ತಾರೋ ಅವರನ್ನು ಬರಮಾಡಿಕೊಂಡು ಇಂಜನಿಯರುಗಳು ಎಲ್ಲಾ ಟೆಂಡರುಗಳನ್ನೂ ಅವರ ಎದುರಿಗೆ open ಮಾಡಿ quotations ಎಲ್ಲಾ ಕಂಟ್ರಾಕ್ಟರುಗಳಿಗೆ ಓದಿ ಹೇಳಿ ಅನಂತರ ಯಾರು ಕಡಿಮೆ quotation ಕೊಟ್ಟಿರುತ್ತಾರೋ ಅವರಿಗೆ ಕೊಡುವುದು ಸರಿಯಾದ ಮಾರ್ಗ. ಈಗ ಟೆಂಡರುಗಳನ್ನು ಕಂಟ್ರಾಕ್ಟರ್ ಎದುರಿಗೆ ಇಲ್ಲದಿರುವಾಗ open ಮಾಡಿ tamper ಮಾಡುವುದು ಈ ರೀತಿ ನಡೆಯುತ್ತಿದೆಯೆಂದು ತಿಳಿದುಕೊಂಡಿದ್ದೇನೆ. ಹಾಗೆ ಮಾಡುವುದು ಸರಿಯಲ್ಲ. ಕಂಟ್ರಾಕ್ಟರುಗಳ ಎದುರಿಗೆ ಟೆಂಡರುಗಳನ್ನೆಲ್ಲಾ open ಮಾಡಿ ಆ quotations ಎಲ್ಲಾ ಅವರ ಎದುರಿಗೇ ಓದುವುದು ಸರಿಯಾದ ಮಾರ್ಗವೆಂದು ನನ್ನ ಸಲಹೆ.

ಈ ಸಣ್ಣ ಸಣ್ಣ ಪ್ರಾಜೆಕ್ಟುಗಳನ್ನು ಕಟ್ಟುವ ಸಂದರ್ಭದಲ್ಲಿ, Tunga Irrigation Project, Bhadra Irrigation Project Division ಅವರಿಗೆ ಸಣ್ಣ ಪ್ರಾಜೆಕ್ಟುಗಳನ್ನು ಕೂಡ ಕೊಡುವುದು ಸರಿಯಾದ್ದಲ್ಲ. ಆದರೆ ದೊಡ್ಡ ಕೆಲಸವನ್ನು ಮಾಡುವ ಸಂದರ್ಭದಲ್ಲಿ ಈ ಸಣ್ಣ ಕೆಲಸ ಮಾಡುವುದಕ್ಕೆ ಅವರಿಗೆ ಗಮನ ಕಡಿಮೆಯಾಗಿರುತ್ತದೆ. ಆದುದರಿಂದ ಯಾವಾಗಲೂ regular work ಮಾಡುವ Engineering Departmentಗೆ ಈ ಸಣ್ಣ ಸಣ್ಣ ಪ್ರಾಜೆಕ್ಟ್‌ಗಳನ್ನು ಕಟ್ಟುವುದಕ್ಕೆ ಕೊಡುವುದು ಒಳ್ಳೆಯದು. ಕಡಲೆವೊಡ್ಡು ಪ್ರಾಜೆಕ್ಟ್, ಕಟ್ಟುವುದನ್ನು ತುಂಗ ಇರಿಗೇಷನ್ ಪ್ರಾಜೆಕ್ಟ್ ಡಿವಿಜನ್ನಿಗೆ ಸೇರಿಸಿ 12 ವರ್ಷಗಳಾದವು. ಆದರೆ ಅವರು ಅದರ ಕಡೆ ಗಮನಕೊಡದೆ 7-8 ವರ್ಷ ಕಾಲ ಕಳೆಯಿತು. ಆದರೆ regular Public Works Departmentಗೆ ವಹಿಸಿದ್ದರೆ ವಾಸ್ತವವಾಗಿ ಎಸ್ಟಿಮೇಟ್ ವಗ್ಯೆರೆ ಮಾಡಿ 2-3 ವರ್ಷಗಳಲ್ಲಿ ಕೆಲಸ ಮಾಡುತ್ತಿದ್ದರು ಎಂದು ನಿರ್ದಿಷ್ಟವಾಗಿ ಹೇಳುತ್ತೇನೆ.

ಶಿವಮೊಗ್ಗ ತಾಲ್ಲೂಕಿನಲ್ಲಿ ಶೀಗೇಹಳ್ಳ ಪ್ರಾಜೆಕ್ಟ್ 7 ವರ್ಷಕಾಲ ತೆಗೆದುಕೊಂಡು ಕಟ್ಟಿದರೂ, original planನಲ್ಲಿ ಎಷ್ಟು ಎಕರೆ ಸಾಗುವಳಿಯಾಗುತ್ತಿತ್ತೋ ಅಷ್ಟಾಗದೆ ಎಡಗಡೆ ಮತ್ತು ಬಲಗಡೆ ಎರಡು ನಾಲೆಗಳನ್ನು ತೆಗೆದರೆ 4-5 ಸಾವಿರ ಎಕರೆ ಜಮೀನು ಮಾತ್ರ ಸಾಗುವಳಿ ಮಾಡಬಹುದಾಗಿದೆ. ಆಯನೂರು ಕೆರೆ ಕೋಡಿಯನ್ನು $1\frac{1}{2}$ ಅಡಿ ತಗ್ಗಿಸಿ channel

ಮಟ್ಟ ಕಡಿಮೆಮಾಡಿ ತೆಗೆದಿರುವರು. ಅದರಲ್ಲಿ ಇದು ವರೆಗೂ ನೀರು ಮುಂದಕ್ಕೆ ಹೋಗಿಲ್ಲ. ಎಡಗಡೆ channel ತಗೆದುಕೊಳ್ಳಲೇ ಇಲ್ಲ. ಈ ಪ್ರಾಜೆಕ್ಟ್‌ಗೆ ಎಷ್ಟೋ ಜನಗಳಿಂದ ಮುಚ್ಚಳಿಕೆ ಬರೆಸಿಕೊಂಡಿರ ತಕ್ಕಂಥ ಕಾಗದ ಪತ್ರಗಳು ಕೂಡ ಆಫೀಸಿನಲ್ಲಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಮೂರು ವರ್ಷದಿಂದ ಈ ವಿಚಾರ ಹೇಳುತ್ತಿದ್ದೇನೆ. ಒಬ್ಬ overseer ಅದನ್ನು supervise ಮಾಡುವ ಹಾಗೆ ಮಾಡಬೇಕು. ರೈತರು ನೀರನ್ನು ಪೋಲು ಮಾಡುತ್ತಿದ್ದಾರೆ. ಸರಿಯಾದ ರೀತಿಯಲ್ಲಿ ನ್ಯಾಯವಾಗಿ ಉಪಯೋಗವಾಗುತ್ತಿಲ್ಲವೆಂದು ಹೇಳುತ್ತಿದ್ದರೂ ಸಹ ಒಬ್ಬರೂ ಗಮನಕ್ಕೆ ತಗೆದುಕೊಂಡಿಲ್ಲ. ಈ ಪ್ರಾಜೆಕ್ಟ್ ಆದ ಕಾಲದಿಂದ ಕಂದಾಯ ಬರುತ್ತಿಲ್ಲ. ಗೌಡನಕೆರೆಗೆ ಮಳೆಗಾಲದಲ್ಲಿ ಪ್ರಾಜೆಕ್ಟ್ ಇಲ್ಲದೆಯೇ ನೀರು ಬರುತ್ತಿತ್ತು. ಈಗ ಕೆರೆಗಳ ಕೆಳಗೆ ಮಾತ್ರ ವ್ಯವಸಾಯ ವಾಗುತ್ತಿದೆ. ಈಗ ಏಳು ಲಕ್ಷ ರೂಪಾಯಿಗಳು ಖರ್ಚುಮಾಡಿ ಯಾವ ಉಪಯೋಗವೂ ಆಗಿಲ್ಲ. ಸಾಗುವಳಿಗೆ ಹೊಸದಾಗಿ ಒಂದು ಎಕರೆ ಜಮೀನು ಕೂಡ ಬಂದಿಲ್ಲ. ಯಾವರೀತಿ ಕಂದಾಯ ವಸೂಲ್ಮಾಡಬೇಕು ಎನ್ನುವುದರಕಡೆಗೆ ಗಮನ ಕೊಟ್ಟಿಲ್ಲ. ಆದಷ್ಟು ಜಾಗ್ರತೆಯಾಗಿ ಒಬ್ಬ overseerನ್ನು ನೇಮಕ ಮಾಡಬೇಕು. Original planನಲ್ಲಿರುವಂತೆ ಕೆಲಸ ಮಾಡಿಸಿ ನೀರು ಕೊಡುತ್ತೀರೆಂದು ನಂಬಿದ್ದೇನೆ.

ಕಡಲೆವೊಡ್ಡು, ಕಾಗೇಹಳ್ಳ ಇವುಗಳ ಬಗ್ಗೆ ರೈತರು 25 ವರ್ಷಗಳಿಂದಲೂ ಕೆಲಸಮಾಡಿಸಬೇಕೆಂದು ಕೇಳುತ್ತಿದ್ದಾರೆ. ನಾನೂ ಸಹ 2-3 ಸಲ ಈ ವಿಚಾರದಲ್ಲಿ ಪ್ರಶ್ನೆಗಳನ್ನು ಹಾಕಿದ್ದೆ. ಇವೊತ್ತು ಬೆಳಿಗ್ಗೆ ಸಹ ಕೇಳಿದೆ. ಕಾಗೇಹಳ್ಳದಿಂದ ನೀರು ತುಂಗನದಿಗೆ ವರ್ಷಂಪ್ರತಿ ಹರಿದುಹೋಗುತ್ತಿದೆ. ಬೇಸಿಗೆಯಲ್ಲಿಯೂ ನಮಗೆ ನೀರು ಒದಗುವುದು. ನಾಲ್ಕೈದು ಒಡ್ಡುಗಳನ್ನು ರೈತರೇ ಕಟ್ಟಿದ್ದರು. ಅವು ಹಾಳಾಗಿ ಹೋಗಿವೆ. ಸರಿಯಾಗಿ ನೀರು ಒದಗುವುದಿಲ್ಲ. ಕಡಲೇ ಒಡ್ಡು ಒಡೆದುಹೋಗಿ ಮೂವತ್ತು ವರ್ಷಗಳಾದವು. ಇದು ಯಾವ ಕಾರಣದಿಂದ ಪ್ರಾಜೆಕ್ಟ್ ಆಗದೆ ನಿಂತಿದೆಯೋ ಗೊತ್ತಿಲ್ಲ. ಇಂಜಿನಿಯರನ್ನು ಕೇಳಿದರೆ water gauge ಮಾಡಬೇಕಾಗಿದೆ, ಅದನ್ನು study ಮಾಡಬೇಕು ಎಂದು ಹೇಳುತ್ತಾರೆ. ಅದು ಸರಿಯಾದ ಕಾರಣವಲ್ಲವೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಈ ಸುತ್ತಮುತ್ತಲೂ 60-70 ಅಂಗುಲದಷ್ಟು ಮಳೆ ಬಿದ್ದು ನೀರು ಬರುವುದು ಗೊತ್ತಿದ್ದೂ ಸಹ water gauge ಮಾಡಬೇಕು ಎಂದು ಹೇಳುವುದು ಸರಿಯಾದ ಕಾರಣವಲ್ಲವೆಂದು ಹೇಳುತ್ತೇನೆ. ಈ ಪ್ರಾಜೆಕ್ಟ್‌ಗಳನ್ನು ಕಟ್ಟಿದರೆ ಕಾಗೇಹಳ್ಳದಿಂದ ಎರಡು ಸಾವಿರ ಎಕರೆ ಜಮೀನಿಗೂ, ಕಡಲೇವೊಡ್ಡಿನಿಂದ 600 ಎಕರೆ ಜಮೀನಿಗೂ ನೀರಾವರಿಯಾಗುತ್ತದೆ. ಇದನ್ನು ಆದಷ್ಟು ಬೇಗ ಕೈಗೊಂಡು ಈ ಕೆಲಸವನ್ನು ಮಾಡಬೇಕು ಎಂದು ಹೇಳುತ್ತೇನೆ.

ಇಂಜನಿಯರಿಂಗ್ ಇಲಾಖೆಯಲ್ಲಿ ಒಂದೆರಡು ಲೋಪದೋಷಗಳಿದ್ದರೂ ಕೂಡ ಬಹಳ ಸಮರ್ಪಕವಾಗಿ ಕೆಲಸಗಳನ್ನು ಮಾಡುತ್ತಿದ್ದಾರೆ. ಕೆಲವು ಅಧಿಕಾರಿಗಳು ಈ cement proportion ಉಪಯೋಗಿಸುವುದರಲ್ಲಿ ಬಹಳ ಹೆಚ್ಚು ಕಡಿಮೆಮಾಡಿ ಕೆಲಸ ಸಮರ್ಪಕವಾಗಿಲ್ಲದ ರೀತಿಯಲ್ಲಿ ಮಾಡುತ್ತಿದ್ದಾರೆ. ಅದನ್ನು ಸರಿಯಾದ ರೀತಿಯಲ್ಲಿ ಮಾಡುವಂತೆ ಮೇಲ್ಪಟ್ಟವರು ನಿಗಾ ತೆಗೆದುಕೊಳ್ಳಬೇಕೆಂದು ನನ್ನ ಸಲಹೆ.

ಶೀಗೇಹಳ್ಳದಿಂದ ನೀರು ಸವಳಂಗ ಕೆರೆಗೆ ಹೋಗಿ ಅಲ್ಲಿಂದ ಮುಂದಕ್ಕೆ ಹರಿದು ಹೋಗುತ್ತದೆ. ಅಲ್ಲಿ ರಾಮನಗರ ಎಂಬ ಒಂದು ಗ್ರಾಮದ ಬಳಿ ಅಮ್ಮನ ಕೆರೆಗೆ ನೀರು ಹೋಗುವಂತೆ ಕಾಲುವೆ ಮಾಡಿದರೆ ಸುಮಾರು ನಾಲ್ಕು ನೂರು ಎಕರೆಗಳಷ್ಟು ಜಮೀನು ಸಾಗುವಳಿಗೆ ಬರುತ್ತದೆ. ಇದನ್ನು ಮಾಡಿದರೆ ಅಲ್ಲಿರತಕ್ಕ ಬಂಜರು ಜಮೀನೆಲ್ಲ ಸಾಗುವಳಿಗೆ ಬಂದು ಅದರಿಂದ ಅನುಕೂಲವಾಗುತ್ತದೆಂದು ಹೇಳುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).– ಸ್ವಾಮಿ, ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ದಯವಿಟ್ಟು Facts About Mysore Public Works ಎಂಬ ಪುಸ್ತಕವನ್ನು ನೋಡಬೇಕು. ಏಕೆಂದರೆ, ಚಾಮರಾಜ ನಗರ ತಾಲ್ಲೂಕಿನಲ್ಲಿ map showing the feeder channel system in Suvarnavathi valley : ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಎಷ್ಟು ಸೊಗಸಾದ channel system ಇದೆ, ಇದರಿಂದ ಆಗತಕ್ಕ ಪ್ರಯೋಜನವೇನು ಎನ್ನುವುದನ್ನು ಈ ಪುಸ್ತಕದಲ್ಲಿ ಕೊಟ್ಟಿದೆ. ಇದರಲ್ಲಿ map ಸಹ ಇದೆ. ಆದರೆ ಅದು ಪುಸ್ತಕದಲ್ಲಿ ಮಾತ್ರ ಬರವಣಿಗೆಯಾಗಿದೆ. ಅದು ಉತ್ತಮಸ್ಥಿತಿಗೆ ಬರಲು ಕಾರ್ಯತಃ ಮಾಡಬೇಕು ಎಂದು ತಮ್ಮ ಗಮನಕ್ಕೆ ತರುವುದಕ್ಕಾಗಿ ತಮ್ಮ ಮುಂದೆ ಈ ದಿವಸ ಎದ್ದುನಿಂತಿದ್ದೇನೆ.

> "Feeder channels drawn from streams to augment supplies to major tanks have been an asset of no small value. A very fine system of such feeders could be seen in Chamarajanagar and Yelandur taluks where most of the big tanks in the area are served by channels drawn from the Suvarnavathi River and its tributaries."

ಇಲ್ಲಿ ಸುಮಾರು 20-30 ಕೆರೆಗಳು ಒಂದು ಕೆರೆಯಿಂದ ಮತ್ತೊಂದು ಕೆರೆಗೆ chain ರೂಪದಲ್ಲಿವೆ. ಎಷ್ಟೋ ಪ್ರಾಜೆಕ್ಟ್‌ಗಳನ್ನು ತಯಾರಿಸಿ ಸುಮಾರು ಒಂದು ವರ್ಷದಿಂದ ಇಲ್ಲಿಯವರೆಗೆ ಯಾವುದನ್ನೂ ತೆಗೆದುಕೊಳ್ಳದೇ ಇದ್ದರೂ ಸಹ ನಮ್ಮಗಳ ಸ್ವಪ್ರಯತ್ನದಿಂದ ಸಂಬಂಧಪಟ್ಟ ಅಧಿಕಾರಿಗಳು ಇತ್ತೀಚೆಗೆ ಕೆಲವು ಎಸ್ಟಿಮೇಟುಗಳನ್ನು ತಯಾರುಮಾಡಿ ಕಳುಹಿಸುತ್ತಿದ್ದಾರೆ. ಆದರೆ ಇಲಾಖೆಯಲ್ಲಿ ಏನಾದರೂ ಲೋಪದೋಷಗಳಿವೆಯೋ ಏನೋ ಗೊತ್ತಿಲ್ಲ. ಎಷ್ಟು ಜಾಗ್ರತೆಯಾಗಿ ಅವರು ಕಳುಹಿಸಿದರೂ ಸಹ ಸರ್ಕಾರಕ್ಕೆ ಬಂದು ತಲಪುವುದೇ ಕಷ್ಟ. ಕೆಲವು technical difficulties ಇವೆ, scrutiny ಆಗಬೇಕು ಎಂದು ಹೇಳುತ್ತಾರೆ. ಅದಿರಬಹುದು.

ಆದರೆ ವರ್ಷಾನುಗಟ್ಟಲೆ ಈ ರೀತಿ ತಡವಾದರೆ ಜಾಗ್ರತೆಯಾಗಿ ಯಾವ development ಕೆಲಸವನ್ನೂ ಸಹ ಮಾಡುವುದಕ್ಕಾಗುವುದಿಲ್ಲ. ಈಗಾಗಲೇ ಈ ಸಂಬಂಧವಾಗಿ ಸುಮಾರು 4 ಕೆರೆಗಳ ಪ್ರಾಜೆಕ್ಟ್‌ಗಳು ಬಂದಿವೆ. ಅಂತಹ ಕೆರೆಗಳ ಪ್ರಾಜೆಕ್ಟ್‌ಗಳು ಬಂದರೂ ಇನ್ನೂ scrutiny ಯಲ್ಲಿವೆ ಎಂದು ನನ್ನ interpellationಗೆ ಉತ್ತರ ಕೊಟ್ಟಿದ್ದಾರೆ. ಜಾಗ್ರತೆಯಾಗಿ sanction ಮಾಡುವ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಅಲ್ಲದೆ ನಮ್ಮ ತಾಲ್ಲೂಕಿನಲ್ಲಿ ಇನ್ನೊಂದು ಪದ್ಧತಿ ಇದೆ. ಒಂದು ದೇವಸ್ಥಾನಕ್ಕೆ ಸಂಬಂಧಪಟ್ಟ ಕೆಲವು ಗ್ರಾಮಗಳಿವೆ. ಉಮ್ಮತ್ತೂರು ಹೋಬಳಿಯಲ್ಲಿ ಸುಮಾರು 40-50 ಗ್ರಾಮಗಳು ಈ ರೀತಿ ಇವೆ.

(ಶ್ರೀ ಯು. ಎಂ. ಮಾದಪ್ಪ.)

ಒಟ್ಟಿನಲ್ಲಿ ಚಾಮರಾಜನಗರ ತಾಲ್ಲೂಕು ಎಂದರೆ ಮೂರನೆ ಎರಡು ಭಾಗದಷ್ಟು ಜೋಡಿ ಗ್ರಾಮಗಳು ಮತ್ತು ಚಾಮರಾಜೇಶ್ವರ ದೇವಸ್ಥಾನಕ್ಕೆ ಸೇರಿದ ಗ್ರಾಮಗಳು ಹೀಗಿರುವಾಗ ಕೆಲವು ಪ್ರಾಜೆಕ್ಟ್‌ಗಳನ್ನು ಅಧಿಕಾರಿಗಳ ಗಮನಕ್ಕೆ ತಂದರೂ ಸಹ ಇನಾಂ ಗ್ರಾಮಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ತಕರಾರು ಹಾಕುತ್ತಾರೆ ಮತ್ತು ಕೆಲವು ಸಂದರ್ಭಗಳಲ್ಲಿ ಇವು ದೇವಸ್ಥಾನಕ್ಕೆ ಸೇರಿದವು, ಆದ್ದರಿಂದ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಹೀಗಾಗಿ ಬಹಳ ವರ್ಷಗಳಿಂದ ಈ ಕೆರೆಗಳು ಉನ್ನತ ಸ್ಥಿತಿಗೆ ಬರುವುದಕ್ಕೆ ಅವಕಾಶವಿಲ್ಲದೆ ಇದೆ. ಈಗಾಗಲೇ personal inams ತಮ್ಮ ವಶಕ್ಕೆ ಬರುವ ಸಂದರ್ಭ ಬಂದಿದೆ. ಈ ಸಂದರ್ಭದಲ್ಲಿ ಕಣ್ಣೇಗಾಲದ ಕೆರೆ, ಉಮ್ಮತ್ತೂರು ಕೆರೆ ಇವು ತಮ್ಮ ಅವಗಾಹನೆಗೆ ಬರುತ್ತದೆ. ಈ ಕೆರೆಗಳು ಚಾಮರಾಜೇಶ್ವರ ದೇವಸ್ಥಾನಕ್ಕೆ ಸೇರಿದುವಾಗಿವೆ. ಇವು ತಮ್ಮ ಹದ್ದುಬಸ್ತಿನಲ್ಲಿಲ್ಲದೆ ಹೋದರೂ ಸಹ ಈ ಕೆರೆಗಳ ರಿಪೇರಿ ಮಾಡಿಸುವುದಕ್ಕೆ ಅವಕಾಶವಿದೆ ಎಂದು ಹೇಳ ಬಯಸುತ್ತೇನೆ. ಇದರಿಂದ ಈ ವ್ಯವಸಾಯಗಾರರಿಗೆ ಎಷ್ಟು ತೊಂದರೆಯಾಗಿದೆ ಎಂದರೆ ಒಂದು ಸಾರಿ ತುಂಬಿದ ನೀರು ಒಂದು ಬೆಳೆಗೆ ಸಹ ಸಾಲದಾಗಿದೆ. ಕಾರಣವೇನೆಂದರೆ ಹಿಂದೆ ಅವುಗಳ capacity ಎಷ್ಟಿತ್ತೋ ಅಷ್ಟು ಈಗ ಇಲ್ಲ. ಕೆರೆಗಳಲ್ಲಿ capacity ಕಡಮೆಯಾಗಿದೆ. ಆದ್ದರಿಂದ wasteweir level ಹೆಚ್ಚಿಸಬೇಕು ಎಂದು ಎಷ್ಟೋ ಸಾರಿ ಸರ್ಕಾರದ ಗಮನಕ್ಕೆ ತಂದರೂ ಸಹ ಅದನ್ನು ಮಾಡಿಲ್ಲ. ಜಾಗ್ರತೆಯಾಗಿ ಈ ಕೆಲಸವನ್ನು ಮಾಡದೆ ಹೋದಪಕ್ಷದಲ್ಲಿ ಸಾವಿರಾರು ಎಕರೆಗಳಿಂದ ಬರತಕ್ಕ ಬೆಳೆಯನ್ನು ಕಳೆದು ಕೊಂಡ ಹಾಗಾಗುತ್ತದೆಂದು ಹೇಳುತ್ತೇನೆ.

(Sri Mulka Govinda Reddy rose.)

Mr. SPEAKER.—Since there are many Hon'ble Members who are desirous of speaking, I have no objection to extend the time limit till 5-30 p.m., because there is no time limit today and only on the last day I want to put the guillotine.

***Sri Mulka GOVINDA REDDY** (Chitaldrug).—Sir, this Public Works Department is the largest spending department in the State. Irrigation is absolutely necessary for increasing production. Some of the projects that have been undertaken by the Government are multi-purpose projects and they will have multiplying effects on the State in other fields. Under the low level canal of the Thungabhadra Dam, about 93,000 acres in the Bellary District are expected to be irrigated. But we find that only 1,000 acres of land have been brought under cultivation.

Mr. SPEAKER.—That has been referred to by Sri Imam.

Sri Mulka GOVINDA REDDY.—I would like to bring to the notice of the Government that in Hyderabad, the Hyderabad Government has secured 50 lakhs of rupees Central Assistance from the Government of India for bringing the entire ayacut in the Hyderabad area under cultivation.

Mr. SPEAKER.—Is it a grant or a loan?

Sri Mulka GOVINDA REDDY.—'Assistance', it is stated. I do not know whether it is loan or outright grant. Whether it is loan or grant, it is absolutely necessary that some such effort should be made by the Government of Mysore to see that this entire area is brought under cultivation. In this connection, I would also like to urge that the high level canal under the Thungabhadra Project should be taken up at the earliest.

Sir, Sri Imam has pointedly drawn the attention of the Government to the inordinate delay caused in executing these projects. The Government of India had deputed a Commission to China headed by Sri Kunwar Sen, Chairman and Dr. K. L. Rao of the Central Water, Power and Irrigation Commission and they have submitted their report to the Government of India wherein it is mentioned how and in what manner projects in China have been executed in the shortest period and with maximum effect. There they have said, Sir, that in about 80 days the entire length of 100 miles of canal involving 247 crores cft. of earthwork was completed.

Mr. SPEAKER.—Not by the Department, but by the people.

Sri G. SIVAPPA (Holalkere).—There it is forced labour.

Sri Mulka GOVINDA REDDY.—Whether it is forced labour or free labour or voluntary labour, I would urge upon the Government to enthuse the people and to see that such work is taken up and maximum benefit is accrued to the people. Sir, there is considerable force in the contention of Mr. Mascarenhas regarding the minor and major tanks. There the effect will be dispersed. The benefit will go to the larger sections of people and it will

be in a way decentralised. Under one big project, the particular area is going to be benefited and people living in that area will be benefited. But if we pay attention to these minor and major tanks, which are distributed throughout the State, the benefit will go to the people in all the areas. There are 22,580 major and minor tanks in Mysore State and an area of 6,79,014 acres are being irrigated by these tanks. On some other occasion, the Hon'ble the Minister is reported to have said that one-third of these tanks have been restored and the remaining number of tanks are not restored. I would earnestly urge the Government to see that steps should be taken to see that all these tanks are restored and the benefit accrued to the people.

Sri Boranna Gowda was making a remark that in Chitaldrug, a number of tanks have been taken up. Sir, I may say that in Chitaldrug the average rainfall is about 20 inches per year, but in Hassan and Shimoga and other malnad areas, it is varying from 150 to 360 inches per annum. There are some areas in Shimoga—Honnali and Channagiri taluks which are as bad as Chitaldrug District, I agree. But there are malnad areas which get a rainfall from 150 to 360 inches.

Mr. SPEAKER.—It varies from 50 to 350.

Sri Mulka GOVINDA REDDY.—Yes, Sir, nature is bountiful to these areas and therefore, where areas are visited with famine, pestilence and scarcity, more attention should be paid by the Government to develop such areas. I would like to bring to the notice of the Hon'ble the Minister that in Hassan District, there are 3,841 major and minor tanks irrigating about 1,47,762 acres. In Shimoga District, there are 8,025 major and minor tanks irrigating 1,76,732 acres. In Chitaldrug District, there are 350 major and minor thanks irrigating 23,209 acres. You can see from this table that Chitaldrug has got the lowest number of tanks and the lowest number of acres irrigated by these tanks.

Sri D. DEVARAJ URS.—Shall we stop the work of Bhadra Project then?

Sri Mulka GOVINDA REDDY.—I am not for a moment suggesting that the work of Bhadra should stop at the present level. My only anxiety is that these works should be completed at the earliest to the benefit of the people. These major and minor tanks should not be neglected. These tanks were probably built, as my friend Sri Narayana Reddy said, by the co-operation of labour of the village community and we must make full use of these tanks. What is the meaning of not making use of these tanks for the benefit of the people and of the nation? I do not know whether the Government of Mysore have investigated into it. It may be due to forced labour or voluntary labour that these tanks are brought into existence and we must take maximum advantage of these tanks.

Sir, in Mysore State, in all 1,11,084 acres of land are irrigated by wells. There is no comprehensive plan prepared and executed by the Government of Mysore to bring more lands under cultivation to be irrigated by these wells. When Sri L. Siddappa was the Minister in charge of Public Works portfolio, he was good enough to bring into effect a plan for construction of new wells and repair of old wells by a method of subsidy by Government and the present Government has also been continuing that policy no doubt. But the measure and method in which that policy has been continuing is not satisfactory.

Mr. SPEAKER.—Subsidising irrigation wells does not come under this.

Sri Mulka GOVINDA REDDY.—It comes in this way, Sir. It may not be possible to bring as much land as possible to be irrigated by wells if we leave it to the agriculturists themselves to take some financial help from Government either by way of loan or by way of subsidy to construct new wells and bring the land under cultivation. On the other hand, as they have undertaken these major projects, they should also prepare a comprehensive scheme for constructing wells in places where there is scarcity of rainfall and wherever the water-table will not be very deep, it will be easy for

(SRI MULKA GOVINDA REDDY.)

the Government to undertake construction of these wells and supply water for irrigation purposes. Sir, one Dr. Voclekon, an eminent scientist who conducted a survey of the effect of water used from the canals as distinguished from wells has stated :

> "that the analysis shows that whilst the canal water contains 15 solid constituents per gallon of water, well water contains 82 grains and was found to be rich in soda, nitrates, chlorides and sulphates."

I understand that it is further stated that the yield per acre irrigated by the well water will be much more than the yield per acre irrigated by the canal water. For scarcity areas like Chitaldrug, Kolar, Tumkur, Bellary and some parts of Shimoga District, Government should undertake to prepare a scheme whereby the Government themselves through their own agency construct these wells and bring larger areas under cultivation.

The Famine Enquiry Commission which was appointed in 1945 endorsed the urgency of measures for the development of well irrigation by Government assistance in the shape of loans and grants and technical advice on sinking wells. The Comission also stressed the necessity of improving and constructing tanks and sinking tube wells. I would urge the Government to undertake the construction of these wells through their own agency. The Planning Commission has also stated that irrigation by wells should be undertaken wherever there are scarcity areas. I would therefore urge the Government to prepare such a scheme and see that this benefit accrues to the villagers.

Thank you, Sir.

*ಶ್ರೀ ಬಿ. ರಾಚಯ್ಯ (ಯಳಂದೂರು-ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ಮುಂದೆ ಇರತಕ್ಕಂಥ ಈ ನೀರಾವರಿ ಇಲಾಖೆಗೆ ಸಂಬಂಧಪಟ್ಟಂಥ ಡಿಮ್ಯಾಂಡಿನಮೇಲೆ ಮಾತನಾಡುತ್ತಾ ಕೆಲವು ವಿಷಯಗಳನ್ನು ಸರ್ಕಾರದವರಿಗೆ ತಿಳಿಸಬೇಕಾಗಿದೆ. ಸರ್ಕಾರದವರು ನಂಜನಗೂಡು ಸಬ್-ಡಿವಿಜನ್ ಎಂದು ಹೇಳಿ ಒಂದು ಸಬ್-ಡಿವಿಜನ್ ಸ್ಥಾಪನೆಮಾಡಿದ್ದಾರೆ. ಆ ನಂಜನಗೂಡು ಸಬ್-ಡಿವಿಜನ್‌ನಲ್ಲಿ ಈ ವರ್ಷ, ಕಳೆದ ಸಾಲಿನಲ್ಲಿ ಮತ್ತು ಅದರ ಹಿಂದಿನ ಸಾಲಿನಲ್ಲಿ ಎಷ್ಟು ಕೆರೆಗಳನ್ನು ಜೀರ್ಣೋದ್ಧಾರ ಮಾಡಿದರು ಮತ್ತು ರಿಪೇರಿ ಮಾಡಿದರು ಎಂಬುದನ್ನು ನೋಡಿದರೆ ಈ ಬಡ್ಜೆಟ್‌ನಲ್ಲಿ ಏನೂ ಇಲ್ಲ. ನಾನು ಎಲ್ಲಾ ಕಡೆಯೂ ಹುಡುಕಿದೆ. ನನಗೆ ಎಲ್ಲೂ ಸಿಕ್ಕಲೇ ಇಲ್ಲ. ಸುವರ್ಣಾವತಿಯ ವ್ಯಾಲಿಯಲ್ಲಿ ಸುಮಾರು 13½ ಸಾವಿರ ಎಕರೆ ಜಮೀನು ನೀರಾವರಿ ಸಾಗುವಳಿಯಲ್ಲಿ ಇದೆ. ಅಲ್ಲಿ ಕೆಲವು ಕಾಲುವೆಗಳಿಂದ, ಕೆರೆಗೆ ನೀರನ್ನು ಒದಗಿಸತಕ್ಕ ಪದ್ಧತಿ ಬಹು ಚೆನ್ನಾಗಿದೆ. ಇದುವರೆಗೂ ಕೂಡ ಆ ಕಾಲುವೆಗಳಿಗೆ ಅಡ್ಡಲಾಗಿ ಒಂದೊಂದು ಸಣ್ಣ ಸಣ್ಣ brushwood ಅಣೆಕಟ್ಟು ಕಟ್ಟಿಸಬೇಕೆಂದು ಆಗಾಗ್ಗೆ ಪ್ರತಿನಿಧಿಗಳಾಗಿರತಕ್ಕ ನಾವು ಮತ್ತು ರೈತರೂ ಕೂಡ ಸರ್ಕಾರದವರಿಗೆ ಮನವಿಮಾಡಿಕೊಂಡರೂ ಇನ್ನೂ ಆ ಅಣೆಕಟ್ಟುಗಳನ್ನು ಕಟ್ಟಿಸಿಲ್ಲ. ಪ್ರವಾಹ ಕಾಲದಲ್ಲಿ ಮತ್ತು ಹೆಚ್ಚಾಗಿ ನೀರುಬಂದಾಗ, ಕೆರೆಗಳಿಗೆ ನೀರು ತುಂಬಿಸಬೇಕಾಗಿದ್ದರೆ ರೈತರು ಹೋಗಿ ಮರಗಳ ದಿಮ್ಮಿಗಳಿಂದ ಒಡ್ಡು ಕಟ್ಟುತ್ತಾರೆ. ಹೆಚ್ಚು ಪ್ರವಾಹ ಬಂದಾಗ ಒಡ್ಡು ಒಡೆದುಹೋಗಿ ಕೆರೆಗೆ ನೀರು ತುಂಬುವುದಿಲ್ಲ. ಸರ್ಕಾರದವರನ್ನು ಕೇಳಿದರೆ ಮದರಾಸಿಗೂ ನಮಗೂ 1926ರಲ್ಲಿ ಒಪ್ಪಂದ ಆಗಿದೆ. ಅದರ ಪ್ರಕಾರ ಅಡ್ಡಲಾಗಿ ಅಣೆಕಟ್ಟು ಕಟ್ಟುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಆದರೆ ನಾವು ಕೇಳತಕ್ಕ ಅಣೆಕಟ್ಟು ಬೆಡ್‌ಲೆವಲ್‌ನಲ್ಲಿ ಕಟ್ಟಬೇಕು. ಅದಕ್ಕೆ ಒಂದೊಂದು ಅಣೆಕಟ್ಟಿಗೆ 20 ಸಾವಿರ ರೂಪಾಯಿ ಆಗುತ್ತವೆ. ಒಂದು ಚಾನಲ್‌ಗೆ 20 ಸಾವಿರ ರೂಪಾಯಿ ಖರ್ಚು ಮಾಡಿದರೆ 1½ ಸಾವಿರ ಎಕರೆಗೆ ನೀರು ಸಾಗುವಳಿಗೆ ಸುಲಭವಾಗಿ ದೊರೆಯುವುದಕ್ಕೆ ಅವಕಾಶವಾಗುತ್ತದೆ. ಆ ದೃಷ್ಟಿಯಿಂದ ಈಗ ಮೂರು ವರ್ಷಗಳಿಂದಲೂ ಕೇಳುತ್ತ ಇದ್ದೇವೆ; ಇನ್ನೂ ಮಾಡಿಸಿಲ್ಲ. ಸುವರ್ಣಾವತಿ ನದಿ, ಚಾಮರಾಜನಗರ, ಯಳಂದೂರು ಈ ಎರಡು ಭಾಗಗಳಲ್ಲೂ ಹರಿಯುತ್ತಾ ಇದೆ. ಯಳಂದೂರು ಭಾಗ ಜಮೀನ್‌ದಾರರಿಗೆ ಸಂಬಂಧಪಟ್ಟಿದ್ದರಿಂದ ಸರ್ಕಾರದವರು ಕೈಹಾಕುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಅಧಿಕಾರಕ್ಕೆ ಬಂದಮೇಲೆ ಯಳಂದೂರು ಜಹಗೀರಿಯಿಂದ 1½ ಲಕ್ಷ ರೂಪಾಯಿ ಕೊಡಿಸಿ ಅಲ್ಲಿ ಕೆರೆಗಳು ಮತ್ತಿತ್ತರ ಕೆಲಸಕಾರ್ಯಗಳನ್ನು ಮಾಡಿಸುವುದಕ್ಕೆ ಒಂದು ದೊಡ್ಡ ಸ್ಕೀಮನ್ನೇ ತಯಾರುಮಾಡಿಸಿದರು. ಆ ಸ್ಕೀಂನಲ್ಲಿ 76 ಸಾವಿರ ರೂಪಾಯಿ ಸಿಬ್ಬಂದಿಗೆ ಖರ್ಚುಮಾಡಿದ್ದಾಯಿತು. ಇನ್ನು ಉಳಿದ 74 ಸಾವಿರ ರೂಪಾಯಿಗಳನ್ನು ಸಣ್ಣ ಕೆರೆಗಳಿಗೆ ಕೊಟ್ಟಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಅಷ್ಟು ಖರ್ಚಾಗಿಲ್ಲ. There is only a sub-division there.

4 P.M.

ಶ್ರೀ ಬಿ. ರಾಚಯ್ಯ.—ಇಷ್ಟಾಗಿದೆಯೆಂದು ಕೇಳಿದೆ. ಆದರೆ ಈಗ ಆ ಸಬ್‌ಡಿವಿಜನ್ ಮುಚ್ಚಿಬಿಡಿ ಎಂದು ತಾಲ್ಲೂಕು ಕಾಂಗ್ರೆಸ್ ಸಮಿತಿಯವರು ಬರೆದಿದ್ದಾರೆ. ಅಲ್ಲಿ 33 ಕೆರೆಗಳಿವೆ, 4 ಮೇಜರ್ ಛಾನಲ್‌ಗಳಿವೆ. ಈ ಅಂದಾಜನ್ನು ಸ್ಯಾಂಕ್ಷನ್ ಮಾಡುತ್ತೇವೆ, 9 ಲಕ್ಷದ ಯೋಜನೆಯಲ್ಲಿ ⅔ ಭಾಗ ಹಣ ಕೊಡಿ ಎಂದು ಹೇಳುತ್ತಿದ್ದಾರೆ. ಸರ್ಕಾರದವರು ಜಹಗೀರಿ ಫಂಡನ್ನಾದರೂ ಉಪಯೋಗಿಸಿದರೆ ಎಷ್ಟೋ ಸಹಾಯವಾಗುತ್ತದೆ. ರೈತರಿಗೆ ತೊಂದರೆಯಾಗಿದೆ. ಈಗ ಏನಾದರೂ ಮಾಡಿ ಮಂಜೂರು ಮಾಡಿ ರೈತರಿಗೆ ಹೆಚ್ಚು ಹಣಕೊಡಬೇಕು. ಮುನಿಸಿಪಲ್ ಲಿಮಿಟ್ಟಿನಲ್ಲಿ

ಹಳ್ಳ ಹರಿಯುವುದರಿಂದ ಊರನ್ನು ಬೇರ್ಪಡಿಸುತ್ತದೆ. ಅದಕ್ಕೆ ಬ್ರಷ್‌ವುಡ್ ಅಣೆಕಟ್ಟನ್ನು ಕಟ್ಟಿಸಬೇಕು. ಚಾಮರಾಜನಗರ ಮತ್ತು ಎಳಂದೂರು ಗ್ರಾಮಗಳಲ್ಲಿ ಡೀಸಿಲ್ಟಿಂಗ್ ಮಾಡಿಸಿಕೊಡಬೇಕು. ಎಳಂದೂರು ಜಹಗೀರಿ ಫಂಡಿನಿಂದ ಹೆಚ್ಚು ಹಣಕೊಡಿಸಲು ಪ್ರಯತ್ನ ಮಾಡಬೇಕು ಎಂದು ಮನವಿಮಾಡುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ (ಯಳಂದೂರು).—ಎಳಂದೂರು ತಾಲ್ಲೂಕಿನಲ್ಲಿ ಸುಮಾರು 22 ಕೆರೆಗಳಿವೆ. ಆ ಪೈಕಿ 5 ಮೇಜರ್ ಕೆರೆಗಳು, 17 ಮೈನರ್ ಕೆರೆಗಳು. ಈ 22 ಕೆರೆಗಳಿಂದ ನೀರಾವರಿಯಾಗುವ ಒಟ್ಟು ಅಚ್ಚುಕಟ್ಟು ಸುಮಾರು 7,500 ಎಕರೆಗಳು. ಅವು ಸುವರ್ಣಾವತಿ ನದಿಯ ಅಕ್ಕಪಕ್ಕದಲ್ಲಿವೆ. ಫೀಡರ್ ಛಾನಲ್‌ನಿಂದ ನೀರು ಸರಬರಾಯಿಯಾಗುತ್ತದೆ; ಭೂಮಿ ಫಲವತ್ತಾಗಿದೆ. ಎಕರೆಗೆ ಆರು ಸಾವಿರ ರೂಪಾಯಿಗಳ ಬೆಲೆಯಿದೆ. ಈ ಅನುಕೂಲತೆಯನ್ನು ನೋಡಿ ಆಗಿನ ದಿವಾನರು ಮೊದಲು ಈ ತಾಲ್ಲೂಕನ್ನು ಜಹಗೀರಿಯಾಗಿ ತೆಗೆದುಕೊಂಡರು. ಈಗ ಅಲ್ಲಿನ ಪರಿಸ್ಥಿತಿ ಎಷ್ಟು ಚಿಂತಾಜನಕವಾಗಿದೆಯೆಂಬುದನ್ನು ಗಮನಿಸಬೇಕು. 1916ನೆಯ ಇಸವಿಯಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕೆರೆ ರಿಪೇರಿಮಾಡಿದರು. ಅಲ್ಲಿಂದೀಚೆಗೆ ಸುಮಾರು 40 ವರ್ಷಗಳಿಂದಲೂ ಸರ್ಕಾರವಾಗಲಿ ಅಥವಾ ಜಹಗೀರುದಾರರಾಗಲಿ ಆ ಕಡೆ ಗಮನಕೊಟ್ಟು ಬೇಕಾದ್ದಕ್ಕೆ ಖರ್ಚುಮಾಡಿರುವುದಿಲ್ಲ. ರೆವೆನ್ಯೂನಿಂದ 60 ಸಾವಿರ ರೂಪಾಯಿಗಳ ಉತ್ಪತ್ತಿಯಾಗಿ ಅದರಲ್ಲಿ 23 ಸಾವಿರ ರೂಪಾಯಿಗಳು ಖರ್ಚಾಗಿ 37 ಸಾವಿರ ರೂಪಾಯಿಗಳಷ್ಟು ಉಳಿತಾಯವಾಗಿದೆ. ಎಕ್ಸೈಜ್ ಬಾಬಿನಿಂದ ಒಂದು ಲಕ್ಷ ಮೂರು ಸಾವಿರ ರೂಪಾಯಿಗಳ ಉತ್ಪತ್ತಿಯಿದೆ. ಒಟ್ಟು ನೆಟ್ ಇನ್‌ಕಂ ಸುಮಾರು ಎರಡು ಲಕ್ಷ ರೂಪಾಯಿಗಳು ಬರುತ್ತವೆ. ಇಷ್ಟನ್ನೂ ಸರ್ಕಾರದವರು ಜಹಗೀರುದಾರರಿಗೆ ಕೊಡುತ್ತಾರೆಯೇ ವಿನಾ ರೈತರಿಗೆ ಅನುಕೂಲಕಲ್ಪಿಸಬೇಕು ಅಥವಾ ಏನಾದರೂ ಸೌಲಭ್ಯ ಮಾಡಿಕೊಡಬೇಕು ಎಂದು ಯೋಚನೆಮಾಡಿ ಅವರಿಗಾಗಿ ಖರ್ಚುಮಾಡುತ್ತಿಲ್ಲ. ಜಹಗೀರುದಾರರಿಗೆ ಸುಖವಾಗಿರಲು ಒಳ್ಳೆಯ ಅವಕಾಶ ಮಾಡಿಕೊಟ್ಟಿದ್ದಾರೆಯೇ ವಿನಾ ರೈತರ ಹಿತದೃಷ್ಟಿಯನ್ನಿಟ್ಟು ಅವರಿಗೆ ಸಹಾಯ ಮಾಡಿರುವುದಿಲ್ಲ. ಸರ್ಕಾರದವರು ಇದನ್ನು ಗಮನಿಸಿ ಜಹಗೀರುದಾರರು ಅಲ್ಲಿಗೆ ಬಂದಾಗ ಇರುವ ತೊಂದರೆಯನ್ನು ಅವರ ಗಮನಕ್ಕೆ ತರಬೇಕಾದದ್ದು ಅವರ ಕರ್ತವ್ಯ ಮತ್ತು ಹಾಗೆ ತಿಳಿಸಿ ಆ ಜಹಗೀರಿಗೆ ಸಾಕಾದಷ್ಟು ಫಂಡಿರುವುದರಿಂದ ಅದರಲ್ಲಿ ಸ್ವಲ್ಪ ಖರ್ಚು ಮಾಡಿ ರೈತರಿಗೆ ಸಹಾಯವನ್ನೊದಗಿಸಬೇಕೆಂದು ಜಹಗೀರುದಾರರನ್ನು ಒತ್ತಾಯ ಪಡಿಸಬೇಕು ಎಂದು ಮನವಿ ಮಾಡುತ್ತೇನೆ.

ಇನ್ನೊಂದು ಅಲ್ಲಿ 22 ಕೆರೆಗಳಿಗಾಗುವ ಖರ್ಚನ್ನೂ ಮತ್ತು ಬೇರೆ ಪ್ರಾಜೆಕ್ಟುಗಳಿಗಾಗುವ ಖರ್ಚನ್ನೂ ಹೋಲಿಸಿ ನೋಡಿದರೆ ಅಲ್ಲಿ ಬಹಳ ಕಡಮೆ ಖರ್ಚಾಗುತ್ತಿದೆ. ನುಗು ಅಣೆಕಟ್ಟಿನ ಅಂದಾಜು 2,43,75,000 ರೂಪಾಯಿಗಳು, ಅಚ್ಚುಕಟ್ಟು 20 ಸಾವಿರ ಎಕರೆಗಳು, ಅಲ್ಲಿ ಎಕರೆಗೆ 1,219 ರೂಪಾಯಿ ಬೀಳುತ್ತದೆ. ಅದೇ ತುಂಗಾ ಅಣೆಕಟ್ಟಿನಲ್ಲಿ ಎಕರೆಗೆ 956 ಚಿಲ್ಲರೆಯಿದೆ, ಭದ್ರಾ ಅಣೆಕಟ್ಟಿನಲ್ಲಿ ಎಕರೆಗೆ 740 ರೂಪಾಯಿ ಖರ್ಚಿದೆ. ಎಳಂದೂರು ತಾಲ್ಲೂಕು ಕೆರೆ ರಿಪೇರಿಗಾಗಿ ಒಂದು ಎಕರೆಗೆ ಕೇವಲ 85 ರೂಪಾಯಿಗಳು ಮಾತ್ರ ಖರ್ಚಾಗುತ್ತಿವೆ. ಇದು ಸಾಕೆ, ಸಾಲದೆ ಎಂದು ಯಾರೂ ನೋಡಿ ತಕ್ಕಷ್ಟು ಒದಗಿಸುತ್ತಿಲ್ಲ. ಈಗಾಗಲೆ ಹತ್ತು ಲಕ್ಷ ರೂಪಾಯಿಗಳ ಸ್ಕೀಂ ಆಗಿದೆ. ಇದರ ಪೈಕಿ ಒಂದೂವರೆ ಲಕ್ಷವನ್ನು ಜಹಗೀರಿ ಫಂಡಿನಿಂದ ಕೊಡಿಸುವುದು ಸಾಲದು; ಇನ್ನೂ ಹೆಚ್ಚು ಹಣ ಕೊಡಿಸಬೇಕು. ಈಗ ಒಂದು ಸಬ್ ಡಿವಿಜನ್ ಬೇರೆ ಕೊಟ್ಟಿರುವ ಒಂದೂವರೆ ಲಕ್ಷದಲ್ಲಿ ಆಗಿದೆ. ಸಿಬ್ಬಂದಿಗೆ ಇಪ್ಪತ್ತು ಸಾವಿರ ರೂಪಾಯಿ ಖರ್ಚಾಗಿದೆ: ವರ್ಷಕೆ ನಲವತ್ತೈದು ಸಾವಿರ ರೂಪಾಯಿ ಬೇಕು. ಸಬ್ ಡಿವಿಜನ್ ಮಾಡಿದರೆ ನಾಲ್ಕು ಲಕ್ಷರೂಪಾಯಿಗಳ ಕೆಲಸವಾದರೂ ಮಾಡಬೇಕಾಗಿತ್ತು. ಆದರೆ ಒಂದು ಲಕ್ಷ ನಲವತ್ತೈದು ಸಾವಿರ ರೂಪಾಯಿಗಳ ಕೆಲಸ ಮಾತ್ರ ಆಗಿದೆ. ಇದು ಸಿಬ್ಬಂದಿಗೆ ಸಂಬಂಧಪಟ್ಟಿಲ್ಲ. ಸರ್ಕಾರ ಸಕಾಲದಲ್ಲಿ ಹಣಕೊಟ್ಟಿಲ್ಲ; ಇದು ಸರಿಯಲ್ಲ. ಇದಕ್ಕೆ ಸರಿಯಾಗಿ ಗಮನ ಕೊಟ್ಟು ರಿಪೇರಿ ಕೆಲಸವನ್ನು ಮಾಡಲು ಪ್ರಯತ್ನ ಪಡುತ್ತಾರೆಂದು ನಂಬಿದ್ದೇನೆ.

*ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು–ಮೂಡಿಗೆರೆ).—ಸ್ವಾಮಿ, ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ನಡೆದ ಕಾರ್ಯ ಚಟುವಟಿಕೆ ಬಗ್ಗೆ ಒಂದು ವರದಿಯನ್ನು ಕೊಟ್ಟಿರುತ್ತಾರೆ. ಅದರಲ್ಲಿ ನಮೂದಿಸಿರುವ ನೀರಾವರಿ ಕಾಂಗಾರಿಗಳನ್ನು ನೋಡಿದರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವ ಕೆಲಸವನ್ನೂ ತೆಗೆದುಕೊಂಡಿರುವ ಹಾಗೆ ಕಾಣಲಿಲ್ಲ. ಇದನ್ನು ನೋಡಿ ತುಂಬಾ ವ್ಯಸನವಾಯಿತು. ಮಲೆನಾಡಿನ ಕಷ್ಟ ತಿಳಿದವರು ಅದಕ್ಕೆ ತಕ್ಕ ಅವಕಾಶ ಮಾಡಿರುವುದಿಲ್ಲ. ಆಮೇಲೆ ನೀರು ಸರಬರಾಯಿ ವಿಚಾರ ಸಹ ಅಲ್ಲಿ ಹೇಳಿದೆ; ಕೆಲವು ಅಂಕಿ ಅಂಶಗಳನ್ನು ಕೊಟ್ಟಿದೆ. ಕೆಲವು ಕಡೆಗೆ ಜಾಗ್ರತೆ ಅನುಕೂಲ ಮಾಡಿದ್ದಾರೆಂದು ಹೇಳಿದೆ. ಚಿಕ್ಕಮಗಳೂರಿಗೆ ಆರುಲಕ್ಷ ರೂಪಾಯಿಗಳ ಯೋಜನೆಯನ್ನು ಮಂಜೂರು ಮಾಡಿದೆ. ಮಲೆನಾಡಿನ ವಿಷಯದಲ್ಲಿ ಹೆಚ್ಚು ನಿಗ ತೆಗೆದುಕೊಳ್ಳಬೇಕು; ಅಲ್ಲಿ ಮಳೆಯೇ ಅಧಾರ. ಅಣೆ ಕಟ್ಟುಗಳನ್ನು ಮತ್ತು ಕೆರೆಗಳನ್ನು ರಿಪೇರಿ ಮಾಡಬೇಕಾದ್ದು ಅಲ್ಲಿ ಬೇಕಾದಷ್ಟಿದೆ. ಈಗ ಕೆರೆ ರಿಪೇರಿಯಾಗುತ್ತಿರುವುದು ಸಾಲದು. ಬೈಲು ಸೀಮೆಯಲ್ಲಿ ಮಾಡುವುದಕ್ಕೂ ಮಲೆನಾಡಿನಲ್ಲಿ ಮಾಡುವುದಕ್ಕೂ ವ್ಯತ್ಯಾಸವಿದೆ. ಮಲೆನಾಡಿನಲ್ಲಿ ನೀರು ನಿಲ್ಲಬೇಕಾದರೆ ಕೆರೆ ಕಟ್ಟೆಗಳ ರಿಪೇರಿಯಾಗಬೇಕಾದದ್ದು ಆವಶ್ಯಕ; ಅದಾಗದಿದ್ದರೆ ನೀರು ನಿಲ್ಲುವುದಿಲ್ಲ. ಕೆರೆಗಳಲ್ಲಿ ಜೊಂಡು ಬೆಳೆದು ಹೂಳು ತುಂಬಿಕೊಂಡಿರುತ್ತದೆ. ವರ್ಷಕ್ಕೆ ನಾಲ್ಕು ಕೆರೆಗಳನ್ನು ರಿಪೇರಿ ಮಾಡಿದರೆ ಎಷ್ಟೋ ಮೇಲು. ಜೊಂಡು, ಹೂಳು ತೆಗೆಯದೆ ಅನೇಕ ಕಡೆ ತೊಂದರೆಯಾಗಿದೆ. ಅದನ್ನು ತೆಗೆದರೆ ಎಷ್ಟೋ ಉಪಕಾರ ಮಾಡಿದಂತಾಗುತ್ತದೆ. ಅದಕ್ಕೆ ಹೆಚ್ಚು ಖರ್ಚು ಸಹ ಆಗುವುದಿಲ್ಲ. ಮಲೆನಾಡಿನಲ್ಲಿ ಬೇಕಾದಷ್ಟು ಮಳೆ ಬರುತ್ತದೆ, ನೀರಿನ ಆವಶ್ಯಕತೆಯಿಲ್ಲ ಎಂದು ಹೇಳುತ್ತಾರೆ. ಆದರೆ ಹಾಗೆ ಹೇಳುವವರಿಗೆ ಅಲ್ಲಿನ ಸನ್ನಿವೇಶ ಅರ್ಥವಾಗಿಲ್ಲ. ಈ ದಿವಸ ಹತ್ತು ಹದ ಮಳೆ ಬಂದರೂ ನೀರಿರುವುದಿಲ್ಲ. ಇಂತಹ ಪರಿಸ್ಥಿತಿಯಿರುವಾಗ ನೀರನ್ನು ಶೇಖರಿಸಲು ಮಲೆನಾಡಿನಲ್ಲಿ ತಕ್ಕ ಯೋಜನೆ ಮಾಡಬೇಕು. ವರ್ಷಕ್ಕೆ ಇನ್ನೂರುಐವತ್ತು ಹದಮಳೆ ಬಂದರೂ ನೀರನ್ನು ಶೇಖರಿಸಲು ಅವಕಾಶ ಮಾಡುವವರೆಗೆ ಏನೂ ಅನುಕೂಲದೊರೆಯುವುದಿಲ್ಲ. ಕೆಲವು ಕಡೆ ಕುಡಿಯುವ ನೀರಿಗೇ ತೊಂದರೆಯಾಗಿದೆ. ವಿಷ್ಣು ಸಮುದ್ರನಾಲೆ ರಿಪೇರಿಮಾಡಬೇಕು. ಅದರಿಂದ ಎರಡುಸಾವಿರ ಎಕರೆಗೆ ಅನುಕೂಲವಿದೆ. ಐಯ್ಯನಕೆರೆಯಿಂದ ಒಂದು ಸಾವಿರ ಎಕರೆ ನೀರಾವರಿಯಾಗುತ್ತದೆ. ಅದನ್ನು ರಿಪೇರಿಮಾಡಬೇಕೆಂದು ಹೇಳಿದರೂ ಮಾಡಿರುವುದಿಲ್ಲ. ಹೇಮಾವತಿ ಅಣೆ ದುರಸ್ತು

(ಶ್ರೀಮತಿ ಬಿ. ಎಲ್. ಸುಬ್ಬಮ್ಮ.)

ಮಾಡಿಲ್ಲ. ಮಲೆನಾಡಿನ ರೈತರಿಗೆ ಹೆಚ್ಚು ಸಹಾಯ ನೀಡಬೇಕಾದದ್ದು ಆವಶ್ಯಕ. ಏಕೆಂದರೆ ಅವರು ಒಂದಾಣೆ ಕಂದಾಯವನ್ನು ಸಹ ಬಾಕಿ ಇಟ್ಟುಕೊಳ್ಳುವುದಿಲ್ಲ; ಇದನ್ನು ಲೆಕ್ಕ ತೆಗೆದು ನೋಡಬಹುದು. ಹಾಗಿರುವಾಗ ಅವರಿಗೆ ಹೆಚ್ಚು ಅನುಕೂಲತೆ ಕಲ್ಪಿಸಬೇಕಾದದ್ದು ಅಗತ್ಯವಾಗಿಯೇ ಇದೆ. ಬೆಳವಾಡಿ ಕೆರೆಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ರಿಪೇರಿ ಮಾಡಿರುವುದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹುಲಿಗೊಂದಿ ಅಣೆ ಒಡೆದುಹೋಗಿದೆ, ಜಾಗ್ರತೆ ರಿಪೇರಿ ಮಾಡಿ ನೀರಾವರಿ ಅನುಕೂಲತೆಗೆ ಮಲೆನಾಡು ಪ್ರದೇಶದಲ್ಲಿ ಹೆಚ್ಚು ನಿಗಾ ತೆಗೆದುಕೊಳ್ಳಬೇಕೆಂದು ಅರಿಕೆ ಮಾಡುತ್ತೇನೆ.

*ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಅಧ್ಯಕ್ಷರೇ, ಸರ್ಕಾರದವರು ನಮ್ಮಮುಂದೆ ಮಂಡಿಸಿರುವ ಡಿಮ್ಯಾಂಡನ್ನು ನಾನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಮಾತ್ರ ಹೇಳುವುದಕ್ಕೆ ಪ್ರಯತ್ನಮಾಡುತ್ತೇನೆ. ನೀರಾವರಿ ಕಾಂಗಾರಿಗಳಿಗೆ ಸರ್ಕಾರದವರು ಬಹಳ ಹೆಚ್ಚಿನ ಶ್ರಮವಹಿಸಿ ನಾನಾ ಪ್ರಾಂತ್ಯಗಳಲ್ಲಿ ಹೆಚ್ಚು ಅನುಕೂಲಮಾಡುತ್ತಿದ್ದಾರೆ. ಇಂಜನಿಯರಿಂಗ್ ಇಲಾಖೆಯಲ್ಲಿ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಿದೆಯೆಂದು ಹುಚ್ಚೇಗೌಡರು ಹೇಳಿದರು. ಆದರೆ ಎರಡು ತಾಲ್ಲೂಕುಗಳಿಗೊಬ್ಬ ಅಸಿಸ್ಟೆಂಟ್ ಇಂಜನಿಯರನ್ನು ಕೊಟ್ಟಿರುವುದರಿಂದ ಸರ್ಕಾರ ಒದಗಿಸಿರುವ ಹೆಚ್ಚು ಹಣವನ್ನು ಖರ್ಚುಮಾಡಲು ಅವಕಾಶವಾಗಿದೆ. ಎಲ್ಲಿ ಹೆಚ್ಚು ಸಂಖ್ಯೆ ನೌಕರರಿಲ್ಲವೋ ಅಲ್ಲಿ ಬಡ್ಜೆಟ್ಟಿನಲ್ಲೊದಗಿಸಿರುವ ಹಣ ಖರ್ಚಾಗುವುದಿಲ್ಲವೆಂಬುದನ್ನು ನೋಡಬಹುದು. ಸಂಸ್ಥಾನದಲ್ಲಿ ನೀರಾವರಿ ಕಾಂಗಾರಿಗಳಿಗೆ ಮೂರುವರ್ಷಗಳಿಂದ ಹೆಚ್ಚು ಹಣ ಒದಗಿಸಿದ್ದರಿಂದ ಆಹಾರದ ಉತ್ಪತ್ತಿ ಹೆಚ್ಚಿ ದುರ್ಭಿಕ್ಷ ಕಡಮೆಯಾಗಿ, ಧಾರಣೆವಾಸಿ ಇಳಿದು ದುಭಿಕ್ಷವಾಗಿ ಬಡವರಿಗೆ ಕಡಮೆ ಬೆಲೆಯಲ್ಲಿ ಪದಾರ್ಥಗಳು ದೊರೆಯಲು ಅವಕಾಶವಾಗಿದೆಯೆಂದು ನಾವು ಸಂತೋಷಪಡಬೇಕಾಗಿದೆ. ಆದ್ದರಿಂದ ಈ ದಿವಸ ಈ ಸರ್ಕಾರಕ್ಕೂ ಮತ್ತು ಸರ್ಕಾರದಲ್ಲಿರುವ ಇಂಜನಿಯರಿಂಗ್ ಅಧಿಕಾರಿಗಳ ದಕ್ಷತೆಗೂ ವಂದಿಸಬೇಕಾಗಿದೆ.

ಮಾನ್ಯ ಸಭೆಯ ಗಮನಕ್ಕೆ ಒಂದು ವಿಷಯ ತರಬೇಕಾಗಿದೆ. ಮಾಗಡಿ ತಾಲ್ಲೂಕಿನಲ್ಲಿ ಬೆಟ್ಟ ಗುಡ್ಡಗಳು ಹೆಚ್ಚಾಗಿವೆ. ಅಲ್ಲಿ ಇನ್ನೂರುಇಪ್ಪತ್ತು ಮೈನರ್ ಕೆರೆಗಳು ಮತ್ತು ಇಪ್ಪತ್ತನಾಲ್ಕು ಮೇಜರ್ ಕೆರೆಗಳಿವೆ ಎಂಬುದು ಸರ್ಕಾರಕ್ಕೆ ಗೊತ್ತಿದೆ. ಅದರಲ್ಲಿ ಹತ್ತು ಮೇಜರ್ ಕೆರೆಗಳ ಜೀರ್ಣೋದ್ಧಾರವಾಗಿದೆ, ಹದಿನಾಲ್ಕು ಕೆರೆಗಳ ಜೀರ್ಣೋದ್ಧಾರವಾಗಿಲ್ಲ, ಇನ್ನೂರು ಇಪ್ಪತ್ತು ಮೈನರ್ ಕೆರೆಗಳಲ್ಲಿ ಎಂಭತ್ತು ಕೆರೆಗಳ ಜೀರ್ಣೋದ್ಧಾರವಾಗಿದೆ. ಸಾಮಾನ್ಯವಾಗಿ ಈ ಮೂರು ವರ್ಷಗಳಿಂದ ಉಳಿದ ನೂರನಲವತ್ತು ಕೆರೆಗಳ ಹಿಂದಿನ ಅಚ್ಚುಕಟ್ಟಿನ ಫಸಲು ಕೈಗೆ ಬರುತ್ತಿಲ್ಲ. ಜಾಗ್ರತೆಯಾಗಿ ಮೈನರ್ ಮತ್ತು ಮೇಜರ್ ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕು. ಮಾಗಡಿ ತಾಲ್ಲೂಕು ತಿಪ್ಪಸಂದ್ರ ಹೋಬಳಿ ಹುಲ್ಲೇನಹಳ್ಳಿ ಬಳಿ ಒಂದು ಅಣೆಕಟ್ಟನ್ನು ಹಾಕಬೇಕೆಂದು ತೀರ್ಮಾನವಾಗಿರುವುದು ಇನ್ನೂ ಆಗಿಲ್ಲ. ಇದನ್ನು ಸರ್ಕಾರದವರು ಜಾಗ್ರತೆಯಾಗಿ ಮಾಡಿ ಆ ಪ್ರಾಂತ್ಯದಲ್ಲಿ ಉಂಟಾಗಿರುವ ಅಭಾವವನ್ನು ತಪ್ಪಿಸಬೇಕು. ಮಾಗಡಿ ತಾಲ್ಲೂಕಿನಲ್ಲಿ ಬೆಳಗುಂದಿ, ವೀರಸಾಗರ, ಅಗರಹಳ್ಳಿ ಕೆರೆಗಳನ್ನು ಹೊಸದಾಗಿ ಕಟ್ಟುತ್ತಿರುವುದರಿಂದ ಅನೇಕ ರೈತರಿಗೆ ಸೌಕರ್ಯಗಳಿಲ್ಲದೆ ಬಹಳ ಕಷ್ಟವಾಗಿದೆ. ಅಲ್ಲಿ ಯಾರ ಜಮೀನು ಮುಳುಗಡೆಯಾಗಿದೆಯೋ ಅವರಿಗೆ ತಕ್ಕ ಪರಿಹಾರವನ್ನು ಒದಗಿಸಿಲ್ಲ. ಯಾವ ರೈತರ ಜಮೀನು ಮುಳುಗಡೆಯಾಗಿರುತ್ತದೆಯೋ ಅಂತಹವರಿಗೆ ಹಣವಾಗಲಿ ಅಥವಾ ಅವರು ಅಪೇಕ್ಷೆಪಟ್ಟರೆ ಅದಕ್ಕೆ ಬದಲಾಗಿ ಜಮೀನಾಗಲಿ ಕೊಟ್ಟು ಜೀವನಕ್ಕೆ ಅನುಕೂಲಪಡಿಸಿಕೊಡಬೇಕಾದುದು ಸರ್ಕಾರದ ಕರ್ತವ್ಯ. ಆ ರೀತಿ ಮಾಡದಿದ್ದರೆ ಜಮೀನು ಮುಳುಗಡೆ ಆಗಿರುವವರಿಗೆ ಹೆಚ್ಚು ನಷ್ಟ ಮತ್ತು ಕಷ್ಟವಾಗುತ್ತದೆ ಎಂದು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಶಿವಮೊಗ್ಗ, ಹಾಸನ, ಮೈಸೂರು ಮುಂತಾದ ಪ್ರಾಂತಗಳಲ್ಲಿ ಹೆಚ್ಚಿನ ನೀರಾವರಿ ಅನುಕೂಲತೆಗಳು ಕಲ್ಪಿಸಲ್ಪಡಬೇಕು. ನದಿಗಳಿರುವುದರಿಂದ ಇಲ್ಲಿ ಅದಕ್ಕೆ ಅವಕಾಶವಿದೆ. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಯಾವ ಕಾಲುವೆಗಳೂ ಇಲ್ಲ. ಆದ್ದರಿಂದ ಈ ಡಿಸ್ಟ್ರಿಕ್ಟಿನಲ್ಲಿರುವ ಹನ್ನೊಂದು ತಾಲ್ಲೂಕುಗಳ ಮೈನರ್ ಮತ್ತು ಮೇಜರ್ ಕೆರೆಗಳ ಕಡೆ ಸರ್ಕಾರದವರು ಹೆಚ್ಚು ಗಮನಕೊಟ್ಟು ಅವುಗಳನ್ನು ಜೀರ್ಣೋದ್ಧಾರ ಮಾಡಬೇಕು. ನೀರಾವರಿ ಕಾಂಗಾರಿ ವಿಷಯದಲ್ಲಿ ಸರ್ಕಾರದವರು ಹೆಚ್ಚಿನ ಮೆಹನತ್ತು ವಹಿಸಿ ಎಲ್ಲಾ ಕೆಲಸಗಳಿಗಿಂತ ಅತಿಮುಖ್ಯವಾದುದು ನೀರಾವರಿ ಕೆಲಸ ಎಂಬುದನ್ನು ಮನಗಂಡು ಬಹಳ ದಕ್ಷತೆಯಿಂದ ಭದ್ರ ಪ್ರಾಜೆಕ್ಟ್, ತುಂಗಾ ಪ್ರಾಜೆಕ್ಟ್ ವಗೈರೆ ಪ್ರಾಜೆಕ್ಟ್‌ಗಳನ್ನು ಅನೇಕ ವರ್ಷದಿಂದ ನಿಂತಿರುವುವನ್ನು ತೆಗೆದುಕೊಂಡು ಪೂರೈಸುತ್ತಾ ಇದ್ದಾರೆ. ಇದಕ್ಕಾಗಿ ವಂದಿಸಿ ನನ್ನ ಬೇಡಿಕೆಯನ್ನು ತಮ್ಮಮುಂದೆ ಇಟ್ಟಿದ್ದೇನೆ.

*ಶ್ರೀ ಬಿ. ಚಿಕ್ಕಣ್ಣ (ಜಾವಗಲ್).—ಈ ಡಿಮ್ಯಾಂಡನ್ನು ಸಮರ್ಥಿಸುತ್ತಾ, ಅರಸೀಕೆರೆ ತಾಲ್ಲೂಕು ಮತ್ತು ಚನ್ನರಾಯಪಟ್ಟಣ ತಾಲ್ಲೂಕು ಹಾಸನಜಿಲ್ಲೆಗೆ ಸೇರಿರುವುದರಿಂದ ಅವೂ ಮಲೆನಾಡು ಎಂದು ಮಾನ್ಯ ಸದಸ್ಯರು ಹೇಳಿದ್ದನ್ನು ಕೇಳಿ ನನಗಂತೂ ಬಹಳ ವ್ಯಥೆಯಾಗುತ್ತದೆ. ಅರಸೀಕೆರೆ ವಿಚಾರ ಹೇಳುವುದಾದರೆ, ಅದೊಂದು ತ್ರಿಶಂಕು ಸ್ವರ್ಗದಲ್ಲಿದೆ. ಅದು ಮಲೆನಾಡೂ ಅಲ್ಲ, ಇತ್ತ ಮೈದಾನವೂ ಅಲ್ಲ. ಅಲ್ಲಿ ಮಳೆಗಾಲವಿಲ್ಲದೆ ಅಭಾವ ಪ್ರದೇಶದಲ್ಲಿ ಸೇರಿದೆಯೆಂದು ಪ್ರಸಿದ್ಧವಾಗಿದೆ. ನಮ್ಮ ಅರಸೀಕೆರೆಯಲ್ಲಿ ಹೊಸದಾಗಿ ಯಾವ ಕೆರೆಗಳನ್ನೂ ಮಾಡದಿರುವುದೊಂದೇ ಅಲ್ಲ, ಇರತಕ್ಕ ಕೆರೆಗಳ ತೂಬು, ಕೋಡಿಗಳನ್ನು ರಿಪೇರಿ ಮಾಡದಿರುವುದು ಮತ್ತೂ ಶೋಚನೀಯವಾಗಿದೆ. ಅನೇಕ ಕೆರೆಗಳು ಹತ್ತಾರು ವರ್ಷಗಳಿಂದ ರಿಪೇರಿಯೇ ಆಗಿಲ್ಲ. ನಾನು ಅಸೆಂಬ್ಲಿ ಸದಸ್ಯನಾದಲಾಗಾಯಿತು ಇವುಗಳನ್ನು ರಿಪೇರಿ ಮಾಡಿಸಿಕೊಡಬೇಕು, ತೂಬುಗಳೆಲ್ಲಾ ಕಿತ್ತುಹೋಗಿವೆಯೆಂದು ಅನೇಕಸಾರಿ ಅಧಿಕಾರಿಗಳಲ್ಲಿ ಮನವಿಮಾಡಿಕೊಂಡಿದ್ದಾಯಿತು. ಅಷ್ಟಾದರೂ ಇನ್ನೂ ಆಗಿಲ್ಲ. ಉದಾಹರಣೆಗೆ, ಚನ್ನರಾಯಪಟ್ಟಣದ ತಾಲ್ಲೂಕು ಬಾಗೂರು ಹೋಬಳಿ ಉತ್ತಿನಕಟ್ಟೆಯಲ್ಲಿ ಒಂದು ಮೇಜರ್ ಕೆರೆಯಿದೆ. ಇದು ನನ್ನ ಚಿಕ್ಕಂದಿನಲ್ಲಿ 30-40 ವರ್ಷಗಳ ಹಿಂದೆ ಒಡೆದು ಹೋಗಿರುವ ಕೆರೆ. ನೂರಾರು ಎಕರೆ ಅಚ್ಚುಕಟ್ಟುಳ್ಳ ಈ ಕೆರೆಯನ್ನು ರಿಪೇರಿ ಮಾಡಬೇಕೆಂದು ಪದೇ ಪದೇ ಹೇಳಿದ್ದೇವೆ. ಆದರೆ ಇನ್ನೂ ಅದನ್ನು ಮಾಡಿಲ್ಲ. ಹಿಂದೆ ಒಮ್ಮೆ ಎಸ್ಟಿಮೇಟ್ ಕೂಡ ಆಗಿತ್ತು ಎಂದು ಹೇಳಿದ್ದರು. ಆದರೆ ಈಗ ಎಗ್ಜಿಕ್ಯೂಟಿವ್ ಎಂಜಿನಿಯರ ಆಫೀಸಿನಲ್ಲಿ ಕೇಳಿದ್ದೇವೆ, ಚೀಫ್ ಎಂಜಿನಿಯರ ಆಫೀಸಿ

ನಲ್ಲಿ ವಿಚಾರಿಸಿದ್ದೇವೆ, ಅಸಿಸ್ಟೆಂಟ್ ಎಂಜಿನಿಯರ ಆಫೀಸಿನಲ್ಲಿ ವಿಚಾರಿಸಿದ್ದೇವೆ. ಆ ಎಸ್ಟಿಮೇಟು ಎಲ್ಲಿ ಹೋಯಿತೋ ಗೊತ್ತಿಲ್ಲ. ಹೀಗಾದರೆ ಏನು ಹೇಳೋಣ? ಇದಕ್ಕೆ ಸಂಬಂಧಪಟ್ಟ ಎಸ್ಟಿಮೇಟನ್ನು ಜಾಗ್ರತೆ ತರಿಸಿಕೊಂಡು ಆ ಕೆರೆಯನ್ನು ರಿಪೇರಿ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಇದೇ ರೀತಿ ಪಾವಗಲ್ ಹತ್ತಿರ ಹಿರೇಕಟ್ಟೆ ಒಡ್ಡು ಎಂದಿದೆ. ಅದು ಒಡೆದುಹೋಗಿ ಸಾವಿರಾರು ಎಕರೆಗಳು ಸಾಗುವಳಿಯಾಗುವುದು ನಿಂತುಹೋಗಿದೆ. ಇದರ ಬಗ್ಗೆ ಒಂದು ಪ್ರಶ್ನೆಯನ್ನು ಕೂಡ ನಾನು ಕಳುಹಿಸಿದ್ದೆ. ಅದಕ್ಕೆ ಸರಿಯಾಗಿ ಉತ್ತರವೇ ಬಂದಿಲ್ಲ. ಇದನ್ನು ಕಟ್ಟಿಕೊಟ್ಟರೆ ಸಾವಿರಾರು ಎಕರೆಗಳ ಸಾಗುವಳಿಗೆ ಅನುಕೂಲವಾಗುತ್ತದೆ. ಈಗ ಈ ಮಾನ್ಯ ಸಭೆಯಲ್ಲಿ ಅರಿಕೆಮಾಡಿಕೊಂಡಮೇಲಾದರೂ ಸರ್ಕಾರದವರ ಗಮನಕ್ಕೆ ಬಂದೀತೇನೋ, ನಮ್ಮ ಕೂಗು ಸರ್ಕಾರಕ್ಕೆ ಕೇಳಿತೇನೋ ಎಂದು ಈಗ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ಮಾನ್ಯ ಮಂತ್ರಿಗಳು ಗಮನಕೊಡುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಈ ಸಭೆಯ ಮುಂದಿರತಕ್ಕ ಡಿಮ್ಯಾಂಡನ್ನು ಸ್ವಾಗತಿಸುತ್ತಾ ಎರಡು ವಿಚಾರಗಳನ್ನು ಮಾತ್ರ ಸರ್ಕಾರದವರ ಮುಂದೆ ಇಡಬೇಕೆಂದು ಇಚ್ಛೆಪಡುತ್ತೇನೆ. ಈಗಾಗಲೇ ಸೋಲೂರು ಸಿದ್ದಪ್ಪನವರು ಬೆಂಗಳೂರಿಗೆ ಸಂಬಂಧಪಟ್ಟ ಕೆರೆಗಳ ವಿಚಾರವನ್ನು ವಿಸ್ತಾರವಾಗಿ ಹೇಳಿದ್ದಾರೆ. ಅನೇಕ ಕೆರೆಗಳು ಈ ಜಿಲ್ಲೆಯಲ್ಲಿವೆ. ಯಾವ ಪುಣ್ಯಾತ್ಮರೋ ಈ ಕೆರೆಗಳನ್ನು ಕಟ್ಟಿಕೊಟ್ಟು ಬಹಳ ಕಡಮೆ ಮಳೆ ಬರತಕ್ಕ ಈ ಜಿಲ್ಲೆಗೆ ಅಪಾರ ಸಹಾಯವನ್ನು ಮಾಡಿದ್ದಾರೆ. ಅಂಥ ಕೆರೆಗಳನ್ನು ರಿಪೇರಿಮಾಡಿಕೊಂಡು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳುವುದರ ಕಡೆ ನಾವು ಈ ದಿನ ನಿಗಾ ಕೊಡಬೇಕಾದದ್ದು ನಮ್ಮ ಕರ್ತವ್ಯ. ಹೀಗಿರುವಾಗ ಈ ಕೆರೆಗಳ ತೂಬು ಪದೇ ಪದೇ ಕಿತ್ತುಹೋಗಿ ರಿಪೇರಿಯಾಗಬೇಕಾದರೆ ಅನೇಕ ವರ್ಷಗಳಾಗುತ್ತಿವೆಯೆಂದು ಹೇಳಿದರೆ ಉತ್ಪ್ರೇಕ್ಷೆಯಲ್ಲ. ಇವುಗಳನ್ನು ರಿಪೇರಿ ಮಾಡದಪಕ್ಷದಲ್ಲಿ ಕೆರೆಯ ನೀರೆಲ್ಲಾ ಆಚೆಹೋಗಿ ಕೆರೆಯ ಕೆಳಗೆ ಪೈರು ಬೆಳೆಯುವುದಕ್ಕಾಗದೆ ಹೋಗುವುದೊಂದೇ ಅಲ್ಲ, ಇರತಕ್ಕ ಪೈರೂ ನಷ್ಟವಾಗಿ ಅಚ್ಚುಕಟ್ಟುದಾರರಿಗೆ ವಿಪರೀತ ನಷ್ಟವಾಗುತ್ತಿರುತ್ತದೆ. ವರ್ತೂರು ಕೆರೆಯಕೆಳಗೆ ಇರತಕ್ಕ ಅಚ್ಚುಕಟ್ಟಿನ ಮೇಲೆ, ಕೋಡಿ, ತೂಬು ರಿಪೇರಿ ಮಾಡದಿರುವುದರಿಂದ, ನೀರು ಹೆಚ್ಚಾಗಿ ಹರಿದು ಪೈರೆಲ್ಲಾ ಕೆಟ್ಟುಹೋಗಿ 5-6 ಲಕ್ಷ ರೂಪಾಯಿಗಳ ನಷ್ಟವಾಗಿದೆ. ಇತ್ತೀಚೆಗೆ ಈ ಅಚ್ಚುಕಟ್ಟಿನ ನಾಲೆಯನ್ನು ರಿಪೇರಿ ಮಾಡುವುದಕ್ಕೆ ಒಂದು ಯೋಜನೆ ತಯಾರಿಸುತ್ತಿದ್ದಾರಂತೆ. ಈಗಾಗಲೇ ಮೂರು ವರ್ಷಗಳ ಕಾಲವಾದರೂ ಈ ಯೋಜನೆ ಯಾವ ಮಟ್ಟದಲ್ಲಿದೆಯೆಂಬುದೇ ಗೊತ್ತಾಗಿಲ್ಲ.

ಆಮೇಲೆ ಬೆಳ್ಳಂದೂರ್ ಕೆರೆಯೆಂಬುದು ಇನ್ನೊಂದು ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿರುವ ದೊಡ್ಡ ಕೆರೆ. ಬೆಂಗಳೂರು ವಿಮಾನ ಕಾರ್ಖಾನೆಯ ಹತ್ತಿರವಿದೆ. ಈ ಕೆರೆಯ ಕಟ್ಟೆಯನ್ನು ಮೂರು ನಾಲ್ಕು ಅಡಿಗಳಷ್ಟು ಎತ್ತರಿಸಿದರೆ ಅಲ್ಲಿ 300-400 ಎಕರೆಗಳು ಸಾಗುವಳಿಗೆ ಬರುವ ಅವಕಾಶವಿದೆ. ಹೀಗೆ ಕೆರೆಗಳ ದುರಸ್ತಿಮಾಡಿಸುವುದರಿಂದ ಎಷ್ಟೋ ಜಮೀನುಗಳನ್ನು ಹೊಸದಾಗಿ ತರೀ ವ್ಯವಸಾಯಕ್ಕೆ ತರಬಹುದಾಗಿದೆ. ಸರ್ಕಾರದವರು ಯಾವುದಾದರೂ ಒಂದು ಕೆರೆಯ ಕೆಲಸವನ್ನು ತೆಗೆದುಕೊಂಡು ಆ ಸ್ಕೀಮನ್ನು complete ಮಾಡಬೇಕಾದರೆ ಸಾಮಾನ್ಯವಾಗಿ ಅನೇಕ ವರ್ಷಗಳು ಹಿಡಿಯುವುದರಿಂದ ಕೆಲಸಗಳು ಸರಾಗವಾಗಿ ಆಗುವುದಿಲ್ಲ. ಆದಷ್ಟು ತ್ವರಿತವಾಗಿ ಕೆಲಸ ಮುಗಿಸುವುದನ್ನು ಈ ಇಲಾಖೆಯವರು ಗಮನದಲ್ಲಿಡಬೇಕು. ಈ ಪ್ರಕಾರ ಮಾಡಿ ಈ ತಾಲ್ಲೂಕಿನ ಕೆರೆಗಳ, ತೂಬು, ಕೋಡಿ ರಿಪೇರಿ ಮಾಡುವುದು ಒಂದು ಮುಖ್ಯವಾದ ಕೆಲಸ.

ಎರಡನೆಯದಾಗಿ, ಕೆರೆಗಳನ್ನು ದುರಸ್ತಿಮಾಡಿ ಸ್ವಲ್ಪ ಹೆಚ್ಚಿಗೆ ಗಮನಕೊಡುವುದರಿಂದ, ಹೆಚ್ಚಿಗೆ ಜಮೀನು ಅಚ್ಚುಕಟ್ಟುದಾರರಿಗೆ ಉಪಯೋಗಕ್ಕೆ ಬರುವಂತಾಗಿ ಹೆಚ್ಚಿಗೆ ಪ್ರಯೋಜನ ಹೊಂದುತ್ತಾರೆಂಬುದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡಿಲ್ಲವೆಂದು ಕಾಣುತ್ತದೆ. ಇದನ್ನವರು ಮನಗಾಣಬೇಕಲ್ಲದೆ, ಹೊಸ ಹೊಸ ಕೆರೆಗಳನ್ನು ನಿರ್ಮಿಸುವುದಕ್ಕೂ ಗಮನಕೊಡಬೇಕೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಅಧ್ಯಕ್ಷರೇ, ನಮ್ಮ ಬೆಂಗಳೂರು ಜಿಲ್ಲೆಯ ಕೆರೆಗಳೆಲ್ಲಕ್ಕೂ ಒಟ್ಟು ಒದಗಿಸಿರ ತಕ್ಕ ಹಣ 66 ಸಾವಿರ ರೂಪಾಯಿಗಳು ಮಾತ್ರ. ಬೆಂಗಳೂರು ಜಿಲ್ಲೆಗೆ ಒದಗಿಸಿರತಕ್ಕ ಹಣವನ್ನೂ ಮಿಕ್ಕ ಜಿಲ್ಲೆಗಳಿಗೆ ಒದಗಿಸಿರುವುದನ್ನೂ ಹೋಲಿಸಿ ನೋಡಿದರೆ ಈ ಜಿಲ್ಲೆಗೆ ಒದಗಿಸಿರುವುದು ಬಹಳ ಕಡಮೆಯಾಗಿದೆಯೆಂದು ಹೇಳಬಹುದು. ಇದರಿಂದಾಗಿ ಬೆಂಗಳೂರು ಜಿಲ್ಲೆಯಲ್ಲಿ ರಿಪೇರಿ ಕೆಲಸ ಅಷ್ಟು ಹೆಚ್ಚಿನ ಸಂಖ್ಯೆಯಲ್ಲಿದ್ದು ಅದನ್ನು ಪೂರೈಸುವುದಕ್ಕೆ ಸಾಧ್ಯವಿಲ್ಲವಾಗಿದೆಯೆಂದು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀಮಾನ್ ಬಿ. ಟಿ. ಕೆಂಪರಾಜ್‌ರವರು ಬೆಂಗಳೂರು ದಕ್ಷಿಣ ತಾಲ್ಲೂಕಿನ ವರ್ತೂರು ವಿಚಾರ ಹೇಳಿದರು. ಅದರ ಕೋಡಿಯಿಂದ ನೀರು ಹರಿದು ಹೋಗುವ ಒಂದು ಕಾಲುವೆಯಿದೆ. ಆ ಕೋಡಿ ರಿಪೇರಿ ಆಗದೆ, ಈಗ ಎರಡು ವರ್ಷಗಳ ಹಿಂದೆ ಮಳೆ ಹೆಚ್ಚಾಗಿ ಕೋಡಿಯಿಂದ ನೀರು ವಿಪರೀತವಾಗಿ ಹರಿದು, ಆ ಕೆರೆಯ ಅಚ್ಚುಕಟ್ಟು ಜಮೀನಿನ ಮೇಲೆಲ್ಲಾ ನೀರು ಯಥೇಚ್ಛವಾಗಿ ಹರಿದು ನಾಲ್ಕು ಅಡಿ ಮಣ್ಣನ್ನು ಹರಡಿದೆ. ಆ ಅಚ್ಚುಕಟ್ಟಿನಲ್ಲಿ ಸಾಮಾನ್ಯವಾಗಿ ಅನೇಕರು ಒಂದು ಎಕರೆ, ನಾಲ್ಕು ಎಕರೆ ಜಮೀನಿಟ್ಟುಕೊಂಡಿರುವ ಬಡ ಜನ. ಈ ಹೂಳು ಮಣ್ಣನ್ನು ತೆಗೆಯಿಸುವುದಕ್ಕೆ ಆ ಬಡ ಜನರಿಗೆ ಸಾಧ್ಯವಿಲ್ಲದೆ, ಆ ಜಮೀನುಗಳನ್ನೆಲ್ಲಾ ಪಾಳು ಬಿಡಬೇಕಾಗಿ ಬಂದಿದೆ. ಈ ವಿಷಯದಲ್ಲಿ ನಾನು ಆ ಕೆರೆಯ ಕೋಡಿಯನ್ನು ರಿಪೇರಿ ಮಾಡಿಕೊಡುವ ಬಗ್ಗೆ ಅಧಿಕಾರಿಗಳಿಗೆ ಹೇಳಿದೆ. ಆದರೂ, ಈಹೊತ್ತೂ 1955-56ನೆಯ ಸಾಲಿನ ಬಡ್ಜೆಟ್ಟನ್ನು ನೋಡಿದರೆ ಅಲ್ಲಿಯೂ ಈ ಕೆಲಸಕ್ಕೆ ಹಣ ಒದಗಿಸಿಲ್ಲ.

ಎರಡನೆಯದಾದ ಬಹಳ ಮುಖ್ಯವಾದ ಕಾರ್ಯವೆಂದರೆ ಕೆರೆಗಳ ಹೂಳು ತೆಗೆಯಿಸುವುದು. ಇವೊತ್ತು ಅನೇಕ ಸಣ್ಣ ಪುಟ್ಟ ಕೆರೆಗಳು ನೂರಾರು ವರ್ಷಗಳಿಂದ ಹೂಳು ತೆಗೆಯದೆ ಮುಚ್ಚಿಹೋಗಿವೆ. ಈ ವಿಚಾರದಲ್ಲಿ ಹಾಗೂ ಆಡಳಿತದ ಇತರ ವಿಷಯಗಳ ಬಗ್ಗೆ ಏನಾದರೂ ಕಾರ್ಯಕ್ರಮ ಕೈಕೊಳ್ಳಬೇಕೆಂದು ಒಂದು ಸಭೆ ಸೇರಿತು. ಆಗ ಸರ್ಕಾರದವರು ಹೇಳಿದರು "ಕೆರೆಗಳಲ್ಲಿ ಹೂಳು ತೆಗೆಸುವ ವಿಷಯದಲ್ಲಿ ಎಂಜಿನಿಯರ ಅಭಿಪ್ರಾಯ ಏಕಮುಖವಾಗಿಲ್ಲ, ವ್ಯತ್ಯಾಸವುಳ್ಳದ್ದಾಗಿದೆ; ಆದ್ದರಿಂದ ಏನೂ ತೀರ್ಮಾನಕ್ಕೆ ಬರುವುದು ಸಾಧ್ಯವಿಲ್ಲ"ವೆಂದು ಹೇಳಿದರು. ಇನ್ನಾದರೂ ಒಂದು ತೀರ್ಮಾನಕ್ಕೆ ಬರುವುದು ಅವಶ್ಯಕವಾಗಿದೆ.

(ಶ್ರೀ ಎ. ವಿ. ನರಸಿಂಹರೆಡ್ಡಿ.)

ತಾವು ದಯಮಾಡಿ desilting ಕಾರ್ಯವನ್ನು ಹೆಚ್ಚಿಗೆ ಮಾಡಬೇಕು. ಇದಕ್ಕಾಗಿಯೇ ಒಂದು ಫಂಡನ್ನು ಏರ್ಪಡಿಸಿ ಪ್ರತಿ ವರ್ಷವೂ ಕಾರ್ಯಕ್ರಮ ಹಾಕಿಕೊಂಡು ಯಾವ ಯಾವ ಕೆರೆಗಳು ಹೂಳು ತುಂಬಿವೆಯೆಂದು ಪಟ್ಟಿಮಾಡಿ ಹೂಳು ತೆಗೆಯಿಸುವುದಕ್ಕೆ ಒಂದು ಯೋಜನೆ ಹಾಕಿಕೊಳ್ಳಬೇಕು. ಪ್ರತಿವರ್ಷವೂ ಈ ಬಗ್ಗೆ ಕೆಲಸಮಾಡಿದ ಹೊರತು desilting ಕಾರ್ಯ ಮುಗಿಯುವುದಿಲ್ಲ. ಇವೊತ್ತು ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲಾ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳೇ ಸೇರಿವೆ. ಬಯಲುಸೀಮೆಯಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಒಂದೂ ಇರುವುದಿಲ್ಲ. ಹೀಗಿರುವಲ್ಲಿ ಅಲ್ಲಿರುವ ರೈತರಿಗೆ ಪಂಚ ವಾರ್ಷಿಕಯೋಜನೆಗಳಿಂದ ಫಲ ಸಿಕ್ಕಬೇಕಾದರೆ, ಅವರಿಗೆ ಉಪಯೋಗವಾಗುವ ಯಾವುದಾದರೂ ಕಾರ್ಯಕ್ರಮವನ್ನು ಹಾಕಿಕೊಳ್ಳುವುದು ಅತ್ಯಾವಶ್ಯಕ. ಈ ದೃಷ್ಟಿಯಿಂದ ಬೆಂಗಳೂರು ಜಿಲ್ಲೆಯ ಎಲ್ಲಾ ಕೆರೆಗಳ ಹೂಳು ತೆಗೆಯಿಸುವ ಕಾರ್ಯವನ್ನು ಕೈಕೊಂಡು ಪೂರೈಸಬೇಕೆಂದು ಹೇಳುತ್ತೇನೆ.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಅಧ್ಯಕ್ಷರೇ, ನಾನು ನನ್ನ ಸ್ನೇಹಿತರಾದ ಶ್ರೀ ಮ್ಯಾಸ್ಕರನ್ಹಾಸ್‌ರವರು ಹೇಳಿದ ವಾದವನ್ನೇ ಪುಷ್ಟೀಕರಿಸುತ್ತಾ, ದೊಡ್ಡ ದೊಡ್ಡ ಯೋಜನೆಗಳ ವಿಚಾರ ದಲ್ಲಿ ಅವರು ಹಿಂದಿನ ದಿವಸ ಮಾತನಾಡುತ್ತಿದ್ದಾಗ ಏನುಹೇಳಿದರೋ ಮತ್ತು ಇವೊತ್ತೂ ಅದನ್ನೇ ಸ್ವಲ್ಪ ಸ್ಪಷ್ಟೀಕರಿಸಿ ಏನು ತಿಳಿಸಿದರೋ ಅದರ ವಿಚಾರದಲ್ಲಿ ಒಂದೆರಡು ಮಾತುಗಳನ್ನಾಡುತ್ತೇನೆ. ಅಂದ ಮಾತ್ರಕ್ಕೇ ನಾನು ದೊಡ್ಡ ದೊಡ್ಡ ಯೋಜನೆಗಳ ವಿಚಾರದಲ್ಲಿ ವಿರೋಧವನ್ನೇನೂ ಮಾಡುವುದಿಲ್ಲ. ಮೈನರ್ ಕೆರೆಗಳ ವಿಚಾರದಲ್ಲಿ ಹೆಚ್ಚಿಗೆ ಗಮನಕೊಡ ಬೇಕೆಂಬುದೇ ನನ್ನ ಆಶಯ.

ಕೆಲವು ಸಂದರ್ಭಗಳಲ್ಲಿ, ಮಾನ್ಯ ಸದಸ್ಯರು ಕೆಲವರು ಮಾತನಾಡುತ್ತಾ ಚಿತ್ರದುರ್ಗಜಿಲ್ಲೆ ಬಹಳ ಬೆಂಗಾಡು ಪ್ರದೇಶ, Famine affected area ಎಂದು ಹೇಳಿ ಆ ಪ್ರದೇಶಗಳ ಮೈನರ್ ಕೆರೆಗಳ ರಿಪೇರಿಗೆ ಹೆಚ್ಚಿಗೆ ದುಡ್ಡು ಕೊಡಬೇಕೆಂದು ವಾದಿಸುತ್ತಿದ್ದಾರೆ. ಆದರೆ ಆ ಡಿಸ್ಟ್ರಿಕ್ಟಿನಲ್ಲಿರುವ ಮೈನರ್ ಕೆರೆಗಳ ಸಂಖ್ಯೆ ಬಹಳ ಕಡಮೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಕೋಲಾರ ಡಿಸ್ಟ್ರಿಕ್ಟಿನಲ್ಲಿರುವುದರಲ್ಲಿ ಅರ್ಧ ಕೂಡ ಇಲ್ಲ.

ಶ್ರೀ ಎ. ಜಿ. ತಿಮ್ಮಪ್ಪಗೌಡ.—ಕೋಲಾರ ಡಿಸ್ಟ್ರಿಕ್ಟಿನಲ್ಲೇನೋ ತಕ್ಕಮಟ್ಟಿಗಿವೆ; ಚಿತ್ರದುರ್ಗ, ತುಮಕೂರು ಡಿಸ್ಟ್ರಿಕ್ಟ್‌ಗಳಲ್ಲಿ ಬಹಳ ಕಡಮೆ ಇವೆ.

ಶ್ರೀ ಟಿ. ಎಙ್. ಮೂಡಲಗಿರಿಗೌಡ (ಕುಣಿಗಲ್).—ತುಮಕೂರು ಡಿಸ್ಟ್ರಿಕ್ಟಿನಲ್ಲೂ ಕೂಡ ಕೋಲಾರ ಜಿಲ್ಲೆಯಲ್ಲಿ ಎಷ್ಟಿವೆಯೋ ಅಷ್ಟೇ ಮೇಜರ್ ಮತ್ತು ಮೈನರ್ ಕೆರೆಗಳಿವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ನನ್ನಲ್ಲಿ ಪಟ್ಟಿಯೇ ಇದೆ.

	ಮೇಜರ್ ಕೆರೆಗಳು.	ಮೈನರ್ ಕೆರೆಗಳು.	ಸಾಗುವಳಿ ಗಿರುವ ಎಕರೆ ಗಳು.
ಕೋಲಾರ ...	556	3,240	76,501
ತುಮಕೂರು ...	392	829	80,742
ಹಾಸನ ...	211	3,730	1,47,762

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಸನದಲ್ಲಿ ಜಾಸ್ತಿ ಮೈನರ್ ಕೆರೆಗಳಿರುವ ಹಾಗೆಯೇ ಶಿವಮೊಗ್ಗದಲ್ಲೂ ಹೆಚ್ಚಾಗಿವೆ. ಹೀಗಿರುವಾಗ ಚಿತ್ರದುರ್ಗದ ಮಾನ್ಯ ಸದಸ್ಯರು ಏನೇನು ಹೇಳುತ್ತೇನೆಂದು ನಿರೀಕ್ಷಿಸಿಕೊಂಡು ತಕರಾರು ಮಾಡುತ್ತಿದ್ದಾರೆ, ಅಷ್ಟೆ. ಅದು ಸರಿಯಾದ್ದಲ್ಲ. ಈಗ ಸರ್ಕಾರದವರು ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಏನೇನು ಕೈಕೊಂಡಿದ್ದಾರೋ ಅವೆಲ್ಲಾ ಅವಶ್ಯಕವೇನೋ ಹೌದು. ಶಿವಮೊಗ್ಗ, ಕಡೂರು, ಮೈಸೂರು ಡಿಸ್ಟ್ರಿಕ್ಟ್‌ಗಳಿಗೆ ಭದ್ರಾ ಮುಂತಾದ ಜಲಾಶಯಗಳಿಂದ ಸಹಾಯವಾಗಿದೆ. ಅದಕ್ಕೆ ನಮ್ಮ ವಿರೋಧವೇನೂ ಇಲ್ಲ. ಆದರೆ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟುವುದರಲ್ಲಿ ಎಷ್ಟು ಆಸಕ್ತಿಯುಳ್ಳವರಾಗಿದ್ದೀರೋ, ಎಷ್ಟು ಹಣವನ್ನು ಅದಕ್ಕೆ ಖರ್ಚು ಮಾಡುವುದಕ್ಕೆ ಸಿದ್ಧವಾಗಿದ್ದೀರೋ ಅಷ್ಟೇ ಪ್ರಾಮುಖ್ಯತೆಯನ್ನು ಮೈನರ್ ಕೆರೆಗಳ ಜೀರ್ಣೋದ್ಧಾರ ಮಾಡುವುದಕ್ಕೂ ಕೊಡಬೇಕೆಂದು ಹೇಳಿ ನಾನು ಒತ್ತಿ ಹೇಳುತ್ತಿದ್ದೇನೆ ಅಷ್ಟೆ. ಹಾಲಿ ನಮ್ಮ ಸಂಸ್ಥಾನದಲ್ಲಿ 30,000 ಮೈನರ್ ಕೆರೆಗಳಿವೆ. ಇಷ್ಟು ಕೆರೆಗಳಲ್ಲಿ ಮೂರನೆಯ ಒಂದು ಭಾಗದಷ್ಟು ಮಾತ್ರ ಜೀರ್ಣೋದ್ಧಾರವಾಗಿದೆ. ಅನೇಕ ಕೆರೆಗಳ ರಿಪೇರಿ ಕೂಡ ಆಗಬೇಕಾಗಿದೆ. ಆದ್ದರಿಂದ ಹಾಲಿ ಇರತಕ್ಕ ಮೈನರ್ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಪ್ರಯತ್ನಮಾಡದೆ ದೊಡ್ಡ ಕೆರೆಗಳನ್ನು ಕಟ್ಟಿಸುವುದಕ್ಕೆ, ದೊಡ್ಡ ಪ್ರಾಜೆಕ್ಟ್‌ಗಳನ್ನು ಕೈಕೊಳ್ಳುವುದಕ್ಕೆ ಖರ್ಚು ಮಾಡುವುದು ಸರಿಯಲ್ಲ. ಅದಕ್ಕೆ ಮೊದಲು, ಒಂದು ಪ್ಲಾನ್ ಪ್ರಕಾರ, ವ್ಯವಸ್ಥಿತವಾದ ರೀತಿಯಲ್ಲಿ ಮೈನರ್ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದು ಬಹಳ ಪ್ರಾಮುಖ್ಯವಾದುದು ಎಂದು ಹೇಳಿ ನಾನು ತಿಳಿದಿದ್ದೇನೆ.

4-30 P.M.

ಈ ಅಭಾವಕಾಲದಲ್ಲಿ ನಮಗೆ ಈ ದೊಡ್ಡ ಪ್ರಾಜೆಕ್ಟುಗಳ ಅಗತ್ಯ ಮತ್ತು ಅವಶ್ಯಕತೆ ಎಷ್ಟರಮಟ್ಟಿಗಿದೆಯೋ ಅಷ್ಟೆ ಅಗತ್ಯ ಮತ್ತು ಆವಶ್ಯಕತೆ ಈ ಚಿಕ್ಕ ಪ್ರಾಜೆಕ್ಟುಗಳ ಬಗ್ಗೆಯೂ ಇದೆ. ಆದರೆ ಈ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ನಿರ್ಮಿಸುವುದರಿಂದ ಸಂಭವಿಸುವಂಥ ಕಾಂಪ್ಲಿಕೇಷನ್‌ಗಳು ಅನೇಕವಿವೆ. ಅವುಗಳನ್ನು ಬಗೆಹರಿಸಬೇಕಾದರೆ ಬಹಳ ಕಷ್ಟವಿದೆ. ಮೊದಲು ನಮ್ಮ ಕಡೆಯ ಜಾತ್ರೆಗಳಿಗೆ ಮಂಡ್ಯಾ ಜಿಲ್ಲೆಯಿಂದ ಎತ್ತುಗಳೂ—ದನಕರುಗಳೂ ಬರುತ್ತಿದ್ದವು. ಆಗ್ಯೆ ನಮ್ಮ ಕಡೆ ಈ ಮಂಡ್ಯಾ ಸೀಮೆಯ ದನಕರುಗಳು ಬಹಳ ಹೆಸರುವಾಸಿ ಹೊಂದಿದ್ದವು. ಅದರಲ್ಲೂ ಮಂಡ್ಯಾ ಡಿಸ್ಟ್ರಿಕ್ಟಿನ ಕುರಿ ಮತ್ತು ಹಸುಗಳು ಬಹಳ ಹೆಸರುವಾಸಿ ಹೊಂದಿದ್ದವು. ಮಂಡ್ಯಾ ಬೆಣ್ಣೆಯೆಂದರೆ ಬಹಳ ಹೆಸರುವಾಸಿಯಾಗಿತ್ತು. ಆದರೆ ಇತ್ತೀಚೆಗೆ ಅದೆಲ್ಲಾ ಹೊರಟುಹೋಯಿತು. ಇದಕ್ಕೆ ಕಾರಣ ಆ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ನಾಲಾಗಳು ಕೆರೆಗಳು ಆದದ್ದೇ ಅದಕ್ಕೆ ಕಾರಣವಾಗಿದೆ. ಹೀಗೆ ದೊಡ್ಡ ದೊಡ್ಡ ಪ್ರಾಜೆಕ್ಟುಗಳಿಂದ ಎಷ್ಟು ಅನುಕೂಲವಿದೆಯೋ, ಅವುಗಳಿಂದ ಆಗತಕ್ಕ ಅನಾನುಕೂಲ ಕೂಡ ಅಷ್ಟೇ ಇದೆ. ಆದರೆ ಎಲ್ಲೆಲ್ಲಿ ರಾಗಿ ಬೆಳೆಯಬೇಕೋ ಅಲ್ಲಿ ರಾಗಿಯನ್ನೇ ಬೆಳೆಯಬೇಕು, ಎಲ್ಲೆಲ್ಲಿ ಭತ್ತವನ್ನು ಬೆಳೆಯಬೇಕೋ ಅಲ್ಲಿ ಭತ್ತವನ್ನೇ ಬೆಳೆಯಬೇಕು. ಎಲ್ಲೆಲ್ಲಿ ದನಗಳನ್ನು ಸಾಕಬೇಕೋ ಅಲ್ಲಿ ದನಗಳನ್ನೇ ಸಾಕಬೇಕು. ಇದು ದೈವನಿಯಾಮಕದ ಮೇಲೆ ಹೋಗತಕ್ಕಂಥ ವಿಚಾರ. ಹೀಗೆ ಈ ವಿಚಾರಗಳನ್ನೆಲ್ಲಾ ಒಂದು ಹದ್ದು ಬಸ್ತಿದೆ. ಆ ಒಂದು

ಹದ್ದು ಬಸ್ತಿನೊಳಗೆ ಹೋಗಬೇಕೇ ಶಿವಾಯಿ ಎಲ್ಲಾ ಕಡೆಯೂ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟಬೇಕೆಂದು ಕೇಳಿದರೆ—ಆಗ ರಾಗಿ ಬೆಳೆಯುವುದು ಕಮ್ಮಿಯಾಗುತ್ತದೆ, ದನಗಳನ್ನು ಸಾಕುವುದು ಕಮ್ಮಿಯಾಗುತ್ತದೆ. ಆದುದರಿಂದ ತಾವು ಈದಿವಸ ಆ ಮೇಜರ್ ಟ್ಯಾಂಕುಗಳಿಗೆ ಎಷ್ಟು ನಿಗಾ ಕೊಡುತ್ತಿದ್ದೀರೋ ಅಷ್ಟೇ ನಿಗವನ್ನು ತಾವು ಈ ಮೈನರ್ ಟ್ಯಾಂಕುಗಳಿಗೂ ಸಹ ಕೊಡಬೇಕು. ಆದರೆ ಯಾವಾಗ್ಲೂ ಸರ್ಕಾರದವರನ್ನು ಅವರು ಎಷ್ಟೇ ಸಹಾಯ ಮಾಡಿದ್ದರೂ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಅವರನ್ನು ದೂಷಣೆ ಮಾಡತಕ್ಕದ್ದು ಕೂಡ ಸರಿಯಾದ್ದಲ್ಲ. ಇತ್ತೀಚೆಗೆ ಬಂದಂಥ ಸರ್ಕಾರದವರು ಈ ಮೈನರ್ ಕೆರೆಗಳ ಜೀರ್ಣೋದ್ಧಾರದ ಬಗ್ಗೆ ಬಹಳ ಗಮನಕೊಟ್ಟಿದ್ದಾರೆ. ಅನೇಕ ಹೊಸ ಹೊಸ ಕೆರೆಗಳನ್ನು ನಿರ್ಮಾಣಮಾಡಿದ್ದಾರೆ. ಹಳೆಯ ಕೆರೆಗಳನ್ನು ಜೀರ್ಣೋದ್ಧಾರ ಮಾಡಿದ್ದಾರೆ. ಹೀಗೆ ಅನೇಕ ಉಪಯುಕ್ತ ಕೆಲಸಗಳನ್ನು ನಡೆಸಿರುತ್ತಾರೆ. ಇದು ಬಹಳ ಸಂತೋಷದ ವಿಷಯ. ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ಈ ಕೆರೆಗಳ ಜೀರ್ಣೋದ್ಧಾರಕಾರ್ಯ ಎಂದೂ ನಡೆದಿರಲಿಲ್ಲ. ಈಗ್ಗೆ 5-6 ವರ್ಷಗಳಿಂದ ಬಹಳ ಜೋರಾಗಿ ಈ ಕೆಲಸಗಳು ನಡೆಯುತ್ತಿವೆ. ಆದರೆ ನಮ್ಮ ಜಿಲ್ಲೆಗೆ ಈ ಬಾಬಿಗಾಗಿ ಒದಗಿಸಿರತಕ್ಕಂಥ ಆರು ಲಕ್ಷ ರೂಪಾಯಿಗಳು ಏನೇನೂ ಸಾಲದು ಎಂದು ಶ್ರೀ ಬಿ. ಎಚ್. ಬೋರಣ್ಣಗೌಡರು ಹೇಳಿದರು. ಆದರೆ ಅದಕ್ಕೆ ನಾನು ಹೇಳುತ್ತೇನೆ, ನಾವು ಹಿಂದಿನ 20 ವರ್ಷಗಳ ಲೆಕ್ಕ ತೆಗೆದು ನೋಡಿದಾಗ್ಲೂ ಕೂಡ ಕಳೆದ ಎರಡು ವರ್ಷಗಳಲ್ಲಿ ನಮ್ಮ ಹಾಸನ ಜಿಲ್ಲೆಯಲ್ಲಿ ರಿಪೇರಿಯಾಗಿರುವಷ್ಟು ಮೈನರ್ ಕೆರೆಗಳು ಹಿಂದೆ ಎಂದೂ ಹೀಗೆ ರಿಪೇರಿ ಆಗಿರುವುದಿಲ್ಲವೆಂಬುದಾಗಿ ಗೊತ್ತಾಗುತ್ತದೆ. ಇದೇ ರೀತಿಯಾಗಿ ಕೆಲಸ ನಡೆದಲ್ಲಿ ಬಹಳ ಅನುಕೂಲವಾಗುತ್ತದೆ. ಆದರೆ ಇದರಲ್ಲಿ ಅಲ್ಲಲ್ಲೇ ಸ್ವಲ್ಪ ನ್ಯೂನತೆಗಳಿವೆ. ಮೊನ್ನೆ ತಾನೆ ಕೆಲವರು ನನಗೆ ಅಲ್ಲಿಂದ ಒಂದು ಕಾಗದವನ್ನು ಬರೆದಿದ್ದರು. ಕೆಲಸ ಮುಗಿಸಿದ್ದಾಗ್ಲೂ ಕೆಲವರು ಕಂಟ್ರಾಕ್ಟರಿಗೆ ಇನ್ನೂ ಹಣ ಪಾವತಿಯಾಗಿರುವುದಿಲ್ಲ ಎಂದು ಕಾಗದ ಬರೆದಿದ್ದರು. ಆಗ ನಾನು ಮಾನ್ಯ ಮಂತ್ರಿಗಳನ್ನು ಕಂಡು ಈ ವಿಚಾರ ತಿಳಿಸಿದ್ದೆನು. ಅಲ್ಲಿಗೆ ಬೇಗ ಹಣವನ್ನೊದಗಿಸುವುದಾಗಿ ಮಾನ್ಯ ಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಈಗಾಗಲೇ ಅಲ್ಲಿಗೆ ಹಣವನ್ನು ಒದಗಿಸಲಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಥ್ಯಾಂಕ್ಸ್. ಈ ಕಂಟ್ರಾಕ್ಟರುಗಳಿಗೆ ಬಿಲ್ಲಿನ ಮೊಬಲಗು ಬೇಗ ಪಾವತಿಯಾಗುವಂತೆ ತಾವು ಒಂದು ಸರಿಯಾದ ವ್ಯವಸ್ಥೆಯನ್ನು ನಿರ್ಧರಮಾಡಬೇಕೆಂದು ನಾನು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಸ್ವಾಮಿ, ನೆಲಮಂಗಲ, ಮಾಗಡಿ, ದೊಡ್ಡಬಳ್ಳಾಪುರ ಈ ತಾಲ್ಲೂಕುಗಳಲ್ಲಿ ಪ್ರಕೃತಿ ಸೌಂದರ್ಯ ಬಹಳ ಹೆಚ್ಚಾಗಿದೆ. ಈ ಕಾರಣದಿಂದಲೇ ಈಗೇನೋ ಈ ಮಾಗಡಿ ತಾಲ್ಲೂಕಿನಲ್ಲಿ ಕೆರೆಗಳ ಸಂಖ್ಯೆ ಸ್ವಲ್ಪ ಜಾಸ್ತಿಯಾಗಿಯೇ ಇದೆ. ಆದರೆ ಮಾಗಡಿ, ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ಇವು ಮೂರೂ ಮೈದಾನ ಪ್ರಾಂತ್ಯಗಳು. ಈ ತಾಲ್ಲೂಕುಗಳಲ್ಲಿರತಕ್ಕಂಥ ಕೆರೆಗಳು ಬಹಳ ಕಾಲದಿಂದಲೂ ರಿಪೇರಿಯಾಗದೆ ಹಾಗೆಯೇ ಉಳಿದುಕೊಂಡು ಬಂದಿರುತ್ತವೆ. ಇರತಕ್ಕ ಕೆರೆಗಳನ್ನೂ ಕೂಡ ಸರಿಯಾಗಿ ಕಟ್ಟಿಲ್ಲ. ಈ ಕೆರೆಗಳ ರಿಪೇರಿ ಇತ್ಯಾದಿಗಳ ಬಗ್ಗೆ ನಾವು ಪದೇಪದೇ ಸರ್ಕಾರದವರಿಗೆ ಮನವಿಗಳನ್ನು ಮಾಡಿಕೊಳ್ಳುತ್ತಲೇ ಬಂದಿದ್ದೇವೆ. ಆದರೆ ಸರ್ಕಾರದವರು ಏನೋ ಒಂದು ತಾತ್ಸಾರ ಭಾವನೆಯಿಂದ ಮಾತಿಗೊಂದು ಮಾತನ್ನು ಉತ್ತರ ಹೇಳತಕ್ಕ ರೀತಿಯಲ್ಲಿ ಹೇಳಿಕೊಳ್ಳುತ್ತ ನಮ್ಮ ಕೆರೆಗಳ ಜೀರ್ಣೋದ್ಧಾರ ಕಾರ್ಯದಲ್ಲಿ ಹೀಗೆ ಇವರು ತಾತ್ಸಾರ ಮನೋಭಾವನೆಯನ್ನು ತೋರಿಸುತ್ತಿರುವುದು ಖಂಡಿತ ಸಾಧುವಾದದ್ದಲ್ಲ. ಸರ್ಕಾರದವರು ಇದನ್ನು ಕೂಡಲೇ ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಹೀಗಾಗಿ ಇಲ್ಲಿಯ ತನಕ ಈ ಮೂರು ತಾಲ್ಲೂಕುಗಳಲ್ಲಿರತಕ್ಕಂಥ ಕೆರೆಗಳನ್ನು ರಿಪೇರಿಮಾಡಲು ಸರ್ಕಾರದವರಿಗೆ ಸಾಧ್ಯವಾಗಿಲ್ಲ. ಆ ಮರಸರಹಳ್ಳಿ ಪ್ರಾಜೆಕ್ಟಿನ ಬಗ್ಗೆ ಎಷ್ಟೋ ವರ್ಷಗಳಿಂದ ನಾವು ಒಂದೇ ಸಮನಾಗಿ ಅವಿಚ್ಛಿನ್ನವಾಗಿ ಮನವಿಗಳನ್ನು ಸಲ್ಲಿಸುತ್ತಲೇ ಬಂದಿದ್ದೇವೆ.

ಶ್ರೀ ಕಡಿದಾಳ್ ಮಂಜಪ್ಪ.—ನೀವು ಈಗ ಹೇಳುತ್ತಿರುವುದು ಆ ಕುಮುದ್ವತಿ ವ್ಯಾಲಿ ತಾನೆ ?

ಶ್ರೀ ಕೆ. ಪ್ರಭಾಕರ್.—ಅಲ್ಲಿರತಕ್ಕದ್ದೇ ಆ ಒಂದು ವ್ಯಾಲಿ. ಅಲ್ಲಿ ಒಂದು ಕೆರೆಯನ್ನು ಕಟ್ಟಿಸಿಕೊಡಬೇಕೆಂದು ನಾವು ಮಾನ್ಯ ಮಂತ್ರಿಗಳನ್ನು ಪದೇಪದೇ ಒತ್ತಾಯಪಡಿಸುತ್ತಲೇ ಬಂದಿದ್ದೇವೆ. ಆದರೂ ಇದರ ಬಗ್ಗೆ ಏನಿದೆ ಅನ್ನುವುದನ್ನು ಸರ್ಕಾರದವರು ಕಣ್ಣೂ ಸಹ ಬಿಟ್ಟು ನೋಡಿಲ್ಲ. ನಾವು ಎಷ್ಟೋ ಸಾರ್ತಿ ಸರ್ಕಾರದವರಿಗೆ ತಿಳಿಸಿದ್ದೇವೆ. ತಾವು ತಮ್ಮ ಆಫೀಸರ್ಸ್ ಮೀಟಿಂಗ್‌ನಲ್ಲಿ ಇದರ ಹಣೇಬರಹದ ಬಗ್ಗೆ ಏನಿದೆ ಅನ್ನುವುದನ್ನಾದರೂ ಕಂಡುಹಿಡಿಯುವಂತೆ, ಹೇಳಿದ್ದಿರಿ. ತಾವು ಇಷ್ಟನ್ನಾದರೂ ಮಾಡಿ ಈ ಬಗ್ಗೆ ಆ P.W.D. ಇಲಾಖೆಯ ಅಧಿಕಾರಿಗಳಿಗೊಂದು ಸೂಚನೆಯನ್ನು ಕೊಡಿ. ನಾವು ಹೇಳಿದರೆ ಅವರು ಇದನ್ನು ಮಾಡುವುದಿಲ್ಲ ಎಂದು ಕೇಳಿಕೊಂಡಿದ್ದೇವೆ. ಅದಷ್ಟನ್ನಾದರೂ ಸಹಿತ ಸರ್ಕಾರದವರು ಇಲ್ಲಿಯವರೆಗೂ ಮಾಡಲಿಲ್ಲ. ಮೊನ್ನೆತಾನೆ ಕಟ್ಟಕಡೆಯದಾಗಿ ನಾನೂ ಮತ್ತು ನನ್ನ ಮಿತ್ರರಾದ ಶ್ರೀ ಡಿ. ಎಂ. ಗೋವಿಂದರಾಜು ಇಬ್ಬರೂ ಸೇರಿಕೊಂಡು ಆ ಸಂಬಂಧಪಟ್ಟ ಅಧಿಕಾರಿಗಳಿಗೊಂದು ಪತ್ರ ಬರೆದುಕೊಂಡಿದ್ದೆವು. ಅದಕ್ಕೆ ಈಗ ಆ ಅಧಿಕಾರಿಗಳು ಆ ಬಗ್ಗೆ ಒಂದು ಎಸ್ಟಿಮೇಟನ್ನು ತಯಾರಿಸಲು ತಿಳಿಸಿದ್ದೇವೆ ಎಂದು ಉತ್ತರ ಬರೆದಿದ್ದಾರೆ. ಇಷ್ಟು ಕೆಲಸಕ್ಕಾಗಿ ಎರಡು ವರ್ಷಗಳಕಾಲ ಹಿಡಿಯಿತು. ಹೀಗೆ ಈ ಕೆಲಸಗಳೆಲ್ಲಾ ನಿಧಾನವಾಗುವುದಕ್ಕೆ ಆ ಅಧಿಕಾರಿಗಳಲ್ಲಿರತಕ್ಕಂಥ ತಾತ್ಸಾರ ಮನೋಭಾವನೆಯೇ ಮುಖ್ಯ ಕಾರಣ ಎಂಬುದು ಈ ಒಂದು ಉದಾಹರಣೆಯಿಂದ ಯಾರಿಗೂ ಗೊತ್ತಾಗದೆ ಇರಲಾರದು. ಹೀಗೆ ಈ ಇಲಾಖಾ ಅಧಿಕಾರಿಗಳ ಮನೋಧರ್ಮವು ಸರಿಯಾಗಿಲ್ಲದಿರುವುದರಿಂದಲೇ ಈ ದಿವಸ ಈ ಕೆರೆ ರಿಪೇರಿ ಇತ್ಯಾದಿಗಳ ಕೆಲಸವು ಬಹಳ ನಿಧಾನವಾಗುತ್ತಿದೆ. ಇದರ ಜೊತೆಗೆ ಹಳ್ಳಿಗಳಲ್ಲಿ ಪಾರ್ಟಿ ಪಂಗಡಗಳು ಬೇರೆ. ಒಂದು ಪಾರ್ಟಿ ಕೆರೆ ಆಗಬೇಕು ಎಂದರೆ ಮತ್ತೊಂದು ಪಾರ್ಟಿ ಆ ಕೆರೆ ಆಗಕೂಡದು ಎಂದು ಹೇಳುತ್ತಿದ್ದಾರೆ. ಹೀಗಾಗಿ ಜನರ ಕೋರ್ಟಿಗೆ ಬಿದ್ದು ಸಾವಿರಾರು ರೂಪಾಯಿಗಳನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಹೀಗೆ ಪಾರ್ಟಿಗಳು ಅನಾಯಾಸವಾಗಿ ಕೋರ್ಟು-ಕಛೇರಿಗಳನ್ನು ಹತ್ತಲು ಅವಕಾಶವಾದದ್ದು ಕೂಡ ಈ ಸರ್ಕಾರದವರ ಈ ತಾತ್ಸಾರ ಮನೋಭಾವನೆಯಿಂದಲೇ ಎಂದು ಹೇಳಬೇಕಾಗಿದೆ. ಸರ್ಕಾರದವರು ಇಂಥ ಸಂದರ್ಭಗಳಲ್ಲಿ ನಿರ್ದಾಕ್ಷಿಣ್ಯವಾಗಿ ಈ ಕೆಲಸ ಆಗುತ್ತದೆ, ಆ ಕೆಲಸ ಆಗುವುದಿಲ್ಲ ಎಂದು

(ಶ್ರೀ ಕೆ. ಪ್ರಭಾಕರ್.)

ಖಚಿತವಾಗಿ ಕಾಲಕ್ಕೆ ಸರಿಯಾಗಿ ತಿಳಿಸಿದ್ದರೆ ಹಾಗೆ ಆ ಜನಗಳು ದುಡ್ಡನ್ನು ಹಾಳುಮಾಡಿಕೊಳ್ಳುವುದಾದರೂ ತಪ್ಪುತ್ತಿತ್ತು. ಆದರೆ ಸರ್ಕಾರದವರು ಹೀಗೆ ಒಂದು ತೀರ್ಮಾನ ಕೊಡತಕ್ಕದ್ದನ್ನು ನಿಧಾನ ಮಾಡುವುದರಿಂದ ಆ ಜನರು ಕೋರ್ಟಿಗೆ ಹೋಗುವುದಕ್ಕೆ ಅವಕಾಶವಾಗುತ್ತದೆ. ಇನ್ನಾದರೂ ಸರ್ಕಾರದವರು ಈ ಮನೋಧರ್ಮವನ್ನು ಕಮ್ಮಿಮಾಡಬೇಕು. ಸಾಧ್ಯವಾದಮಟ್ಟಿಗೂ ಅಂಕೀ ಅಂಶಗಳನ್ನು ಜೋಡಿಸಿಕೊಂಡು ಯಾವ ಒಂದು ಕೆಲಸವೇ ಆಗಲಿ ಅದು ಸಾಧ್ಯವಾಗುತ್ತದೆ ಅಥವಾ ಇಲ್ಲ ಅನ್ನುವುದನ್ನು ಜಾಗ್ರತೆಯಾಗಿ ಜನರಿಗೆ ತಿಳಿಸುವಂತಾಗಬೇಕು. ಸರ್ಕಾರದವರು ಇಷ್ಟನ್ನಾದರೂ ಮಾಡದಿದ್ದರೆ ಆ ಬಡಜನಗನ್ನು ತಾವೇ ಆ ಕೋರ್ಟುಗಳಿಗೆ ಬಲಿಕೊಟ್ಟು ಹಾಗೆ ಆಗುತ್ತದೆ. ಆದುದರಿಂದ ಸರ್ಕಾರದವರು ಕೂಡಲೇ ಈ ನ್ಯೂನತೆಗಳನ್ನೆಲ್ಲಾ ತಪ್ಪಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ತಾವು ಇಷ್ಟನ್ನೆಲ್ಲಾ ಹೇಳುತ್ತಿರುವುದು ಆ ತಮ್ಮ ಮಂಚೇನಹಳ್ಳಿ ಕೆರೆ ವಿಚಾರಕ್ಕಾಗಿ ಅಲ್ಲನೇ ?

ಶ್ರೀ ಕೆ. ಪ್ರಭಾಕರ್.—ಆ ಕೆರೆಗೆಲ್ಲಾ ಸುಮಾರು 14-15 ಸಾವಿರ ರೂಪಾಯಿಗಳ ಅಂದಾಜು ತಯಾರಿಸಲಾಗಿತ್ತು. ಆದರೆ ಏಕೋ ಏನೋ ಆ ಎಸ್ಟಿಮೇಟ್ ಇನ್ನೂ ಸರ್ಕಾರದವರ ಮುಂದೆ ಬರುವುದಕ್ಕೆ ಅದಕ್ಕೆ ಸಾಧ್ಯವಾಗಿಲ್ಲ. ಸ್ಥಳೀಯ ಅಧಿಕಾರಿಗಳ ಮನೋಭಾವ ಹೀಗೆಲ್ಲಾ ಇರುವುದು ಖಂಡಿತ ಸರಿಯಾದದ್ದಲ್ಲ; ಸಾಧುವಾದದ್ದಲ್ಲ ಎಂದು ಹೇಳುತ್ತೇನೆ. ಇದೇ ರೀತಿ ನಮ್ಮ ನೆಲಮಂಗಲದ ತಾಲ್ಲೂಕಿನಲ್ಲೇ ಮತ್ತೊಂದು ಕೆರೆ ಮರಗದ ಕೆರೆ ಎಂದು ಇದೆ. ಇದರ ರಿಪೇರಿ ಬಗ್ಗೆ 60 ಸಾವಿರ ರೂಪಾಯಿಗಳ ಅಂದಾಜನ್ನು ತಯಾರಿಸಲಾಗಿತ್ತು. ಆದರೆ ಸರ್ಕಾರದವರು ಅದರ ಕೆಲಸವನ್ನಾದರೂ ಬೇಗ ಕೈಗೊಳ್ಳಬಹುದೆಂದು ನಾವೆಲ್ಲರೂ ತಿಳಿದುಕೊಂಡಿದ್ದೆವು. ಆದರೆ ಅದೂ ಕೂಡ ಇನ್ನೂ ಹಾಗೆಯೇ ಹಿಂದಕ್ಕೆ ಬಿದ್ದಿದೆ. ಆ ಒಂದು ಕೆರೆಯನ್ನು ರೆಸ್ಟೋರ್ ಮಾಡಿದರೆ ಸಾವಿರಾರು ಎಕರೆ ಜಮೀನು ಸಾಗುವಳಿಗೆ ಬರುತ್ತದೆ. ಇದಕ್ಕಿಂತಲೂ ಪವಿತ್ರವಾದಂಥ ಕೆಲಸ ನಮ್ಮ ಸರ್ಕಾರಕ್ಕೆ ಮತ್ತೆ ಯಾವುದಿದೆಯೋ ಅದು ನನಗೆ ಗೊತ್ತಿಲ್ಲ. ಇದೇ ರೀತಿ ಲಕ್ಷ್ಮೀಪುರದ ಕೆರೆಯನ್ನು ರಿಪೇರಿಮಾಡಿಸಿಕೊಡಿ ಎಂದು ಎಷ್ಟೋ ದಿವಸಗಳಿಂದಲೂ ಕೇಳುತ್ತಿದ್ದೇವೆ. ಸರ್ಕಾರದವರೂ ಕೂಡ ಇರಿಗೇಷನ್ ಬಾಬಿಗೆ ಹೆಚ್ಚು ನಿಗಾ ಕೊಡುತ್ತಿದ್ದೇವೆಂದು ಹೇಳುತ್ತಾರೆಯೇ ಹೊರತು—ಮಾಡುತ್ತಿಲ್ಲ. ಈ ಇರಿಗೇಷನ್ ಮತ್ತು ಅಗ್ರಿಕಲ್‌ಚರ್ ಈ ಎರಡು ಬಾಬುಗಳನ್ನೂ ಒಟ್ಟು ಕೂಡಿಸಿ ಇದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕ ಮಾಡಿ ಎಂದು ಕೇಳುತ್ತಿದ್ದೇವೆ. ಆದರೆ ತಾವು ಈ ವಿಚಾರಕ್ಕೂ ಸಹ ಯಾವ ಗಮನವನ್ನೂ ಕೊಟ್ಟಿಲ್ಲ. ವಿಧಾನ ಸೌಧಕ್ಕೆ ಬೇಕಾದರೆ ತಾವು ಒಬ್ಬ ಸ್ಪೆಷಲ್ ಇಂಜಿನಿಯರನ್ನು ನೇಮಕಮಾಡುವುದಕ್ಕೆ ಇದೆ; ಇದಕ್ಕಾದರೆ ಇಲ್ಲ ಎಂದು ಹೇಳುತ್ತೀರಿ. ಮೈಸೂರು ದೇಶದಲ್ಲಿ ಈ ಕೆರೆಗಳ ಜೀರ್ಣೋದ್ಧಾರ ಕಾರ್ಯಕ್ಕಿಂತ ಮತ್ತೊಂದು ಪವಿತ್ರವಾದ ಕೆಲಸ ಸರ್ಕಾರಕ್ಕೆ ಯಾವುದಿದೆ? ಆದುದರಿಂದ ಈ ಎರಡು ಬಾಬುಗಳನ್ನೂ ಒಟ್ಟಾಗಿ ಸೇರಿಸಿ ಇದಕ್ಕೆ ಒಬ್ಬ ಸ್ಪೆಷಲ್ ಇಂಜಿನಿಯರನ್ನು ಹಾಕಿ ಬೇಗ ಬೇಗ ಈ ಕೆಲಸಕಾರ್ಯಗಳು ನಡೆಯುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಈ ವಿಚಾರವನ್ನು ಎಷ್ಟೋ ಸಾರ್ತಿ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಆದಾಗ್ಗೂ ಅವರು ಇದಕ್ಕೆ ನಿಗಾ ಕೊಟ್ಟಿಲ್ಲ. ಆದರೂ ಚಿಂತೆಯಿಲ್ಲ. ಈಗಲಾದರೂ ಸರ್ಕಾರದವರು ಈ ಮೈನರ್ ಕೆರೆಗಳ ಜೀರ್ಣೋದ್ಧಾರ ಕಾರ್ಯದ ಬಗ್ಗೆ ಒಬ್ಬ ಸ್ಪೆಷಲ್ ಇಂಜಿನಿಯರ್ ಅನ್ನು ನೇಮಕಮಾಡಿ, ಒಂದು ಪ್ರತ್ಯೇಕ ಇಲಾಖೆಯನ್ನೇ ಸ್ಥಾಪಿಸಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ಇದುವರೆಗೆ ಕೆಲವು ಮಾನ್ಯ ಸದಸ್ಯರು ಮಲೆನಾಡಿನ ವಿಚಾರದಲ್ಲಿ ಕೆಲವು ಅಂಶಗಳನ್ನು ಹೇಳಿದ್ದಾರೆ, ನಾನು ಒಂದೆರಡು ವಿಷಯಗಳನ್ನು ವಿಜ್ಞಾಪನೆಮಾಡಿಕೊಳ್ಳುತ್ತೇನೆ. ಮಲೆನಾಡನ್ನು ನೋಡದೆ ಇರುವವರು ಅಲ್ಲಿಗೊಂದು ಸಾರಿ ಬಂದು ನೋಡಿದರೆ ಅಲ್ಲಿನ ಕಷ್ಟ ಗೊತ್ತಾಗುತ್ತದೆ. ಅಲ್ಲಿ ಮಳೆಯೇನೋ ಜಾಸ್ತಿ, ಆದರೆ ನೀರು ಮಾತ್ರ ಅಲ್ಲಿ ನಿಲ್ಲುವುದಿಲ್ಲ. ಆ ನೀರೆಲ್ಲಾ ತುಮಕೂರು, ಚಿತ್ರದುರ್ಗ, ಬೆಂಗಳೂರು ಜಿಲ್ಲೆಗಳಿಗೆ ಹೋಗುತ್ತದೆಯೇ ಹೊರತು ಅಲ್ಲಿ ನಿಲ್ಲುವುದಿಲ್ಲ. ಆದುದರಿಂದ ಹಾಗೆ ಬೀಳುವ ನೀರನ್ನು ಅಲ್ಲೇ ತಡೆಗಟ್ಟಲು ಕೆರೆಗಳನ್ನು ಮಾಡಿಕೊಡಿ ಎಂದು ನಾವು ಕೇಳಿದರೆ ಕೋಲಾರ, ಚಿತ್ರದುರ್ಗ, ತುಮಕೂರು ಜಿಲ್ಲೆಯವರು ನಮ್ಮ ಮೇಲೇಕೆ ಬೀಳಬೇಕೋ ಗೊತ್ತಾಗುವುದಿಲ್ಲ. ಭದ್ರ ಅಣೆಕಟ್ಟಾಗಲಿ ಭದ್ರಾವತಿ ಕಾರ್ಖಾನೆಗಳಾಗಲಿ ಮಲೆನಾಡಿನಲ್ಲಿದ್ದರೂ ಅವುಗಳ ಫಲವನ್ನನುಭವಿಸುವವರು ಬೇರೆ ಜಿಲ್ಲೆಗಳವರು. ಅವುಗಳಿಂದ ನಮ್ಮಗಳಿಗೆ ಸುಖವಿಲ್ಲ. ನಮ್ಮ ಮಲೆನಾಡಿನಲ್ಲಿ ಕೆರೆಗಳನ್ನು ನಿರ್ಮಾಣಮಾಡಿದರೂ ಬೇಕಾದಷ್ಟು ಭತ್ತವನ್ನು ಬೆಳೆದು ಸಮಗೆಲ್ಲಾ ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ಮುಖ್ಯವಾಗಿ ಮಲೆನಾಡಿಗೆ ಕೆರೆಗಳು ಬೇಕು. ಶಿವಮೊಗ್ಗ, ಚಿಕ್ಕಮಗಳೂರು ಹಾಸನ ಈ ಜಿಲ್ಲೆಗಳಲ್ಲಿ ಹೆಚ್ಚು ಕೆರೆಗಳನ್ನು ಜೀರ್ಣೋದ್ಧಾರಮಾಡಿ ಹೆಚ್ಚು ರಸ್ತೆಗಳನ್ನು ಮಾಡಿದರೆ ಅಲ್ಲಿಗೆ ಎಲ್ಲಾ ಅನುಕೂಲಗಳನ್ನೂ ಕಲ್ಪಿಸಿದಹಾಗಾಗುತ್ತದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಜಾಸ್ತಿ ಅನುಕೂಲಗಳು ಬೇಕಾಗಿರುವ ಮಲೆನಾಡು ಪ್ರದೇಶಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕೆಂದು ವಿಜ್ಞಾಪಿಸುತ್ತೇನೆ.

ಇನ್ನು ಕೆರೆಗಳ ಜೀರ್ಣೋದ್ಧಾರದ ಸಂಬಂಧವಾಗಿ ವಸೂಲುಮಾಡುವ ಕಾಂಟ್ರಿಬ್ಯೂಷನ್ ವಿಚಾರ. ಒಂದು ಕೆರೆಯ ಕಾಮಗಾರಿಗೆ 80 ಸಾವಿರ ರೂಪಾಯಿ ಅಂದಾಜಾದರೆ 25 ಸಾವಿರದವರೆಗೆ ಕಾಂಟ್ರಿಬ್ಯೂಷನ್ ವಸೂಲಿ ಮಾಡುತ್ತಾರೆ. ಹೀಗಿದ್ದರೂ ವಾಟರ್ ರೇಟ್ ಎಂದು ಕಂದಾಯದಮೇಲೆ ಹಾಕುವ ಅಭ್ಯಾಸ ಬಹಳ ಅನ್ಯಾಯವೆಂದು ನಾನು ಹೇಳುತ್ತೇನೆ. ಎಷ್ಟು ಅಚ್ಚುಕಟ್ಟಿದ್ದರೂ ಅದರಮೇಲೆ ಎಷ್ಟು ಕಂದಾಯ ನಿರ್ಧರವಾಗಿದೆಯೋ ಅದನ್ನು ಕೊಡುತ್ತೇವೆ. ಆದರೂ ಕೆರೆ ಜೀರ್ಣೋದ್ಧಾರವಾದಮೇಲೆ ಲ್ಯಾಂಡ್ ರೆವಿನ್ಯೂ ಮತ್ತು ವಾಟರ್‌ರೇಟ್ ಎಂದು ಪುನಃ ವಿಧಿಸುವುದು ಬಹಳ ದುಬಾರಿ. ಇದು ಮಂತ್ರಿಗಳಿಗೂ ಚೆನ್ನಾಗಿ ಗೊತ್ತಿದೆ, ಇದು ನ್ಯಾಯವಲ್ಲ. ಆದುದರಿಂದ ಇದರ ಬಗ್ಗೆ ನಿರ್ದಿಷ್ಟವಾಗಿ ಕಾನೂನುಮಾಡಿ ಇದನ್ನು ತಪ್ಪಿಸಬೇಕೆಂದು ಮನವಿ.

ಇನ್ನು ಅಚ್ಚುಕಟ್ಟಿನ ವಿಷಯ. ಕೆರೆಗಳ ಅಚ್ಚುಕಟ್ಟುಗಳನ್ನು ನಿರ್ದಿಷ್ಟವಾಗಿ ನಿಗದಿಮಾಡಿದಮೇಲೆ ಜಾಸ್ತಿ ಜಮೀನಿಗೆ ನೀರು ಕೊಡುತ್ತಾರೆ, ಇದರಿಂದ ಅನೇಕಕಡೆ ಜಗಳಗಳು ಉಂಟಾಗಿವೆ. ನೀರು ಸರದಿ ಕೊಟ್ಟು ಅವರು 5 ವರ್ಷ ಉಪಯೋಗಿಸಿದಮೇಲೆ ಅವರಿಗೆ ಖಾಯಂ ನೀರು ಸರದಿ ಕೊಡಬೇಕೆಂದಿದೆ.

ಈ ರೀತಿ ಕೊಟ್ಟ ಪಕ್ಷದಲ್ಲಿ ಬರಬರುತ್ತಾ ಅಚ್ಚುಕಟ್ಟು ಜಾಸ್ತಿಯಾಗಿ ನೀರು ಸಾಕಾಗುವುದಿಲ್ಲ. ಆದುದರಿಂದ ನಿರ್ದಿಷ್ಟವಾಗಿ ಎಷ್ಟು ಅಚ್ಚುಕಟ್ಟಿಗೆ ನೀರು ಕೊಡಲು ಸಾಧ್ಯವೋ ಅಷ್ಟಕ್ಕೆ ಮಾತ್ರ ನೀರು ಒದಗಿಸಬೇಕೆಂದು ಮನವಿ.

ಸ್ವಾಮಿ, ಮೈನರ್ ಮೇಜರ್ ಕೆರೆಗಳ ವಿಚಾರದಲ್ಲಿ ಶ್ರೀಮಾನ್ ತಿಮ್ಮಪ್ಪಗೌಡರು ಹೇಳಿದಹಾಗೆ ಹಿಂದೆಂದೂ ಆಗದಿದ್ದಷ್ಟು ಕೆರೆಗಳು ಈಗ ಜೀರ್ಣೋದ್ಧಾರವಾಗುತ್ತಿವೆ. ಇದು ಅಭಿನಂದನಾರ್ಹವಾದುದು. ಈ ವಿಚಾರದಲ್ಲಿ ನಿರ್ದಿಷ್ಟವಾದ ಯೋಜನೆಮಾಡಿಕೊಳ್ಳಬೇಕು. ಎಷ್ಟು ಕೆರೆಗಳಿವೆ, ಎಷ್ಟು ಜೀರ್ಣೋದ್ಧಾರವಾಗಬೇಕು ಎಂಬುದನ್ನು ಲೆಖ್ಖ ಹಾಕಿಕೊಂಡು ಜಾಗ್ರತೆ ಅಂದಾಜುಗಳನ್ನು ತಯಾರ್ಮಾಡಿಸಿ ಒಂದು ಗೊತ್ತಾದ ಕಾಲಾವಧಿಯಲ್ಲಿ ಎಲ್ಲವನ್ನೂ ಜೀರ್ಣೋದ್ಧಾರ ಮಾಡಿದರೆ ಸರ್ಕಾರದವರು ವಂದನಾರ್ಹರಾಗುತ್ತಾರೆ. ಈ ಬಗ್ಗೆ ಒಂದು ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಂಡು ಮುಂದುವರಿಯಬೇಕೆಂದು ನನ್ನ ಸಲಹೆ.

ನಮ್ಮ ತರೀಕೆರೆ ತಾಲ್ಲೂಕಿನ ಅನೇಕ ಕೆರೆಗಳ ವಿಚಾರದಲ್ಲಿ ಹೇಳಿದ್ದೇನೆ, ಮಲ್ಲೇನಹಳ್ಳಿ ಕೆರೆ ಕಾಮಗಾರಿಗೆ ದೊಡ್ಡ ಮನಸ್ಸುಮಾಡಿ ಸುಮಾರು 5 ಲಕ್ಷ ರೂಪಾಯಿಗೆ ಅಂದಾಜು ತಯಾರುಮಾಡಿಸಿ ಅದನ್ನ ಮಂಜೂರುಮಾಡಿದ್ದಾರೆ. ಇದರಿಂದ ತರೀಕೆರೆಗೆ ಅನುಕೂಲವಾಗುತ್ತದೆ. ಆದಷ್ಟು ಜಾಗ್ರತೆ ಈ ಕೆಲಸವನ್ನು ಪ್ರಾರಂಭಮಾಡುವುದಕ್ಕೆ ಏರ್ಪಾಡು ಮಾಡುತ್ತಾರೆಂದು ನಂಬಿದ್ದೇನೆ.

* ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ಕೆಲಸ ಕಾರ್ಯಗಳ ವಿಮರ್ಶೆಯನ್ನು ನಡೆಸತಕ್ಕ ಸಂದರ್ಭದಲ್ಲಿ ಈ ಇಲಾಖೆಯ ಆಡಳಿತ ಹೇಗೆ ನಡೆಯುತ್ತಿದೆ ಎಂಬುದನ್ನು ಸ್ವಲ್ಪಮಟ್ಟಿಗೆ ವಿಮರ್ಶೆಮಾಡುವುದಾದರೆ ಈ ಇಲಾಖೆಯಲ್ಲಿ ಕೆಲವು ವರ್ಷಗಳ ಹಿಂದೆ ಕಾಣುತ್ತಿದ್ದ ಅನೈಪುಣ್ಯತೆ, ದಕ್ಷತಾಹೀನತೆ ಈಗ ಕಡಿಮೆಯಾಗುತ್ತಾ ಬಂದು ಕೆಲಸಕಾರ್ಯಗಳು ಬಹುಮಟ್ಟಿಗೆ ಬಿರುಸಾಗಿಯೂ ಚುರುಕಾಗಿಯೂ ನಡೆಯುತ್ತಿರುವಂತೆ ಕಾಣುತ್ತದೆ. ಪಂಚವಾರ್ಷಿಕ ಯೋಜನೆಯಲ್ಲಿ ಸೇರಿದ ಕೆಲಸಗಳು ಗೊತ್ತುಮಾಡಿದ ಒಂದು ಅವಧಿಯಲ್ಲೇ ಮುಗಿಯುವ ಹಾಗೆ ಕೆಲಸ ನಡೆದಿರುವುದು ನಮ್ಮ ಕಣ್ಣಿಗೆ ಕಾಣುತ್ತದೆ. ಹಿಂದಿದ್ದ ದಕ್ಷತೆಯ ಕೊರತೆ ಈಗ ನಿವಾರಣೆಯಾಗಿ ಕೆಲಸ ಸುಗಮವಾಗಿ ನಡೆಯುವುದು ನಮ್ಮ ಕಣ್ಣಿಗೆ ಕಾಣುತ್ತಿದೆ. ಇದು ಇನ್ನೂ ಉತ್ತಮಮಟ್ಟಕ್ಕೆ ಬಂದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೆಲಸಕಾರ್ಯಗಳು ನಡೆಯುವುದಕ್ಕೆ ಅನುಕೂಲವಾಗುವಂತೆ ವ್ಯವಸ್ಥೆಗೊಳಿಸಬೇಕೆಂದು ಸಲಹೆ ಕೊಟ್ಟು ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಒಂದೆರಡು ಅಂಶಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಹಿರಿಯೂರು ತಾಲ್ಲೂಕಿನಲ್ಲಿ ವಾಣಿವಿಲಾಸ ಸಾಗರ ಕೆರೆಯಿದೆ. ಹಿಂದೆ ಇದರಿಂದ 25 ಸಾವಿರ ಎಕರೆ ಜಮೀನಿಗೆ ನೀರನ್ನೊದಗಿಸಲು ಸಾಧ್ಯವೆಂದು ಅಂದಾಜುಮಾಡಿ ಈ ಕೆರೆಯನ್ನು ಕಟ್ಟಿಸಿದರು. ಆದರೆ ಈಗ ಇದಕ್ಕೆ ನೀರು ಸರಿಯಾಗಿ ಬರದೇ 20 ವರ್ಷಗಳಿಗೊಂದು ಸಾರಿ ಕೂಡ ಈ ಕೆರೆ ತುಂಬುತ್ತಿಲ್ಲ, ಇದರಿಂದ ಎಷ್ಟು ಜಮೀನು ಸಾಗುವಳಿಯಾಗುತ್ತದೆಂದು ಅಂದಾಜು ಮಾಡಿದ್ದರೂ ಅಷ್ಟು ಆಗದೆ ಇದುವರೆಗೆ ಕೇವಲ 10-12 ಸಾವಿರ ಎಕರೆವರೆಗೆ ಇದ್ದು ಈಚೆಗೆ 14-15 ಸಾವಿರ ಎಕರೆವರೆಗೆ ಜಮೀನು ಸಾಗಾಗುತ್ತಿದೆ. ಸಾಕಷ್ಟು ನೀರು ಒದಗದೆ ರೈತರಲ್ಲಿ ವ್ಯವಹಾರಗಳು ಹುಟ್ಟಿ ಅವರು ತೊಂದರೆಯನ್ನನುಭವಿಸುತ್ತಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟೋ ಜನರು ಅಕ್ರಮವಾಗಿ ನೀರನ್ನು ತೆಗೆದುಕೊಳ್ಳುತ್ತಿದ್ದಾರೆಂಬುದು ಗೊತ್ತಿದೆ.

ಶ್ರೀ ವಿ ಮಸಿಯಪ್ಪ.—ಈಗ ಇದನ್ನು ವಿಚಾರಣೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಸಾಕಷ್ಟು ನೀರನ್ನೊದಗಿಸಲು ಏರ್ಪಾಡುಮಾಡಬೇಕೆಂದು ಪದೇಪದೇ ಜನರು ರೆವಿನ್ಯೂ ಮಂತ್ರಿಗಳಲ್ಲಿಯೂ ರೆವಿನ್ಯೂ ಅಧಿಕಾರಿಗಳಲ್ಲಿಯೂ ಮನವಿ ಮಾಡಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ನಾನು ಸ್ವಲ್ಪಮಟ್ಟಿಗೆ ಈ ಕೆರೆಯ ಚರಿತ್ರೆಯನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಕೆರೆಯನ್ನು ಕಟ್ಟಿದ ಕಾಲದಲ್ಲಿ ಈ ಕೆರೆಯಮೇಲೆ ಸುಮಾರು 800 ಮೈನರ್ ಮತ್ತು 70 ಮೇಜರ್ ಕೆರೆಗಳಿದ್ದವು. ಈಚೆಗೆ ಅನೇಕ ಮೈನರ್ ಮತ್ತು ಮೇಜರ್ ಕೆರೆಗಳು ಹೊಸದಾಗಿ ನಿರ್ಮಿತವಾಗಿ ಇದಕ್ಕೆ ಬರುವ ನೀರಿನ ಪ್ರಮಾಣ ಕಡಮೆಯಾಗಿದೆ. ಅಲ್ಲದೆ ಹೂಳು ಬೇರೆ ತುಂಬಿಕೊಂಡಿರುವುದರಿಂದ ನೀರು ಕಡಮೆಯಾಗಿ ರೈತರಿಗೆ ತೊಂದರೆಯಾಗಿದೆ. ಇದಕ್ಕೆ ಯಗಚಿ ಹೊಳೆಯಿಂದ ಒಂದು ಫೀಡರ್ ನಾಲೆಯನ್ನು ತೆಗೆಯಲು ಸಾಧ್ಯವೆಂದು ಆಗಿನ ಕಾಲದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಒಂದು ಸಲಹೆಯನ್ನು ಕೊಟ್ಟಿದ್ದರು. ಅದನ್ನು ಇಲ್ಲಿಯವರೆಗೆ ಕಾರ್ಯಗತ ಮಾಡುವುದಕ್ಕಾಗಿಲ್ಲ. ಈಚೆಗೆ ಇದರಿಂದ ಅಷ್ಟು ಪ್ರಯೋಜನವಾಗುವುದಿಲ್ಲವೆಂದು ಇಲಾಖೆಯವರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆಂದು ತಿಳಿದುಬಂದಿದೆ. ಹೀಗೆ ಯಾವ ವಿಧದಿಂದಲೂ ನೀರನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ನಡೆದಿಲ್ಲ. ಸಾಗುವಳಿಯನ್ನು ಹೆಚ್ಚಿಸಲೂ ಸಾಧ್ಯವಾಗಿಲ್ಲ. ಇರತಕ್ಕ ನೀರನ್ನೂ ಸರಿಯಾದ ರೀತಿಯಲ್ಲಿ ಹಂಚುವುದಕ್ಕೆ ಏರ್ಪಾಡುಮಾಡಿ ಎಂದರೆ ಅದನ್ನೂ ಮಾಡಿಲ್ಲ. ಪರಿಸ್ಥಿತಿ ಏನಾಗಿದೆಯೆಂದರೆ, ಕಾಲುವೆಗಳನ್ನು ತೆಗೆದಾಗ ಹರಿಯುತ್ತಿದ್ದ ನೀರಿನ ಪ್ರಮಾಣ ಈಗ ಕಡಮೆಯಾಗಿದೆ. ಅರ್ಧದಿಂದ ಒಂದಡಿಯವರೆಗೆ ಹೂಳುಬಿದ್ದು ತೂಬುಗಳು ಸರಿಯಾಗಿಲ್ಲ. ಇದರಿಂದ ಬರತಕ್ಕ ನೀರಿನ ಬಹುಭಾಗ ಹಳ್ಳಕ್ಕೆ ಬಿದ್ದು ದಂಡವಾಗುತ್ತಿದೆ. ಈ ವಿಚಾರವನ್ನು ರೆವಿನ್ಯೂ ಮಂತ್ರಿಗಳು ಬಂದಾಗ ಅವರ ಗಮನಕ್ಕೆ ತರಲಾಗಿದೆ. ಮೂವತ್ತು ನಲವತ್ತು ಸಾವಿರ ರೂಪಾಯಿ ಖರ್ಚುಮಾಡಿ ಕಾಲುವೆಯಲ್ಲಿ ಹತ್ತು ಹನ್ನೆರಡು ಮೈಲಿ ಹೂಳು ತೆಗೆಸಿದ್ದಾರೆ. ಇದರಿಂದಾಗತಕ್ಕ ಉಪಕಾರವನ್ನು ತಮಗೆ ತಿಳಿಸಿದರೆ ಗೊತ್ತಾಗುತ್ತದೆ.

12 ಮೈಲಿ ಸಿಲ್ಟ್ ತೆಗೆದಿರುವುದರಿಂದ ನಾಲೆಯನ್ನು ಉಪಯೋಗಿಸುತ್ತಿದ್ದಾರೆ. ಇವೊತ್ತು ಅದರಿಂದ ನಾಲ್ಕಾಣೆ ಭಾಗ cost ಕಡಿಮೆಯಾಗಿದೆ. ಅದನ್ನು ನಾನು ಬಹಳ ಸಂತೋಷದಿಂದ ಹೇಳುತ್ತೇನೆ. ಕಾಲುವೆ 18 ಮೈಲಿ ಇದೆ. ಅದನ್ನು desilt ಮಾಡುವುದನ್ನು ತಪ್ಪಿಸುವುದಕ್ಕೆ ಮತ್ತು controlling arrangements ಮಾಡುವುದಕ್ಕೆ ಒಂದು ಎಸ್ಟಿಮೇಟ್ ಕೂಡ ತಯಾರಾಗಿ ಸರ್ಕಾರಕ್ಕೆ ಬಂದಿದೆ. ಇವೆಲ್ಲವನ್ನೂ ಕೂಡ ಸರ್ಕಾರದವರು ಜಾರಿಗೆ ಕೊಟ್ಟು ಕಾರ್ಯವನ್ನು ಪೂರೈಸಿದರೆ ನಾಲೆ ಸದುಪಯುಕ್ತವಾಗಿ ನೀರು ಉಪಯೋಗವಾಗುವುದಕ್ಕೆ ಅವಕಾಶವಾಗುತ್ತದೆ.

ಮಲೆನಾಡಿನವರಿಗೂ ಬಯಲು ಸೀಮೆಯವರಿಗೂ ಇಷ್ಟು ಹೊತ್ತೂ ವಾದ ಬಹಳ ಜೋರಾಗಿ ನಡೆಯಿತು. ಅದು ಏತಕ್ಕೋಸ್ಕರ ನಡೆಯಬೇಕೋ ನನಗೆ ಅರ್ಥ

(ಶ್ರೀ ವಿ. ಮಾಸಿಯಪ್ಪ.)

ವಾಗುವುದಿಲ್ಲ. ದೇಶದ ಯಾವುದೇ ಒಂದು ಭಾಗ ಮುಂದುವರಿದರೆ ಅದರಿಂದ ಯಾವ ಉಪಕಾರವೂ ಇಲ್ಲ. ಯಾವುದೇ ಒಂದು ಭಾಗ ಹಿಂದೆ ಉಳಿದಿದ್ದರೆ ಅದರಿಂದ ಅಪಕಾರವೂ ಇಲ್ಲ. ನಾವು ಒಂದು ದೇಶವನ್ನು ಸಮಗ್ರವಾಗಿ ತೆಗೆದುಕೊಂಡು ನೋಡಬೇಕೇ ವಿನಾ, ಒಂದು ಭಾಗದಲ್ಲಿ ಹೆಚ್ಚಾಗಬೇಕು, ಇನ್ನೊಂದು ಭಾಗದಲ್ಲಿ ಕಡಿಮೆಯಾಗಬೇಕು ಎನ್ನುವ ದೃಷ್ಟಿಯಿಂದ ನೋಡಬಾರದು. ಈ ವಾದ ಅಷ್ಟು ಸರಿಯಾದುದಲ್ಲ. ನಮ್ಮ ಮಿತ್ರರನೇಕರು ಮಲೆನಾಡಿನಲ್ಲಿ ಕೆರೆಗಳನ್ನು ಮಾಡಿಸಿಕೊಡಿ, ಭತ್ತವನ್ನು ಬೆಳೆದು ಬಯಲು ಸೀಮೆ ಯವರಿಗೆ ಸಾಗಿಸಿ ಕೊಡುತ್ತೇವೆ ಎಂದು ಹೇಳಿದರು. ಹೀಗೆ ಮಾಡಿದರೆ ಬಯಲು ಸೀಮೆಯವರು ಸಮರಸ ವಾಗಿರುವುದಕ್ಕೆ ಆಗುವುದಿಲ್ಲ. ಮಲೆನಾಡಿನವರೂ ಸಹ ಸತತವಾಗಿ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಬಯಲು ಸೀಮೆಯವರಿಗೂ ಸಹ ಬೆಳೆಯುವುದಕ್ಕೆ ಅವಕಾಶ ವಿರಬೇಕು. ಮಲೆನಾಡಿನವರಿಗೆ ಎಷ್ಟು ಮಟ್ಟಿಗೆ ನೀರಿನ ಅವಶ್ಯಕತೆ ಇದೆಯೋ ಅಷ್ಟನ್ನೂ ಮಾಡಿಕೊಡಿ. ಅದಕ್ಕೆ ಅಡ್ಡಿ ಏನಿದೆ ಎಂಬುದನ್ನು ತಿಳಿಸಬೇಕು.

ಈಗಿರತಕ್ಕ ಸರ್ಕಾರದ ಮತ್ತು ಪಬ್ಲಿಕ್ ವರ್ಕ್ಸ್ ನೀತಿಯ ಪ್ರಕಾರ ಬರಗಾಲದ ಪ್ರದೇಶಗಳೆಂದು ಚಿತ್ರ ದುರ್ಗ, ಕೋಲಾರ ಮತ್ತು ತುಮಕೂರು ಜಿಲ್ಲೆಗಳಿಗೆ ಹೇಳುತ್ತಾರೆ. ಆ ಪ್ರದೇಶಗಳಲ್ಲಿ ತಾವು ಕನಿಷ್ಠ ಪಕ್ಷ ಶೇಕಡ 3 ರಿಟರ್ನ್ ಬರತಕ್ಕ ಸಂದರ್ಭದಲ್ಲಿ ಮಾತ್ರ ಎಸ್ಟಿಮೇಟುಗಳನ್ನು ಮಂಜೂರು ಮಾಡಬೇಕು ಎನ್ನ ತಕ್ಕ ಒಂದು ನೀತಿಯನ್ನು ಹಾಕಿಕೊಂಡಿದ್ದಾರೆ. ಇದರಿಂದ ಬಹಳ ತೊಂದರೆಯಾಗುತ್ತದೆ. ಯಾವುದೇ proposal ಆ ಕಡೆಯಿಂದ ಬಂದರೂ ಕೂಡ ಖಂಡಿತ ವಾಗಿಯೂ ಶೇಕಡ 3 ವರಮಾನ ಬರುವುದಕ್ಕೆ ಸಾಧ್ಯವಿಲ್ಲ. ಅಂಥದರಲ್ಲಿ ನೀವು ಶೇಕಡ 3 ವರಮಾನ ಬರಬೇಕೆಂದು insist ಮಾಡುತ್ತಾ ಹೋದರೆ ಯಾವ ಎಸ್ಟಿಮೇಟ್‌ತಾನೆ sanction ಆಗುತ್ತದೆ? ಮಲೆ ನಾಡು ಸ್ನೇಹಿತರುತಾನೇ ಆಕ್ಷೇಪಣೆ ಮಾಡುವುದಕ್ಕೆ ಏನು ಅವಕಾಶವಿರುತ್ತದೆ. ಆದುದರಿಂದ ಶೇಕಡ 3 ವರಮಾನ ಬರಬೇಕೆಂದು ಒತ್ತಾಯಮಾಡದೆ ಕನಿಷ್ಟ ಪಕ್ಷ ಶೇಕಡ 1 ವರಮಾನ ಬಂದರೂಕೂಡ ಎಸ್ಟಿಮೇಟು ಗಳನ್ನು sanction ಮಾಡಬೇಕು ಎಂದು ನಾನು ಹೇಳುತ್ತೇನೆ. ಹಿಂದೆ ವಾಣಿ ವಿಲಾಸ ಸಾಗರ ಕಟ್ಟಿದಾಗ, ಆ ಪ್ರದೇಶದಲ್ಲಿ ದನಕರುಗಳಿಗೆ ಮತ್ತು ಜನಗಳಿಗೆ ಕುಡಿಯುವ ನೀರು ದೊರೆಯಲಿ ಎಂಬ ಉದ್ದೇಶದಿಂದ ಮಾಡಿದ್ದು ಈ ದಿವಸ 40-45 ಹಳ್ಳಿ ಗಳಿಗೆ ಸತತವಾಗಿ ಜೀವನವನ್ನು ಒದಗಿಸತಕ್ಕಂಥ ಪರಿಸ್ಥಿತಿಯಲ್ಲಿದೆ. ಯಾತಕ್ಕೆ ನಿಮಗೆ ಕಂದಾಯ ಹೆಚ್ಚು ಮಾಡಬಾರದು ಎಂದು ಕೇಳತಕ್ಕ ಸ್ಥಿತಿಯಲ್ಲಿ ದ್ದೇವೆ. ಶೇಕಡ 1 ವರಮಾನ ಎನ್ನುವುದು ಕಡಿಮೆ ಎಂದು ಕಂಡು ಬಂದರೂಕೂಡ ಕಾಲ ಕ್ರಮೇಣ ಅದ ರಿಂದ ಮಹೋಪಕಾರವಾಗುತ್ತದೆ ಆದುದರಿಂದ ಈಗಿರುವ ನೀತಿಯನ್ನು ಸ್ವಲ್ಪ ಬದಲಾವಣೆ ಮಾಡಿ ಬಯಲು ಸೀಮೆಯಲ್ಲೂ ಕೂಡ ಕಾಮಗಾರಿಗಳನ್ನು ಹೆಚ್ಚಾಗಿ ತೆಗೆದುಕೊಳ್ಳಬೇಕು ಎಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಡಿ. ದೇವರಾಜ ಅರಸ್.—ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳ ಕೆಲಸವನ್ನು ಹೆಚ್ಚಾಗಿ ತೆಗೆದುಕೊಳ್ಳ ಬಾರದು, ಅವನ್ನೆಲ್ಲ ನಿಲ್ಲಿಸಿಬಿಡಬೇಕು, ಈಗ ನಮ್ಮ ದೇಶದಲ್ಲಿ ಆಹಾರೋತ್ಪತ್ತಿ ಬಹಳ ಜಾಸ್ತಿಯಾಗಿ ಬಿಟ್ಟಿದೆ ಎನ್ನುವ ಒಂದು ವಾದ ಹೇಳಿದರು. Minor irrigation ಕೆಲಸಮಾತ್ರ ತೆಗೆದುಕೊಳ್ಳುವುದು ಲೇಸು, ಉಳಿದದ್ದನ್ನೆಲ್ಲ ನಿಲ್ಲಿಸಿದರೆ ಒಳ್ಳೆಯದು ಎಂದು ಅವರು ಮಾತನಾಡಿದರು. ಅದನ್ನೇ ಪುಷ್ಟೀಕರಿಸುತ್ತ ಶ್ರೀ ತಿಮ್ಮಪ್ಪಗೌಡರು ಸಹ ಮಾತನಾಡಿದ್ದಾರೆ. ಈ ವಿಚಾರವನ್ನು ನಾವು ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗಿದೆ.

1951ನೇ ಸೆನ್ಸಸ್ ಪ್ರಕಾರ, ಬಡ್ಜೆಟ್ ಭಾಷಣದಲ್ಲಿ ತಿಳಿಸಿದಹಾಗೆ ಸುಮಾರು ಹನ್ನೊಂದು ಲಕ್ಷ ಎಕರೆಗಳು ಮಾತ್ರ ನಮ್ಮ ಸಂಸ್ಥಾನದಲ್ಲಿ irrigation ಗೆ ಒಳ ಪಟ್ಟಿದೆ. ಅಂದರೆ ಕೆರೆಗಳಿಂದ ನೀರು ಹಾಯಿಸಿ ಕೆಲಸ ಮಾಡತಕ್ಕಂಥವು, irrigation channels ನಿಂದ, ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಿಂದ ಮಾಡ ತಕ್ಕಂಥವು ಎಲ್ಲಾ ಸೇರಿ ಹನ್ನೊಂದು ಲಕ್ಷ ಎಕರೆ ಗಳಾಗುತ್ತವೆ. ಆ Census ಪ್ರಕಾರ total irrigated land ಎಷ್ಟಿದೆ, ಅದರ ಜೊತೆಗೆ ನಮ್ಮ ಮುಂದೆ ಸರ್ಕಾರದವರು ಒದಗಿಸಿಕೊಟ್ಟಿರತಕ್ಕ the activities of the Mysore Public Works Department ಪ್ರಕಾರ ಮೊದಲನೆಯ ಪಾಂಚ ವಾರ್ಷಿಕ ಯೋಜನೆಯಲ್ಲಿ irrigate ಆಗುವುದು ಎಷ್ಟು ಎಂದರೆ :

> "The implementation of Irrigation Schemes in the Plan will result in development of 83,787 acres of fresh lands, besides assuring water supply to nearly 2,965 acres of existing wet lands. With regard to Agriculture, it will assure supplies of water to an aggregate extent of 2.33 lakhs of acres (old) including fresh lands in few cases.''

ಇದನ್ನು ಸೇರಿಸಿಕೊಂಡರೆ ಅಂದರೆ ಈಗ ನಾವು ಕೈಗೊಂಡಿರತಕ್ಕಂಥ ಎಲ್ಲಾ ಪ್ರಜೆಕ್ಟ್‌ಗಳೂ ಪೂರ್ತಿ ಯಾಗಿ 5 ವರ್ಷದ ಯೋಜನೆ ಸಂಪೂರ್ಣವಾಗಿ ಕಾರ್ಯ ಗತವಾದಮೇಲೆ ಸುಮಾರು 2,33,000 ಎಕರೆಗಳು ನಮಗೆ ನೀರಾವರಿಯಿಂದ ಪ್ರಯೋಜನಕ್ಕೆ ಬರತಕ್ಕ ವಾಗಿವೆ. ಈಗ ಮೇಲೆ ಹೇಳಿರತಕ್ಕ acreage ಎಲ್ಲ ವನ್ನೂ ಸೇರಿಸಿಕೊಂಡರೆ 13½ ಲಕ್ಷ, ಹೆಚ್ಚು ಎಂದರೆ 14 ಲಕ್ಷ ಎಕರೆಗಳಷ್ಟು ಮಾತ್ರ ನೀರಾವರಿ ವ್ಯವ ಸಾಯಕ್ಕೆ ಬಂದ ಹಾಗಾಗುತ್ತದೆ. ಇಡೀ ಸಂಸ್ಥಾನ ದಲ್ಲಿರುವ 85 ಲಕ್ಷ ಎಕರೆಯಷ್ಟು ಹಾಲಿ ವ್ಯವಸಾಯ ದಲ್ಲಿರತಕ್ಕ ಪ್ರದೇಶದಲ್ಲಿ ಬರೀ 13-14 ಲಕ್ಷ ಎಕರೆ ಮಾತ್ರ ನೀರಾವರಿ ವ್ಯವಸಾಯದಲ್ಲಿ ಇರುವಾಗ ದೇಶ ದಲ್ಲಿ irrigation projects ನಿಲ್ಲಿಸಬೇಕೇ ಎಂಬು ದನ್ನು ಮಾನ್ಯ ಸಭೆಯವರು ಯೋಚನೆ ಮಾಡಬೇಕು. ಇದರ ಜೊತೆಗೆ ತಜ್ಞರು ಸಹ ನಮ್ಮ ಇಂಡಿಯಾ ದೇಶದ total amount of rainfall ನಲ್ಲಿ ಶೇಕಡ 6 ಅಥವಾ 7 ಭಾಗವನ್ನು ಮಾತ್ರ ನಾವು ಈಗ ಉಪ ಯೋಗಿಸಿಕೊಳ್ಳುತ್ತಿದ್ದೇವೆ, ಇನ್ನೂ ಬೇಕಾದಷ್ಟು ನೀರು ಸಮುದ್ರಕ್ಕೆ ಹರಿದು ಹೋಗುತ್ತಿದೆ ಎಂದು ಹೇಳಿದ್ದಾರೆ. ಮಾನವನು ಅದನ್ನು ಉಪಯೋಗಿಸು ತ್ತಿಲ್ಲ ಎಂದು ಹೇಳುವ ಕಾಲದಲ್ಲಿ ಪ್ರಾಜೆಕ್ಟ್‌ಗಳನ್ನೆಲ್ಲ ನಿಲ್ಲಿಸಿಬಿಡಬೇಕು, ಅಣೆಕಟ್ಟುಗಳನ್ನು ಕಟ್ಟುವುದು ಬೇಡ ಎಂದು ಹೇಳುವುದರಲ್ಲಿ ಏನು ಅರ್ಥವಿದೆಯೋ ನನಗೆ ಗೊತ್ತಾಗುವುದಿಲ್ಲ. ಮೈನರ್ ಕೆರೆಗಳ ಜೀರ್ಣೋದ್ಧಾರ ವಾಗ ಬೇಕಾದುದೂ, ಅದಕ್ಕೆ ಪ್ರಾಮುಖ್ಯತೆ ಕೊಡ ಬೇಕಾದುದೂ ಅಗತ್ಯ. ಇದರಲ್ಲಿ ಒಂದು ಸಂತೋಷ

ಕರವಾದ ಸಂಗತಿ ಎಂದರೆ ಸುಮಾರು 7-8 ವರ್ಷಗಳಿಂದಲೂ ಈ ಮೈನರ್ ಕೆರೆಗಳ ಜೀರ್ಣೋದ್ಧಾರಕ್ಕೋಸ್ಕರವಾಗಿ ಸರ್ಕಾರದವರು ಹೆಚ್ಚು ಹೆಚ್ಚಾಗಿ ಹಣವನ್ನು ಒದಗಿಸುತ್ತಿದ್ದಾರೆ. ಇದರಿಂದ ಪ್ರಜೆಗಳಿಗೂ ಅನುಕೂಲವಾಗುತ್ತಿದೆ. ಆದರೂ ಈಗ ಒದಗಿಸುತ್ತಿರುವ ಹಣ ಸಾಲದು, ಇನ್ನೂ ಹೆಚ್ಚಾಗಿ ಒದಗಿಸಬೇಕು ಎಂದು ಅನೇಕ ಸಂದರ್ಭಗಳಲ್ಲಿ ಈ ಮಾನ್ಯ ಸಭೆಯವರು ಒತ್ತಾಯ ಮಾಡುತ್ತಿದ್ದಾರೆ. ಇನ್ನೂ ಹೆಚ್ಚಾಗಿ ಹಣ ಒದಗಿಸಬೇಕಾದ ಅಗತ್ಯವಿದೆ. ಇದನ್ನು ಸರ್ಕಾರದವರು ತೀವ್ರವಾಗಿ ಯೋಚನೆ ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ.

ಈ ವರ್ಷದಲ್ಲಿ 18 INED Original Works-Major and Minor, ಎಂಬುದಕ್ಕೆ 18 ಲಕ್ಷ 91 ಸಾವಿರ ರೂಪಾಯಿ ಒದಗಿಸಿದ್ದೀರಿ. 1953-54 ನೇ ಸಾಲಿಗೆ 11,54,000 ರೂಪಾಯಿ ಇದ್ದು, ಹೆಚ್ಚಿಗೆ ಒದಗಿಸಿಕೊಟ್ಟಿದ್ದೀರಿ. ಕೆರೆಗಳ ರಿಪೇರಿಗೆ ಎಂದು 13 ಲಕ್ಷ accounts ಇದ್ದು ಈ ವರ್ಷ 11 ಲಕ್ಷಕ್ಕೆ ಪುನಃ ಇಳಿಸಿ ಬಿಟ್ಟಿದ್ದೀರಿ. ಹೀಗೆ ಸರ್ಕಾರದವರು ಒದಗಿಸುತ್ತಿರತಕ್ಕ ಹಣ ಅಲ್ಪಸ್ವಲ್ಪ ಜಾಸ್ತಿಯಾಗಿದ್ದರೂ ಸಹ ಇನ್ನೂ ಹೆಚ್ಚು ಪ್ರಮಾಣದಲ್ಲಿ ಒದಗಿಸತಕ್ಕ ಅವಶ್ಯಕತೆ ಮಾತ್ರವಿದೆ ಎಂಬುದನ್ನು ಸರ್ಕಾರದವರು ಗಮನಿಸಬೇಕು ಎಂದು ಪ್ರಾರ್ಥಿಸುತ್ತೇನೆ.

ಇನ್ನೊಂದು ವಿಚಾರವೇನೆಂದರೆ, ಈ ಇಲಾಖೆಯ ಕೆಲಸ ಕಾರ್ಯಗಳು ಸುಲಲಿತವಾಗಿಯೂ ಮತ್ತು ಸಮರ್ಪಕವಾಗಿಯೂ ನಡೆಯುತಿ ಲ್ಲ ಎಂದು ನಾವು ಆಗಿಂದಾಗ್ಗೆ ಈ ಸಭೆಯಲ್ಲೂ, ಸರ್ಕಾರದವರಲ್ಲೂ ಹೇಳುತ್ತಲೇ ಇದ್ದೇವೆ. ಆದರೂಕೂಡ ಮಾನ್ಯ ಸಚಿವರು ಇದಕ್ಕೆ ಹೆಚ್ಚಿಗೆ ಗಮನ ಕೊಟ್ಟಿದ್ದಾರೆಂದು ಕಂಡು ಬರುವುದಿಲ್ಲ. ಒಂದುವೇಳೆ ಕೊಟ್ಟಿದ್ದರೂ ಕೂಡ ಅವರಿಗೆ ಅದನ್ನು ಸರಿಪಡಿಸುವುದಕ್ಕೆ ಕಷ್ಟವಾಗಿದ್ದರೂ ಇರಬಹುದು ಎಂದು ಭಾವಿಸುತ್ತೇನೆ.

ಈ ಸಂದರ್ಭದಲ್ಲಿ ಮಾನ್ಯ ಸಭೆಯ Estimates Committeeಯವರು 1954 ನೇ ಸಾಲಿನಲ್ಲಿ ಒಂದು ರಿಪೋರ್ಟ್ ಕೂಡ ಕೊಟ್ಟಿದ್ದಾರೆ. ಅದನ್ನು ಮಾನ್ಯ ಸಚಿವರು ಸಂಪೂರ್ಣವಾಗಿ ಓದಿದ್ದಾರೆಯೋ ಏನೋ ನನಗೆ ಗೊತ್ತಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಓದಿದ್ದೇನೆ. ತಮ್ಮ ವರದಿಯಮೇಲೆ ಚೀಫ್ ಇಂಜಿನಿಯರ್‌ರವರ ಸಲಹೆಯನ್ನು ಕೇಳಿದ್ದೇವೆ. ಒಂದು ಮೀಟಿಂಗ್ ಇಟ್ಟುಕೊಂಡಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಮೀಟಿಂಗ್ ಇಟ್ಟುಕೊಂಡು ಸಲಹೆಗಳನ್ನೆಲ್ಲ consider ಮಾಡುತ್ತ ಹೋದರೆ, 1957 ನೆಯ ಇಸವಿ ಆಗಿಬಿಡುತ್ತದೆ. ಇದರಲ್ಲಿ ಈ ಮರಾಮತ್ತು ಇಲಾಖೆಯೊಂದನ್ನೇ ತೆಗೆದುಕೊಂಡು, Estimates Committeeಯವರು ಒಂದು ವರ್ಷ ಪರ್ಯಂತರ ಕೂಲಂಕಷವಾಗಿ ಈ ಇಲಾಖೆಗೆ ಸಂಬಂಧಪಟ್ಟ ಕೆಲಸ ಕಾರ್ಯಗಳೆಲ್ಲವನ್ನೂ ಕೂಡ ವಿಮರ್ಶೆಮಾಡಿ ಕೆಲವು ಉಪಯುಕ್ತವಾದ ಸಲಹೆಗಳನ್ನು ಮಾಡಿದ್ದಾರೆ.

5 P.M.

ಬಹುಶಃ ಪ್ರತಿಯೊಂದು ಸಲಹೆಯನ್ನೂ ಜಾರಿಗೆ ತಂದಿದ್ದರೆ ಉಪಯೋಗವಾಗುತ್ತ ಇತ್ತು. ತಾವೇನೋ ಎಕ್ಸಿಕ್ಯುಟೀವ್ ಇಂಜಿನಿಯರು, ಚೀಫ್ ಇಂಜಿನಿಯರು, ಸೂಪರಿಂಟೆಂಡಿಂಗ್ ಇಂಜಿನಿಯರುಗಳಿಗೆ sanctioning power ಹೆಚ್ಚು ಮಾಡಿದ್ದೀರಿ. ಆದರೆ ಅನೇಕ ವಿಚಾರಗಳಲ್ಲಿ ಪ್ರಸ್ತಾಪ ಮಾಡಿ ಸಲಹೆ ಮಾಡಿದ್ದನ್ನು, ಯಾವುದನ್ನೂ ಇನ್ನೂ ಜಾರಿಗೆ ತಂದ ಹಾಗೆ ಕಾಣುವುದಿಲ್ಲ. ಈಗ ಮೀಟಿಂಗ್ ಇಟ್ಟುಕೊಂಡಿದ್ದೇವೆ, ಡಿಪಾರ್ಟ್‌ಮೆಂಟಿನ ಸಲಹೆ ಕೇಳಿ, ಚೀಫ್ ಇಂಜಿನಿಯರ ಸಲಹೆ ಕೇಳಿ ಮಾಡುತ್ತೇವೆ ಎಂದು ಹೇಳುತ್ತಾ ಇದ್ದೀರಿ. ಒಂದು ವಿಷಯವನ್ನು ಸರ್ಕಾರದವರಿಗೆ ತಿಳಿಸಬೇಕಾಗಿದೆ. ಡಿಪಾರ್ಟ್‌ಮೆಂಟಿನವರು ಯಾವಾಗಲೂ ಕೂಡ conservative type. ಹಿಂದಿನಿಂದ ನಡೆದುಕೊಂಡು ಬರುತ್ತಾ ಇರುವುದರಲ್ಲಿ ಹೆಚ್ಚು ಕಮ್ಮಿಯಾವುದೂ ವ್ಯತ್ಯಾಸ ಆಗದ ರೀತಿಯಲ್ಲಿ ರೂಲ್ಸ್ ರೆಗ್ಯುಲೇಷನ್ಸ್ ಮಾಡತಕ್ಕದ್ದು ಅವರ ಪದ್ಧತಿ. ಈಗಿರತಕ್ಕ ರೆಡ್ ಟೇಪಿಸಂ, centralisation of powers ಇವೆಲ್ಲಾ ಹಾಗೆಯೇ ನಡೆದುಕೊಂಡು ಹೋಗಬೇಕೆಂಬುದೇ ಅವರ ವಾದ ಆಗಿರುತ್ತದೆ. ಅದಕ್ಕೆ ಮಾನ್ಯ ಸಚಿವರು ಮರುಳಾಗಬಾರದು ಮತ್ತು ಡಿಪಾರ್ಟ್‌ಮೆಂಟಲ್ ಪೀಪಲ್ ಅಡ್ವೈಸ್ ಮಾಡುತ್ತಾರೆ ನಾವೇನು ಮಾಡೋಣ ಎಂದು ಅಷ್ಟು ಮಾತ್ರ ಹೇಳಿದರೆ ಸಾಲದು. ಹಾಗೆ ಮಾಡಿದ್ದೇ ಆದರೆ ಆ ಡಿಪಾರ್ಟ್‌ಮೆಂಟನ್ನು ರಿನೋವೇಟ್ ಮಾಡಿದ ಹಾಗಾಗುವುದಿಲ್ಲ, ಜನಗಳಿಗೆ ಎಷ್ಟು ಉಪಯೋಗವಾಗಬೇಕೋ ಅಷ್ಟು ಉಪಯೋಗವಾಗುವಷ್ಟು ಪ್ರಮಾಣದಲ್ಲಿ ಆಗುವುದಿಲ್ಲ. ದೇಶದಲ್ಲಿ ಖರ್ಚು ಮಾಡತಕ್ಕ ದುಡ್ಡು, ಕೋಟ್ಯಾಂತರ ರೂಪಾಯಿ, ಸುಮಾರು 6-7 ಕೋಟಿ ರೂಪಾಯಿ ಈ ಒಂದು ಡಿಪಾರ್ಟ್‌ಮೆಂಟಿಗೇ ಖರ್ಚು ಮಾಡುತ್ತಾ ಇದ್ದೇವೆ. ಇದರ ಸಂಪೂರ್ಣ ಪ್ರತಿಫಲ ನಮಗೆ ದೊರೆಯುವುದಿಲ್ಲ. ಇಷ್ಟು ಹೇಳಿ—ಇನ್ನೂ ಅನೇಕ ವಿವರಗಳಿವೆ, ಅವನ್ನು ಹೇಳುವುದಕ್ಕೆ ಕಾಲಾವಕಾಶ ಇಲ್ಲ—ಈ ಎಸ್ಟಿಮೇಟ್ಸ್ ಕಮಿಟಿಯವರು ಮಾಡಿರತಕ್ಕ ಶಿಫಾರಸುಗಳು ಬಹಳ ಅಮೂಲ್ಯವಾದವು, ಅವನ್ನು ಕೂಡಲೇ ಜಾರಿಗೆ ತರುವುದಕ್ಕೆ ಸರ್ಕಾರದವರು ಮನಸ್ಸು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಇನ್ನೊಂದು ಮಾತು. ಏನೆಂದರೆ ಮೈನರ್ ಕೆರೆ ರಿಪೇರಿ ಅಥವಾ ಮೇಜರ್ ಕೆರೆ ರಿಪೇರಿ ಮತ್ತು ಕೆರೆಗಳನ್ನು ಕಟ್ಟುವುದರಲ್ಲಿ ಸರ್ಕಾರದವರು ಯಾವುದಾದರೂ ಒಂದು ನೀತಿಯನ್ನು ಇಟ್ಟುಕೊಂಡು ಮಾಡುವುದು ಒಳ್ಳೆಯದು. ಏಕೆಂದರೆ ಈಗ ಹಾಲಿ ನಡೆಯುತ್ತಾ ಇರತಕ್ಕ ಕೆಲಸ ಕಾರ್ಯಗಳು ಬಹುಶಃ ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ಯಾರು ಹೆಚ್ಚು ಒತ್ತಾಯ ಮಾಡುತ್ತಾರೋ ಆ ಕಡೆ ಹೆಚ್ಚು ಕೆಲಸ ಕಾರ್ಯಗಳು ನಡೆಯುವುದು, ಇನ್ನೊಂದು ಕಡೆ ಏನೂ ಆಗದೇ ಇರುವುದು, ಹೀಗೆ ಆಗಿರುವುದು ಈ ಬಡ್ಜೆಟ್ಟನ್ನು ತಿರುವಿ ಹಾಕಿದ್ದರಲ್ಲಿ ಕಂಡು ಬರುತ್ತಾ ಇದೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ತೆಗೆದು ಕೊಳ್ಳುವುದಾದರೆ ಮೇಜರ್ ಕೆರೆಗಳು ಮೂರೇ ಮೂರು ತೆಗೆದುಕೊಂಡಿದ್ದೀರಿ. ಕಂಚನ ಕೆರೆ, ಎಣ್ಣೆಹೊಳೆ, ನವಿಲೂರು ಈ ಮೂರು ಪ್ರಾಜೆಕ್ಟುಗಳು ಇವೆ. ಎಣ್ಣೆಹೊಳೆ ಪ್ರಾಜೆಕ್ಟಿಗೆ 20,000 ರೂಪಾಯಿ ಒದಗಿಸಿದ್ದೀರಿ. ಇವು ಮೂರನ್ನು ಬಿಟ್ಟು ಬಿಟ್ಟರೆ ಕೆರೆಗಳ ರಿಪೇರಿಗೆ ಖರ್ಚು ಮಾಡುವುದರಲ್ಲಿ ಇನ್ನಾವ ಕೆರೆಗೂ ಕೂಡ ಮೂರು ಕಾಸೂ ಒದಗಿಸಿಲ್ಲ.

Sri Kadidal MANJAPPA.—I am sorry. That is not correct, Sir. These works are major works. Minor works are not included.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಈ ಬಡ್ಜೆಟ್‌ನಲ್ಲಿರುವುದನ್ನು ಓದುತ್ತೇನೆ ಸ್ವಾಮಿ. 365ನೇ ಪುಟವನ್ನು ನೋಡೋಣವಾಗಲಿ. . . .

Mr. SPEAKER.—There is no time. During the course of his reply, the Hon'ble Minister will give satisfactory answers.

Sri D. DEVARAJ URS.—I want to impress on the Government that money is not provided either for minor tanks or major tanks for Mysore Division. It is quite clear if you just go through the Budget; on page 365 no money is allotted either for Mysore Division or Nanjangud Division under tank repairs. ಒಂದೊಂದು ಕಡೆ ಮಾತ್ರ ಹೆಚ್ಚು ಹೆಚ್ಚು ಕೆಲಸ ಕಾರ್ಯಗಳನ್ನು ಮಾಡಲು ಹಣ ಒದಗಿಸುವುದು, ಇನ್ನು ಬಾಕಿ ಕಡೆ ಅಷ್ಟೇ ಕೆಲಸ ಕಾರ್ಯಗಳಿದ್ದರೂ ಕೂಡ ಅದಕ್ಕೆ ಹಣ ಒದಗಿಸದೇ ಇರುವುದು ಸರಿಯಲ್ಲ. ಯಾವುದಾದರೂ ಒಂದು ತೀರ್ಮಾನ ಮಾಡಿಕೊಂಡು ಪ್ರತಿಯೊಂದು ಡಿಸ್ಟ್ರಿಕ್ಟ್‌ಗೂ ಹೆಚ್ಚು ಕಮ್ಮಿ ಸ್ವಲ್ಪ ಸರಿಯಾಗಿ ದಾಮಾಷ್ ಪ್ರಕಾರ ದುಡ್ಡು ಖರ್ಚಾಗುವ ರೀತಿಯಲ್ಲಿ ಏರ್ಪಾಡು ಮಾಡಬೇಕು ಎಂದು ಹೇಳಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ನೀರಾವರಿ ಕಾಂಗಾರಿಗೆ ಸಂಬಂಧಪಟ್ಟ ಡಿಮ್ಯಾಂಡನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಏಕೆಂದರೆ ಮಾನ್ಯ ಸಭೆಯ ಸದಸ್ಯರೆಲ್ಲರೂ ಹೇಳುತ್ತಾ ಇದ್ದಾರೆ, ಕನ್ನಂಬಾಡಿಯಲ್ಲಿ ಕೋಟಿಗಟ್ಟಲೆ ರೂಪಾಯಿ ಖರ್ಚು ಮಾಡಿ ಮಂಡ್ಯ ಡಿಸ್ಟ್ರಿಕ್ಟ್‌ಗೆ ಚಿನ್ನ ಕೊಟ್ಟಿದ್ದೇವೆ ಎಂದು ಹೇಳತಕ್ಕದ್ದು ಪದ್ಧತಿಯಾಗಿದೆ. ಆದರೆ ನಮ್ಮ ಸ್ಥಿತಿ ಏನಾಗಿದೆ ಎಂದರೆ ಲಾಂದ್ರದ ಕಂಬದ ಕೆಳಗೆ ಕತ್ತಲೆ ಹೇಗಿದೆಯೋ ಹಾಗೆ ಆಗಿದೆ. ಅದು ಕೂಡ ನಮ್ಮ ಮಳವಳ್ಳಿ ತಾಲ್ಲೂಕಿನಲ್ಲಿ ಮತ್ತು ನರಸೀಪುರ ತಾಲ್ಲೂಕಿನಲ್ಲಿ. ಏಕೆಂದರೆ ನಮಗೇನೋ ಕನ್ನಂಬಾಡಿ ಕಟ್ಟೆಯಿಂದ ಇರ್ವಿನ್ ನಾಲಾ ಬರುತ್ತದೆ, ಬಹಳ ಅನುಕೂಲವಾಗಿದೆ ಎಂದು ಜನ ತಿಳಿದುಕೊಂಡಿದ್ದಾರೆ. ನಮ್ಮ ಗತಿ ಏನಾಗಿದೆ ಎಂಬುದನ್ನು ಹೇಳಬೇಕೆಂದರೆ ಯಾವ ರೀತಿಯಲ್ಲೂ ಫಾಯಿದೆ ಆಗಿಲ್ಲ. ಆದರೆ ನಿಮಗೆಲ್ಲರಿಗೂ ಸೀ ಮಾಡತಕ್ಕ ಸಕ್ಕರೆ ಏನಿದೆ ಅದನ್ನು ತಯಾರು ಮಾಡುವ ಒಂದು ಅನುಕೂಲ ಇದೆ. ಇದು ಒಂದು. ಎರಡನೆಯದಾಗಿ ಮಂಡ್ಯ ತಾಲ್ಲೂಕಿನ ಕೆಲವು ಹಳ್ಳಿಗಳು ಬೆಂಗಾಡಾಗಿದ್ದುದನ್ನು ನೀರಾವರಿ ಮಾಡಿದ್ದೀರಿ; ಆ ತಾಲ್ಲೂಕಿನವರಿಗೆ ಸ್ವಲ್ಪ ಅನುಕೂಲವಾಗಿದೆ ಎಂದು ಹೇಳಬಹುದು.

ಮಳವಳ್ಳಿ ತಾಲ್ಲೂಕಿನಲ್ಲಿ tail end lands ಎಂದು ಇರುವುದು ಎಲ್ಲರಿಗೂ ಗೊತ್ತಿದೆ. ಅಂಥವಕ್ಕೆ pick-ups ಮಾಡಿದ್ದೀರಿ, ಇಲ್ಲ ಎಂದು ಹೇಳುವುದಿಲ್ಲ. ಈಗ ಏನಾಗಿದೆ ಎಂದರೆ ಮಕ್ಕಳಿಗೆ ಬೆಲ್ಲ, ಸಕ್ಕರೆ ಕೈಗೆ ಕೊಡದೆ ಹಿಂದಕ್ಕೆ ಇಟ್ಟುಕೊಳ್ಳುವ ಲೆಕ್ಕಾಚಾರ ಆಗಿದೆ. ಮಗು ಆಶೆಯಿಂದ ಕೈ ನೀಡಿದರೆ ಬೆಲ್ಲ ಯಾವ ರೀತಿ ವಾಪಸ್ಸು ಕಿತ್ತುಕೊಳ್ಳುತ್ತೀರೋ ಅದೇ ರೀತಿ ಒಂದು ವರ್ಷ ಪೂರ್ತಿ ನೀರು ಕೊಡುವುದು, ಇನ್ನೊಂದು ವರ್ಷ 10 ಎಕರೆಗೆ ನೀರು ಕೊಡುತ್ತೇವೆ ಎಂದು ಹೇಳುವುದು, ಫಲಿತಾಂಶ ಈ ರೀತಿ ಆಗುತ್ತಾ ಇದೆ. ಇದನ್ನು ಪದೇ ಪದೇ ಸರ್ಕಾರದವರ ಗಮನಕ್ಕೆ ತಂದಿದ್ದೇವೆ. ನೀರಾವರಿ ವಿಚಾರದಲ್ಲಿ ನಮ್ಮ ತಾಲ್ಲೂಕಿನಲ್ಲಿ ಹಲಗೂರು ಹೋಬಳಿ ಬಹಳ ಹಿಂದುಳಿದಿದೆ ತಾವು ಅದನ್ನು ನೋಡಿಲ್ಲ ಎಂದು ಕಾಣುತ್ತದೆ. ಹಲಗೂರು ಹೋಬಳಿ, ಬಸವನಪುರ ಹೋಬಳಿ, ಈ ಪ್ರದೇಶಗಳಿಗೆ ಹಲವಾರ ತುರುಗನೂರು ಬ್ರಾಂಚ್‌ನ್ನು ಕಂಟಿನ್ಯೂ ಮಾಡಿ ನೀರು ಒದಗಿಸಿಕೊಡಲು ಈ ವರ್ಷವೇ ಕೆಲಸ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಎರಡನೆಯದಾಗಿ ಹೈಲೆವಲ್ ಕೆನಾಲನ್ನು ಎಕ್ಸ್‌ಟೆಂಡ್ ಮಾಡಬೇಕೆಂದು ಹೇಳುತ್ತಾ ಇದ್ದರೂ ಕೂಡ ಈ ಹೊತ್ತಿನವರೆಗೂ ಆ ಕೆಲಸ ಪ್ರಾರಂಭ ಮಾಡಿಲ್ಲ. ದಯವಿಟ್ಟು ಅದನ್ನು ಆದಷ್ಟು ಜಾಗ್ರತೆ ಮಾಡಬೇಕು. ಪಿಕ್‌ಅಪ್‌ಗಳನ್ನು ಜಾಸ್ತಿ ಮಾಡಬೇಕು. ಮೂರನೆಯದಾಗಿ ಹಲಗೂರು ಹೋಬಳಿ ಬೆಳತೂರು ಹತ್ತಿರ ಒಂದು ಅಣಿಕಟ್ಟು ಕಟ್ಟಿಲ್ಲದೇ ಇರುವುದರಿಂದ ಆ ಪ್ರದೇಶದಲ್ಲಿ ಒಂದು ತೊಟ್ಟು ನೀರೂ ಕೂಡ ಉಪಯೋಗವಾಗುತ್ತ ಇಲ್ಲ. ಆದ್ದರಿಂದ ಶಿಂಷಾ ನದಿಗೆ ಬೆಳತೂರು ಹತ್ತಿರ ಅಣಿಕಟ್ಟು ಕಟ್ಟಬೇಕೆಂದು ಹೇಳುತ್ತೇನೆ. ಹಿಂದೆ ಒಂದು ಸಲ ಸರ್ವೆ ನಡೆದಿತ್ತು ಎಂದು ಕೇಳಿದ್ದೇನೆ. ಈ ಒಂದು ಅನುಕೂಲ ಮಾಡಿಕೊಟ್ಟರೆ ಹಲಗೂರು ಹೋಬಳಿಗೆ ನೀರಾವರಿ ಅನುಕೂಲವಾಗುತ್ತವೆ.

ಇನ್ನು ನೀರನ್ನು ಒದಗಿಸುವ ವಿಚಾರದಲ್ಲಿ ಹೇಳಬೇಕಾದರೆ, ವ್ಯವಸಾಯಕ್ಕೆ ರೆಗ್ಯುಲೇಟ್ ಮಾಡಿ ನೀರನ್ನು ಒದಗಿಸಬೇಕೆಂದು ಪದೇ ಪದೇ ಹೇಳುತ್ತಾ ಇದ್ದೇವೆ. ಏಕೆಂದರೆ ಕೆಲವು ಕಡೆ ಅನಾವಶ್ಯಕವಾಗಿ ನೀರು ಅನವ್ಯಯವಾಗುತ್ತಿದೆ. ಇದರಿಂದಲೇ tail end ನವರಿಗೆ ನೀರು ಸಾಲದೇ ಹೋಗುತ್ತಿದೆ. P.W.D. ನವರು ಚಾನಲ್ ಆಫೆನ್ಸಸ್ ಎಂದು ಚಾರ್ಜ್‌ಮಾಡಿ ಅಂತಹವರ ಮೇಲೆ ಕ್ರಮ ತೆಗೆದುಕೊಂಡು ರೆಗ್ಯುಲೇಟ್ ಮಾಡುವುದಕ್ಕೆ ಸ್ಪೆಷಲ್ ಆಕ್ಟ್ ಪ್ರಕಾರ ಅವಕಾಶ ಇದೆ. ಅದನ್ನು ಇನ್ನೂ ಸ್ವಲ್ಪ ಬಿಗಿಯಾಗಿ ಜಾರಿಗೆ ತರಬೇಕು ಎಂದು ಹೇಳುತ್ತೇನೆ.

ಹೆಬ್ಬಳ್ಳ ಪಿಕ್‌ಅಪ್ ಮಾಡಿ ಮುಗಿಸಿದ್ದೀರಿ. ಇದು ಏನಾಗಿದೆ ಎಂದರೆ ಈ ಹೆಬ್ಬಳ್ಳ ಪಿಕ್‌ಅಪ್‌ನಿಂದ 10 ಸಾವಿರ ಎಕರೆಗೆ ನೀರು ಕೊಡಲು ಅವಕಾಶ ಇದೆ; ಆದರೆ ಯಾವ ಬೃಹಸ್ಪತಿಗಳು ಇದರ ಎಸ್ಟಿಮೇಟ್ ಮಾಡಿದರೋ, ಯಾರು ಪ್ಲಾನ್ ಮಾಡಿದರೋ ಏನೋ 10 ಸಾವಿರ ಎಕರೆಗೆ ನೀರು ಬರುವಷ್ಟು ಅವಕಾಶವಿದ್ದರೂ ಕೂಡ ಆ ಡ್ರೈನ್‌ಗೆ capacity ಸಾಲದೆ ತೊಂದರೆ ಆಗುತ್ತಾ ಇದೆ. ಆದ್ದರಿಂದ ಈಗ ಮತ್ತೆ ಅದನ್ನು widen ಮಾಡಿ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು, ಈ ಕೆರೆಗಳು ಸರಿಯಾಗಿ ರಿಪೇರಿ ಆಗುತ್ತಾ ಇಲ್ಲ. ಹಿಂದೆ ತಮಗೆಲ್ಲಾ ಗೊತ್ತಿರಬಹುದು ಟ್ಯಾಂಕ್ ಪಂಚಾಯಿತಿ ಅಂತ ಎಂದಿತ್ತು. ನಮ್ಮ ಸರ್ಕಾರದಲ್ಲಿ ಟ್ಯಾಂಕ್ ಪಂಚಾಯಿತಿ ಅಡ್ಮಿನ್‌ಸ್ಟ್ರೇಷನ್ ಇದೆಯೋ ಇಲ್ಲವೋ ಗೊತ್ತಿಲ್ಲ. ಟ್ಯಾಂಕ್ ಪಂಚಾಯಿತಿ ಅಡ್ಮಿನ್‌ಸ್ಟ್ರೇಷನನ್ನು ರೆಸ್ಟೋರ್ ಮಾಡಿ ಗ್ರಾಮಾಂತರಗಳಲ್ಲಿ ಮೈನರ್ ಮತ್ತು ಮೇಜರ್ ಕೆರೆಗಳ ಆಡಳಿತವನ್ನು ಅವರಿಗೆ ವಹಿಸಿಕೊಟ್ಟು ಕೆರೆ ರಿಪೇರಿ ಮತ್ತು ಕೆರೆಯಲ್ಲಿ ಹೂಳು ತೆಗೆಯುವುದು ಮುಂತಾದುವಕ್ಕೆ ಸರ್ಕಾರದವರು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮಾನ್ ದೇವರಾಜ ಅರಸಿನವರು ಕೆಂಚನಕೆರೆ ವಿಚಾರ ಹೇಳಿದರು. ಒಂದು ಎಕರೆಗೆ ಲೆಖ್ಖ ಹಾಕಿದರೆ ಮೂರು ಸಾವಿರ ರೂಪಾಯಿಗಳು ಬೆಲೆ ಆಗುತ್ತದೆ. ಕನ್ನಡಿ ಇದ್ದ ಹಾಗಿದೆ. ನಮ್ಮ ಸರ್ಕಾರ ತಮ್ಮ ಗುಂಪಿಗೆ ಸೇರಿದವರು ಏನಾದರೂ ಹೇಳಿದರೆ ಅದನ್ನು ಮುಂಜೂರು ಮಾಡುವುದು, ನಾವು ಹೇಳಿದರೆ ಮಾಡದಿರುವುದು ಸರಿಯಲ್ಲ.

ಶ್ರೀ ಡಿ. ದೇವರಾಜ ಅರಸ್.—ಹಳೇ ಅಚ್ಚುಕಟ್ಟು 1,900 ಚಿಲ್ಲರೆ ಎಕರೆ ಇತ್ತು. ಪಾಳ್ಳೇಗಾರರ ಕಾಲದಲ್ಲಿ ಕಟ್ಟಿದ್ದ ಅಣೆಕಟ್ಟಿಗೆ ಅದು ಸೇರಿತ್ತು. ಪ್ರತಿ ವರ್ಷ ಸಾವಿರಾರು ಎಕರೆ ಫಸಲು ಹಾಳಾಗುತ್ತಿದೆ ಎಂದು ಹೇಳಿದ ಮೇಲೆ ಹೊಸ ಅಚ್ಚುಕಟ್ಟನ್ನು ಸೇರಿಸಿ ಸುಮಾರು 2,000 ಎಕರೆ ಜಮೀನಿಗೆ ನೀರಿನ ಅನುಕೂಲ ಒದಗಿಸಿದ್ದಾರೆ. ಜನರು ಕಾಂಟ್ರಿಬ್ಯೂಷನ್ ಕೊಡಲು ಕೂಡ ಒಪ್ಪಿದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸಂತೋಷ. ಯಾವ ರೀತಿ ಖರ್ಚಾದರೂ ಚಿಂತೆ ಇಲ್ಲ. ಅವರಿಗೆ ಅವಕಾಶ ಕೊಡುವ ಹಾಗೆ ನಮ್ಮ ಮನವಿಯನ್ನೂ ಸ್ವಲ್ಪ ಸಾವಧಾನದಿಂದ ಕೇಳಿ ನಮ್ಮ ತಾಲ್ಲೂಕಿನ ಬಡ ಜನರಿಗೂ ಸಹಾಯಮಾಡಿ ಎಂದು ನಾನು ಕೇಳುತ್ತಿದ್ದೇನೆ.

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ಲಕ್ಕವಳ್ಳಿ ಜಲಾಶಯದ ಸುಮಾರು $\frac{1}{3}$ ಭಾಗದ ಪ್ರಯೋಜನವನ್ನು ಪಡೆಯುವುದು ಭದ್ರಾವತಿ ತಾಲ್ಲೂಕು. ಸುಮಾರು 75 ಸಾವಿರ ಎಕರೆ ಭದ್ರಾವತಿ ತಾಲ್ಲೂಕಿನಲ್ಲಿ ಆ ಪ್ರಾಜೆಕ್ಟಿನಿಂದ ನೀರಾವರಿಗೆ ಬರುತ್ತದೆ. ಹಿಂದೆ ಸರ್ಕಾರದವರು 1925ನೇ ಇಸವಿಯಲ್ಲಿ ಭದ್ರಾ ಅಣೆಕಟ್ಟು ಕಟ್ಟಿ ಸುಮಾರು 10,000 ಎಕರೆ ಅಚ್ಚುಕಟ್ಟು ನೀರಾವರಿಗೆ ತಂದಾಗ ಎಕರೆ ಒಂದಕ್ಕೆ 60 ರೂಪಾಯಿ ಕಾಂಟ್ರಿಬ್ಯೂಷನ್ ಕೊಟ್ಟರು ಎಂದು ಹೇಳುತ್ತಾರೆ. ಈಗ ಭದ್ರಾ ಜಲಾಶಯದ ಅಚ್ಚುಕಟ್ಟಿಗೆ ಎಕರೆಗೆ 300 ರೂಪಾಯಿ ಕಾಂಟ್ರಿಬ್ಯೂಷನ್ ಎಂದು ಹೇಳುತ್ತಾರೆ. ಇದು ಜಾಸ್ತಿ ಎಂಬ ಅಭಿಪ್ರಾಯವಿದೆ. ಆದರೂ ಸರ್ಕಾರದವರು ಒಂದು ಯೋಜನೆಗೆ ಅನುಸಾರವಾಗಿ ಯಾವುದಾದರೂ ಒಂದು ಕಾರ್ಯವನ್ನು ಕೈಕೊಂಡಾಗ ಅದರಲ್ಲಿ ಸಹಕರಿಸಬೇಕಾದುದು ನಮ್ಮ ಕರ್ತವ್ಯ. ಭದ್ರಾ ಜಲಾಶಯದಿಂದ ಚಿತ್ರದುರ್ಗ ಜಿಲ್ಲೆಗೆ ವಿಶೇಷ ಸಹಾಯವಾಗುತ್ತಿದೆ. ಭದ್ರಾವತಿ ತಾಲ್ಲೂಕು ಮಲನಾಡಿನ ಸೆರಗಿನಲ್ಲಿರುವುದರಿಂದ ಮಳೆಗೆ ಅಭಾವವಿಲ್ಲ. ಈ ಯೋಜನೆಯಿಂದ ದೇಶಕ್ಕೆ ಸಹಾಯವಾಗುವುದರಿಂದ ರೈತರು ಬಹಳ ಕೃತಜ್ಞರಾಗಿದ್ದಾರೆ. ಆದರೆ ಅವರಿಗೆ ಒದಗಿಸಬೇಕಾದ ಕೆಲವು ಸೌಕರ್ಯಗಳೇನಿವೆಯೋ ಅವನ್ನು ಮಾತ್ರ ಒದಗಿಸಿಲ್ಲ. ಹಿಂದೆ B.R.V. ನಾಲೆ ತೆಗೆದಾಗ ಅಲ್ಲಿನ ಅಚ್ಚುಕಟ್ಟುದಾರರು ಅಲ್ಲಿಗೆ ಹೋಗಿ ಬರಲು ಪ್ರಮುಖ ರಾಜಬೀದಿಯಿಂದ ಒಂದು ರಸ್ತೆಯನ್ನು ಮಾಡಿಸಿದ್ದರು. ಏನುಕಾರಣದಿಂದಲೋ ಏನೋ ಎಷ್ಟೋ ವರ್ಷದಿಂದ ಆ ರಸ್ತೆ ರಿಪೇರಿ ಮಾಡಿಲ್ಲ. ವಿಚಾರಮಾಡಲಾಗಿ ಈ ಬಗ್ಗೆ ಸರ್ಕಾರ ಒಂದು ಕಾಸೂ ಸಹ ಕೊಡುತ್ತಿಲ್ಲ ಎಂದು ತಿಳಿದು ಬಂದಿದೆ. ಇದು ಅತ್ಯಾವಶ್ಯಕ. ಅಲ್ಲಿ ಸುಮಾರು 2-3 ಬೆಳೆ ಆಗುತ್ತದೆ. ಗಾಡಿ ವಾಹನಗಳು, ಎತ್ತುಗಳು, ಮನುಷ್ಯರು ವಿಶೇಷವಾಗಿ ಓಡಾಡಬೇಕಾಗಿದೆ. ರಸ್ತೆಯ ಅವಶ್ಯಕತೆ ಬಹಳವಾಗಿದೆಯಾದ್ದರಿಂದ ಈ ರಸ್ತೆಯನ್ನು ಜಾಗ್ರತೆ ರಿಪೇರಿಮಾಡಿಸಬೇಕಾದುದು ಅವಶ್ಯಕ. ಇದೇ ರೀತಿ ಎಲ್ಲೆಲ್ಲಿ ನಾಲೆ ಇದೆಯೋ ಅಲ್ಲಿ ರೈತರ ಸೌಕರ್ಯಕ್ಕಾಗಿ ರಸ್ತೆಗಳನ್ನು ನಿರ್ಮಾಣ ಮಾಡಿ ಅವನ್ನು ಒಳ್ಳೆಯಸ್ಥಿತಿಯಲ್ಲಿಡಲು ಸಾಕಷ್ಟು ಹಣ ಒದಗಿಸಬೇಕು. ಲಕ್ಕವಳ್ಳಿ ಜಲಾಶಯದ ನಾಲೆಯ ಕೆಲಸ ಈಗ ಮುಂದುವರಿಯುತ್ತಿದೆ. ಅಲ್ಲಿ ವಾಹನಗಳ ಓಡಾಟಕ್ಕೆ, ಅದರಲ್ಲೂ ಸಕ್ಕರೆ ಕಾರ್ಖಾನೆ ಶಿವಮೊಗ್ಗಾದಲ್ಲಿ ಸ್ಥಾಪನೆಯಾಗುತ್ತಿರುವುದರಿಂದ, ರಸ್ತೆ ಅವಶ್ಯಕತೆ ಬಹಳವಾಗಿದೆ. ಅದಷ್ಟು ಹಣಕೊಟ್ಟು ಗ್ರಾಮಾಂತರಗಳಲ್ಲಿ ನಾಲೆಯ ಅಚ್ಚುಕಟ್ಟಿರುವಕಡೆ ವಿಶೇಷ ಗಮನಕೊಟ್ಟು ರಸ್ತೆಗಳನ್ನು ಮಾಡಿದರೆ ರೈತರು ಕೃತಜ್ಞತೆಯನ್ನು ಸೂಚಿಸಿ ನೀವು ಕೇಳುವ ಕಾಂಟ್ರಿಬ್ಯೂಷನ್ ಕೊಡುತ್ತಾರೆ. ಇಲ್ಲದಿದ್ದರೆ ತಕರಾರು ಮಾಡುತ್ತಾರೆ.

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಎರಡು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರುತ್ತೇನೆ. ಒಂದನೆಯದಾಗಿ ಸರ್ಕಾರ ಹೆಚ್ಚು ಹಣ ಖರ್ಚು ಮಾಡುವ ಅಂಶವನ್ನು ಹೇಳಿದ್ದಾರೆ. 1947-48ರಲ್ಲಿ ಇರಿಗೇಷನ್‌ಗೆ 72 ಲಕ್ಷ ರೂಪಾಯಿಗಳು ಮತ್ತು 1954-55ರಲ್ಲಿ 168 ಲಕ್ಷ ರೂಪಾಯಿಗಳು ಖರ್ಚಾಗಿವೆ. ಹೀಗೆ ಪ್ರತಿವರ್ಷವೂ ಹೆಚ್ಚು ಹೆಚ್ಚಾಗಿ ಹಣ ಖರ್ಚಾಗುತ್ತಿರುವುದು ವ್ಯಕ್ತವಾಗುತ್ತಿದೆ. ಇದು ಸರ್ಕಾರವನ್ನು ಅಭಿನಂದಿಸತಕ್ಕ ವಿಚಾರ. ಇನ್ನೊಂದು ವಿಚಾರ ಮಲೆನಾಡಿಗೆ ಹೆಚ್ಚು ಹಣ ಖರ್ಚಾಗಿರುವುದು. ಈ ವಿಚಾರದಲ್ಲಿ ಅತೃಪ್ತಿಇದೆ. ಈ ಬಗ್ಗೆ ಒಂದು ಸಿದ್ಧಾಂತ ಹೇಳಬೇಕಾಗಿದೆ ಮಲೆನಾಡಿನವರೆಲ್ಲರೂ ಸೇರಿ ಮಲೆನಾಡಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕಾದದ್ದು ಅವಶ್ಯಕವೆಂದು ಹೇಗೆ ಹೆಚ್ಚಾಗಿ ಪಬ್ಲಿಕ್ ಒಪೀನಿಯನ್ ಕ್ರಿಯೇಟ್ ಮಾಡಿದ್ದಾರೋ ಹಾಗೆಯೇ ನಮ್ಮ ಪಕ್ಷದವರೂ ಸೇರಿ ಒಂದು ದೊಡ್ಡ ಕಾನ್ಫರೆನ್ಸ್ ಮಾಡಿ ಬೈಲು ಸೀಮೆಗೆ ಅಥವಾ ಕ್ಷಾಮ ಪ್ರದೇಶಕ್ಕೆ ಅದರಂತೆ ಹೆಚ್ಚು ಅನುಕೂಲತೆಯನ್ನು ಒದಗಿಸಲು ಕೇಂದ್ರ ಸರ್ಕಾರದ ಮಂತ್ರಿಗಳನ್ನು ಕರೆಸಿ ಪ್ರಯತ್ನಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದಕ್ಕೆ ಸರ್ಕಾರದವರೂ ಸಹಾಯ ಮಾಡಬೇಕು. ರಸ್ತೆಗಳಿಗೆ, ಡಿ.ಡಿ.ಟಿ. ಸ್ಪ್ರೇಮಾಡುವುದಕ್ಕೆ, ಟಾರು ಹಾಕುವುದಕ್ಕೆ, ರಸ್ತೆಗಳಿಗೆ ಸಿಮೆಂಟ್ ಮಾಡುವುದಕ್ಕೆ ಒದಗಿಸಿರುವ ಹಣ ನೋಡಿದರೆ ಮಲೆನಾಡಿಗೆ ವಿಶೇಷ ಖರ್ಚಾಗಿರುವುದು ಬಡ್ಜೆಟ್ಟಿನಲ್ಲಿ ಕಂಡುಬರುತ್ತದೆ. ಕೇಂದ್ರ ಸರ್ಕಾರದಿಂದ ಬರುವ ಸಹಾಯದಲ್ಲೂ ಕೂಡ ಬಹುಭಾಗ ಅಲ್ಲಿಗೇ ವಿನಿಯೋಗವಾಗುತ್ತಿದೆ. ಮೈದಾನದಲ್ಲೇ ಶೇಕಡ 70 ಜನರು ಇರುವಾಗ ಚಿತ್ರದುರ್ಗ, ಬಳ್ಳಾರಿ, ಬೆಂಗಳೂರು, ತುಮಕೂರು, ಕೋಲಾರ ಈ ಪ್ರಾಂತ್ಯಗಳಲ್ಲೇ ಶೇಕಡ 60 ಮಂದಿ ಇರುವಾಗ, ಅವರಿಗೆ ಹೆಚ್ಚು ಸಹಾಯ ನೀಡದೆ ಮಲನಾಡಿಗೆ ಹೆಚ್ಚು ಸಹಾಯ ನೀಡುತ್ತಿದ್ದಾರೆ. ಭಾರಿ ಯೋಜನೆಗಳನ್ನು ಮಾಡುವಾಗ, ಭದ್ರಾ ಜಲಾಶಯ ತುಂಗಾ ಅಣೆಕಟ್ಟು ಮುಂತಾದುವನ್ನು ನಿರ್ಮಾಣ ಮಾಡುವಾಗ, ಇಷ್ಟು ಪರ್ಸೆಂಟ್ ವರ್ಕೌಟ್ ಆದರೆ ಅವನ್ನು ಮುಂಜೂರು ಮಾಡುತ್ತೇವೆ, ಇಲ್ಲದಿದ್ದರೆ ಇಲ್ಲ ಎಂದು ಹೇಳಬೇಕು. ಚಿಕ್ಕ ಕೆರೆಗಳು ಕೋಲಾರದಲ್ಲಿ ಬೇಕಾದಷ್ಟಿವೆ. ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಕೆರೆಗಳು ಕಡಮೆ. ಕಟ್ಟಿಸಿರುವ ತುಪ್ಪದಹಳ್ಳಿಕೆರೆ, ಸಂಗೇನಹಳ್ಳಿಕೆರೆ, ಮೊದಲಾದುವು ಒಡೆದು ಹೋಗಿವೆ. ಶಿವಮೊಗ್ಗಾದಲ್ಲಿ 1,700 ಕೆರೆಗಳಿರುವಾಗ ಚಿತ್ರದುರ್ಗ ಜಿಲ್ಲೆಯಲ್ಲಿ ಕೇವಲ 250 ಮಾತ್ರ ಇವೆ. ಬೈಲು ಸೀಮೆಯಲ್ಲಿ ಕೆರೆಗಳು ಕಡಿಮೆ ಇರುವ ಕಡೆ ಶೇಕಡ ಒಂದರಂತೆ ರಿಟರ್ನ್ ಬಂದರೂ ಪರವಾಗಿಲ್ಲ. ಅಂಥ ಕಡೆ ಹೆಚ್ಚು ಕೆರೆಗಳಿಗಾಗಿ ಸಹಾಯ ಮಾಡಬೇಕು. ನನ್ನ ಕ್ಷೇತ್ರದ ಪರವಾಗಿ ಖೋತಾ ಸೂಚನೆಗಳನ್ನೂ, ಪ್ರಶ್ನೆಗಳನ್ನೂ ಕಳುಹಿಸಿದ್ದರೂ ಅವುಗಳ ಚರ್ಚೆಗೆ ಅವಕಾಶ ಸಿಕ್ಕದಿದ್ದರೆ ಜನರಿಗೆ ಸಹಾಯ ಕಲ್ಪಿಸಲು ಮುಂದೆ ಬಂದಿಲ್ಲ ಎಂದು ನಮ್ಮ ಮೇಲೆ ಶಂಕೆ ಉಂಟಾಗಬಹುದು. ಹೀಗಾಗಬಾರದು. ನಮ್ಮ ಬೇಡಿಕೆಗಳಿಗೂ ಗಮನಕೊಟ್ಟು ನಮ್ಮ ಕಡೆ ಜನಗಳಿಗೆ ಅವಶ್ಯಕವಾದ ಸೌಕರ್ಯಗಳನ್ನೊದಗಿಸಬೇಕು. ಜೋರಾಗಿ ಯಾರು ಹೊಡೆದಾಡುತ್ತಾರೋ ಅವರಿಗೆ ಮಾತ್ರ ಸಹಾಯಮಾಡುತ್ತಾರೆ. ಬಾಕಿಕಡೆ ಕೆಲಸಗಳು ಮುಂಜೂರು ಆಗುವುದಿಲ್ಲ ಎಂಬ ಅಭಿಪ್ರಾಯ ಜನರಿಗೆ

(ಶ್ರೀ ಜಿ. ಶಿವಪ್ಪ)

ಬರಬಾರದು. ಆದ್ದರಿಂದ ಬಡ್ಜೆಟ್ಟಿನಲ್ಲಿ ಈ ಸಲ ಹೊಳಲ್ಕೆರೆ ತಾಲ್ಲೂಕು ಭರಮನಾಯಕನ ದುರ್ಗ, ದೊಗ್ಗನಾಲು ಮತ್ತು ಕೋಗಲೂರುಗಳಲ್ಲಿ ಹೊಸ ಕೆರೆಗಳನ್ನು ನಿರ್ಮಿಸಲು ಅವಕಾಶಮಾಡಿ ಅವನ್ನು ಮಂಜೂರುಮಾಡಬೇಕು.

ಮಾನ್ಯ ಮಂತ್ರಿಗಳ ಪ್ರವಾಸ ಕಾಲದಲ್ಲಿ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿರುವುದಕ್ಕಾಗಿ ಸಂತೋಷ ವಾಗುತ್ತಿದೆ. ಸರ್ಕಾರಿ ಅಧಿಕಾರಿಗಳನ್ನು ಒಂದೊಂದು ಡಿಸ್ಟ್ರಿಕ್ಟಿನಲ್ಲೂ ಸೇರಿಸಿ ಆಯಾ ಜಿಲ್ಲೆಯ ಪ್ರಶ್ನೆಗಳು ತಕ್ಷಣ ಪರಿಶೀಲಿಸಲ್ಪಡಬೇಕೆಂದು ಹೇಳಲು ಕಾರ್ಯಕ್ರಮ ಕೈಗೊಂಡಿದ್ದೀರಿ. ನಮ್ಮ ಜಿಲ್ಲೆಯಲ್ಲಿ ಆರೀತಿ ಮಾಡಿದಾಗ ಸದಸ್ಯರಿಗಾಗಿರುವ ಸಂತೋಷ ಅಪರಿಮಿತವಾಗಿದೆ. ಆದರೆ ಒಂದು ತಿಂಗಳಲ್ಲಿ ಎಲ್ಲಾ ಎಸ್ಟಿಮೇಟುಗಳನ್ನೂ ಮಾಡಿ ತಕ್ಷಣ ಕಳುಹಿಸಿ ಎಂದು ಹೇಳಿದರೂ, ಅಧಿಕಾರ ವರ್ಗದವರು ಇಲ್ಲಿಯವರೆಗೂ ಮಾಡಿಲ್ಲ. ಕಾರಣ ಗೊತ್ತಿಲ್ಲ. ತಾವು ಮಾಡಿರುವ ವಿಧಾನವೇನೋ ಉತ್ತಮವಾದುದು. ಈ ವಿಚಾರವನ್ನು ದುರ್ಗಪ್ಪನವರು, ಮುಲ್ಕಾ ಗೋವಿಂದ ರೆಡ್ಡಿಯವರು ಮುಂತಾದವರೂ ಸಹ ಹೇಳಿದರು. ತಾವೇನೋ ಕೇಳಿದಿರಿ. ಆದರೆ ಆ ಪ್ರಶ್ನೆಯನ್ನು ಈಡೇರಿಸುವುದಕ್ಕೆ ಸರಿಯಾದ ಸಲಹೆ ಕೊಟ್ಟರೆ, ಅಧಿಕಾರ ವರ್ಗದವರು ಯಾವುದನ್ನೂ ಕಾರ್ಯರೂಪಕ್ಕೆ ತಂದಿಲ್ಲ. ಇದು ಶೋಚನೀಯ ವಿಚಾರ. ಇದನ್ನು ಪುನಃ ಪ್ರಯತ್ನಪಟ್ಟು ಕಾರ್ಯರೂಪಕ್ಕೆ ತರುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ನಮ್ಮ ಸ್ಥಳಕ್ಕೆ ಸಂಬಂಧಪಟ್ಟ ವಿಚಾರವನ್ನು ಹೇಳಬೇಕಾಗಿದೆ. ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ಅನೇಕ ಕಾಮಗಾರಿಗಳಿವೆ. ಅದಕ್ಕೆ ತಾವು ಒಬ್ಬರೇ ಒಬ್ಬರು ಅಸಿಸ್ಟೆಂಟ್ ಎಂಜಿನಿಯರನ್ನು ನೇಮಿಸಿದ್ದೀರಿ. ಹೊಸದುರ್ಗ, ಚಳ್ಳಕೆರೆ ಎರಡು ತಾಲ್ಲೂಕುಗಳಿಂದ ಒಬ್ಬರೇ ಅಸಿಸ್ಟೆಂಟ್ ಎಂಜಿನಿಯರಿದ್ದಾರೆ. ಆ ಭಾಗದಲ್ಲಿ ಹೆಚ್ಚಿಗೆ ಕಾಮಗಾರಿಗಳು ನಡೆದಿರುವುದರಿಂದ ಹೆಚ್ಚಿಗೆ ಸಿಬ್ಬಂದಿ ಹಾಕಬೇಕೆಂದು ಹೇಳುತ್ತೇನೆ.

ಶ್ರೀ ಇಜಾರಿ ಸಿರಸಪ್ಪ (ಹರಪನಹಳ್ಳಿ).—ಮಾನ್ಯ ಅಧ್ಯಕ್ಷರೇ, ಬಡ್ಜೆಟ್ ಭಾಷಣಮಾಡುವಾಗ ಶ್ರೀಮಾನ್ ಮ್ಯಾಸ್ಕರನ್ಹಾಸ್‌ರವರು ನಮ್ಮ ದೇಶದಲ್ಲಿರತಕ್ಕ ‘dam’ಗಳೆಲ್ಲವನ್ನೂ damn ಮಾಡಿದ್ದನ್ನು ಎಲ್ಲರೂ ಕೇಳಿದ್ದೇವೆ. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಮತ್ತು damಗಳನ್ನು ಈ ರೀತಿ damn ಮಾಡಿರುವುದರಲ್ಲಿ ಅವರು ನ್ಯಾಯವಾದ ಮಾರ್ಗವನ್ನು ಅವಲಂಬಿಸಿರುತ್ತಾರೆಂದು ನನಗನ್ನಿಸುವುದಿಲ್ಲ. ಕೆಲವೂ ಮಟ್ಟಿಗೆ ಅದನ್ನು ಒಪ್ಪಿಕೊಂಡರೂ ಒಪ್ಪಿಕೊಳ್ಳಬಹುದು. ಯುದ್ಧ ಕಾಲದಲ್ಲಿ ಆಹಾರದ ಕೊರತೆಯಿದ್ದಾಗ ಆಹಾರದ ಉತ್ಪಾದನೆಗೆ ದೊಡ್ಡ ದೊಡ್ಡ ಯೋಜನೆಗಳನ್ನು ಕೈಕೊಂಡು ದೇಶದ ಜನರನ್ನು ಕಾಪಾಡಿದ್ದು ಎಲ್ಲರಿಗೂ ಗೊತ್ತಿದೆ. ಇದರಿಂದಾಗಿ ಬಹುಶಃ ಈಗ ಒಂದೆರಡು ವರ್ಷಗಳಿಂದ ತಕ್ಕಷ್ಟು ಆಹಾರ ಪದಾರ್ಥ ಉತ್ಪತ್ತಿಯಾಗಿದೆ. ಈ ಕಾರಣದಿಂದ ಇನ್ನು ದೊಡ್ಡ ದೊಡ್ಡ ನೀರಾವರಿಯೋಜನೆಗಳನ್ನು ಕೈಬಿಡಬೇಕೆಂದು ಹೇಳುವುದು ಅಷ್ಟು ಸಮಂಜಸವಾಗಲಾರದು. ಸ್ವಲ್ಪಮಟ್ಟಿಗೆ ಆ ವಾದವೂ ನ್ಯಾಯವಾದ್ದು ಎಂದು ಹೇಳುವುದಾದರೆ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ದೊಡ್ಡ ಕಾಮಗಾರಿಗಳನ್ನೇ ಹೆಚ್ಚಾಗಿ ಕೈಕೊಂಡು ಹಳ್ಳಿಗಾಡಿನವರನ್ನು ಅಲಕ್ಷ್ಯಮಾಡುತ್ತಿದ್ದೇವೆ. ನಮ್ಮ ಪ್ರಾಂತ್ಯದ ಕಡೆ ಸ್ವಲ್ಪಮಟ್ಟಿಗೆ ತಿರುಗಿ ನೋಡುವುದಾದರೆ ಅಲ್ಲಿ ಶತಮಾನಗಳ ಹಿಂದೆ ರಾಜ ಮಹಾರಾಜರುಗಳ, ಸಂಸ್ಥಾನಾಧೀಶರುಗಳ ಕೃಪೆಯಿಂದ ಅಲ್ಲಲ್ಲಿ ಕೆರೆಗಳು ಕಟ್ಟಲ್ಪಟ್ಟಿರುವುದನ್ನು ಕಾಣಬಹುದು. ಸರ್ಕಾರದ ರಿಕಾರ್ಡ್‌ಗಳಲ್ಲಿ ನೋಡಿದರೆ, ಇವುಗಳು ಆರು ತಿಂಗಳು, ಒಂಬತ್ತು ತಿಂಗಳು. ಹನ್ನೆರಡು ತಿಂಗಳು, ಹದಿನಾರು ತಿಂಗಳು ಹೀಗೆ ನಾನಾ ಅವಧಿಯ ಪರ್ಯಂತ ನೀರು ಹಿಡಿಯತಕ್ಕವುಗಳೆಂದು ಬರೆದಿರುವುದನ್ನು ಕಾಣಬಹುದು. ಆದರೆ ಈಗ ವರ್ಷೇ ವರ್ಷೇ ಹೂಳು ತುಂಬಿ, ಹಾಗೂ ಆ ಕೆರೆಗಳಿಗೆ ನೀರೊದಗಿಸುವ ಹಳ್ಳಕೊಳ್ಳಗಳು ಮುಳ್ಳುಗಿಡಗಳಿಂದ ತುಂಬಿಕೊಂಡು, ಆ ಕೆರೆಗಳ capacity ಯೆಲ್ಲಾ ಕಡಮೆಯಾಗಿದೆ. ಹದಿನಾರು ತಿಂಗಳುಗಳಿಗೆ ನೀರೊದಗಿಸುತ್ತಿದ್ದಂಥ ಕೆರೆಗಳು ಇಂದು ಆರು ತಿಂಗಳೂ ಕೂಡ ನೀರೊದಗಿಸಲು ಅಸಮರ್ಥವಾಗಿವೆಯೆಂದು ಕಂಡುಬಂದಿದೆ. ಸರ್ಕಾರದವರು ಈ ಕಡೆಗೆ ಸ್ವಲ್ಪ ಗಮನಕೊಟ್ಟು, ಆ ಕೆರೆಗಳಿಗೆ ನೀರು ಬರುವ ಹಾದಿಯನ್ನು ಸರಿಪಡಿಸಿ capacity ಹೆಚ್ಚು ಮಾಡಿದರೆ ಮತ್ತು ಕೆರೆಗಳಿಂದ ಮುಂದೆ ಹೋಗುವ ಕಾಲುವೆಗಳನ್ನು ದುರಸ್ತುಮಾಡಿದರೆ ಒಂದೊಂದು ಕೆರೆಯೂ 100-200 ಕೆಲವು ಸಂದರ್ಭಗಳಲ್ಲಿ 1,000 ಎಕರೆಗಳಿಗೂ ನೀರು ಹಾಯಿಸಲು ಅನುಕೂಲವಾಗಿ ಆಹಾರ ಸಾಮಗ್ರಿಗಳ ತೊಂದರೆ ಮತ್ತು ರೈತರ ಕಷ್ಟ ನಿರ್ಮೂಲವಾಗುತ್ತದೆಂದು ಹೇಳಬಹುದು. ಅಂಥದರಲ್ಲಿ ನಾವು, ಪ್ರಶ್ನೋತ್ತರಗಳ ಕಾಲದಲ್ಲಿ ಮತ್ತು ಬಡ್ಜೆಟ್ ಭಾಷಣಗಳು ನಡೆಯುವಾಗಲೂ ನೋಡುತ್ತಿದ್ದೇವೆ, ಒಂದೊಂದು ತಾಲ್ಲೂಕಿನಲ್ಲೂ 50-60 ಕೆರೆಗಳ ದುರಸ್ತಿ ಬಾಕಿಗಳು ಇರುವುದು ಕಂಡುಬಂದಿದೆ. ಒಂದೊಂದು ತಾಲ್ಲೂಕಿನಲ್ಲೂ ಈ ಪ್ರಕಾರ 50-60 ಕೆರೆಗಳ ದುರಸ್ತಿ ಮಾಡಬೇಕೆಂದರೆ ಸರ್ಕಾರದವರಿಗೂ ಕಷ್ಟವಾಗಿ ಕಾಣುತ್ತದೆ. ಇದಕ್ಕೆ ನನ್ನದೊಂದು ಸಣ್ಣ ಸೂಚನೆ. ಹತ್ತು ವರ್ಷ ಅಥವಾ ಹದಿನೈದು ವರ್ಷಗಳ ಒಂದು ಕ್ರಮಬದ್ಧವಾದ ಯೋಜನೆಯನ್ನು ಕೈಕೊಂಡು ಎಲ್ಲೆಲ್ಲಿ ಅತ್ಯಗತ್ಯವಾಗಿ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆಯೆಂಬುದನ್ನು ಯೋಚಿಸಿ ಕ್ರಮಬದ್ಧವಾದ ರೀತಿಯಲ್ಲಿ ಮುಂದುವರಿಸುವುದು ಒಂದು ಅತ್ಯುತ್ತಮವಾದ ಮಾರ್ಗವೆಂದು ನಾನು ಸೂಚಿಸಬಯಸುತ್ತೇನೆ.

ಇನ್ನು ನಮ್ಮ ಬಳ್ಳಾರಿ ಜಿಲ್ಲೆಯ ವಿಚಾರ ಮಾತನಾಡುವುದಾದರೆ, ನಮ್ಮ ಕಡೆ ಕಂಚಿಕೆರೆ, ರಾಗಿ ಸಲ್ವಾಡು, ಹಳ್ಳಿಕೆರೆ, ಶಿರಗಾನಹಳ್ಳಿ, ಮುದೆನೂರು, ಹೊಸಕೆರೆ, ಹಿರೇಕೆರೆ—ಇವುಗಳು ಒಡೆದುಹೋದುವು ಇನ್ನೂ ರಿಪೇರಿಯಾಗಿಲ್ಲ. ಇವಲ್ಲದೆ, ಹಿಂದೆ ರಿಪೇರಿಯಾಗಿದ್ದ ಕೊಟ್ಟೂರು, ದಂಡನಾಯ್ಕನಕೆರೆ—ಇವುಗಳಿಗೆ ಸಾಕಷ್ಟು ನೀರಿನ ಪರಿಮಿತಿಯಿಲ್ಲದೆ ಅವುಗಳಿಂದ ಜನರಿಗೆ ಹೆಚ್ಚು ಉಪಯೋಗವಾಗುತ್ತಿಲ್ಲ. ಇದಕ್ಕೆ ಗಮನಕೊಟ್ಟು ಪ್ರಸಕ್ತಸಾಲಿನಲ್ಲೇ ರಿಪೇರಿಮಾಡಿಸಿ ಕೊಡುತ್ತಾರೆಂದು ನಂಬಿದ್ದೇನೆ.

ಆಮೇಲೆ, ನಮ್ಮ ಅತಿ ಪ್ರಾಮುಖ್ಯವಾದ ತುಂಗಭದ್ರಾ ಜಲಾಶಯದಿಂದ 92-93 ಸಾವಿರ ಎಕರೆಗಳಿಗೆ ನೀರು ಹಾಯಿಸಲು ಕಾಮಗಾರಿಗಳು ಪೂರೈಸುತ್ತಾ ಬಂದಿವೆಯೆಂದು ಅಲ್ಲಲ್ಲಿ ಸರ್ಕಾರದವರು ಹೇಳಿದ್ದಾರೆ. ಕಾನ್ಫರೆನ್ಸಿಗೆ ಹೋಗಿದ್ದಾಗ ಕೇಳಿದರೆ 1½ ವರ್ಷಗಳ ಹಿಂದೆಯೇ ಜನರ ಉಪಯೋಗಕ್ಕಾಗಿ ನೀರು ಬಿಟ್ಟಿದೆಯೆಂದು ಹೇಳಿದರು. ಆದರೆ ವಾಸ್ತವವಾಗಿ ನೋಡಿದರೆ 1,000 ಎಕರೆಗಳಿಗೆ ಕಾರ್ಯಕ್ರಮ ಕೈಕೊಂಡಿರುವುದು ವಜಾ ಆಗಿದೆ. ಸಿರಗುಪ್ಪಾ

ತಾಲ್ಲೂಕಿನಲ್ಲಿ ಒಂದು ಎಕರೆಗೂ ನೀರು ಹಾಯುತ್ತಿಲ್ಲ. ಅದನ್ನು ಉಪಯೋಗಿಸಲು ಸಾಧ್ಯವಾಗಿಲ್ಲ. ಸರ್ಕಾರದವರಿಗೆ ಸರಿಯಾಗಿ ವಿಷಯಗಳನ್ನು ತಿಳಿಸುವುದರಲ್ಲಿ ಇಲಾಖೆಯವರು ತಪ್ಪುಮಾಡುತ್ತಾರೋ ಅಥವಾ ರೈತರ ತಪ್ಪೋ ಗೊತ್ತಿಲ್ಲ. ಅಂತೂ, ಇದನ್ನು ಸರಿಯಾಗಿ ಪರ್ಯಾಲೋಚಿಸಿ ಎಲ್ಲಿ ತಪ್ಪಿದೆಯೆಂಬುದನ್ನು ಕಂಡು ಹಿಡಿದು ಸೂಕ್ತ ಏರ್ಪಾಡುಮಾಡಬೇಕೆಂದು ಹೇಳುತ್ತೇನೆ.

ಒಂದು ಸಾರಿ ಮಾನ್ಯ ಮಂತ್ರಿಗಳು ಸಿರಿಗೊಪ್ಪ ತಾಲ್ಲೂಕಿನಲ್ಲಿ ಪ್ರವಾಸ ಬಂದಿದ್ದಾಗ ಅಲ್ಲಿನ ಜನರು ತಮ್ಮ ಕುಂದುಕೊರತೆಗಳನ್ನು ನಿವೇದಿಸಿಕೊಂಡರು. ತುಂಗಭದ್ರಾ ಜಲಾಶಯದಿಂದ ಹರಿಯುವ ನಾಲೆಯ ಎರಡು ಭಾಗದಲ್ಲೂ ಜಮೀನು ಸಾಗುವಳಿಗೆ ರೈತರು ಹೋಗಿಬರುವುದಕ್ಕೆ ಸೇತುವೆಯಿಲ್ಲದ ಕಾರಣ ಅನಾನುಕೂಲವಾಗಿರುವುದರಿಂದ ಸೇತುವೆಯೊಂದನ್ನು ಕಟ್ಟಿಸಿ ಕೊಡಬೇಕೆಂದು ವಿನಂತಿಮಾಡಿಕೊಂಡಿದ್ದರು. ಆ ಸಂದರ್ಭದಲ್ಲಿ ಈ ವಿಚಾರಗಳನ್ನೆಲ್ಲಾ ಸಂಬಂಧಪಟ್ಟ ಇಲಾಖೆಯವರು ಸರಿಮಾಡುತ್ತೇವೆಂದು ಭರವಸೆ ಕೊಟ್ಟಿದ್ದರು. ಇಷ್ಟು ದಿವಸಗಳಾದರೂ ಆ ಜನರ ಕಷ್ಟವನ್ನು ಮನಗಂಡು ಈ ಕೆಲಸವನ್ನು ಮಾಡಿಕೊಟ್ಟಿಲ್ಲವೆಂದು ನಾನು ವಿಷಾದದಿಂದ ಹೇಳುತ್ತೇನೆ.

ತುಂಗಭದ್ರಾ ಜಲಾಶಯದ ಕೆಳಗೆ ಹರಿಯುವ ಕಾಲುವೆಗಳ ನೀರು ಅಲ್ಲಲ್ಲೇ ಬಸಿದುಕೊಂಡು ಹಳ್ಳಗಳಲ್ಲಿ ನಿಂತು ಜನರ ಆರೋಗ್ಯಕ್ಕೆ ಬಹಳ ಕುಂದನ್ನುಂಟುಮಾಡಿದೆ. ಆ ಜನರ ಕಷ್ಟವನ್ನು ಹೇಳಲಿಕ್ಕೆ ತೀರದು. ಈ ವಿಚಾರವನ್ನು ನಾವು ಸರ್ಕಾರದವರಿಗೂ ಮನವಿ ಮಾಡಿಕೊಂಡಿದ್ದೇವೆ. ಈ ರೀತಿ ಬಸಿದುಹೋಗುವ ನೀರು ಹರಿದುಹೋಗುವಂತೆ drains ಮಾಡಿ ಹೊಳೆಗಾಗಲಿ ಕಾಲುವೆಗಾಗಲಿ ತಿರುಗಿಸಿ ಜನರ ಕಷ್ಟವನ್ನು ಪರಿಹಾರಮಾಡುತ್ತಾರೆಂದು ನಂಬಿದ್ದೇನೆ.

ಆಮೇಲೆ ಭದ್ರಾಪ್ರಾಜೆಕ್ಟ್ ಮತ್ತು ತುಪ್ಪದಹಳ್ಳಿ ಸಂಬಂಧದಲ್ಲಿ ನಡೆದ ಮೀಟಿಂಗಿನಲ್ಲಿಯೂ ಕೂಡ ನಾನು ಹೇಳಿದ್ದೆ. ಒಂದು representation ಸಹ ಕಳುಹಿಸಿದ್ದೆ. ಭದ್ರಾಪ್ರಾಜೆಕ್ಟಿನ ಕಾಲುವೆ ಹರಿಹರ ತಾಲ್ಲೂಕಿನಲ್ಲಿ ಹರಿಯುತ್ತದೆ. ಅದನ್ನೇ ಮುಂದಕ್ಕೆ ಹರಪನಹಳ್ಳಿ ಕಡೆಗೆ ತೆಗೆದುಕೊಂಡು ಹೋದರೆ, ಅಲ್ಲಿ 10,000 ಎಕರೆಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಈ ಕಾರ್ಯವನ್ನು ತೀವ್ರವಾಗಿ ಇಲಾಖೆಯವರು ಎರಡನೆ ಘಟ್ಟದಲ್ಲಿ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ತುಪ್ಪದಹಳ್ಳಿ, ಹರಪನಹಳ್ಳಿ, ಅರಸೀಕೆರೆ ಹೋಬಳಿಗಳ ಸಾವಿರಾರು ಎಕರೆಗಳಿಗೆ ಅನುಕೂಲವಾಗುತ್ತದೆ.

ಇದನ್ನೆಲ್ಲಾ ಪರ್ಯಾಲೋಚಿಸಿ ಆದಷ್ಟು ಬೇಗ ಈ ಕೆಲಸಗಳನ್ನು ಮಾಡಿಕೊಟ್ಟು ಶ್ರೀಮಾನ್ ರಾಜಗೋಪಾಲಾಚಾರಿಯವರು ಪಬ್ಲಿಕ್‌ವರ್ಕ್ಸ್ ಇಲಾಖೆಯ ವಿಚಾರದಲ್ಲಿ ಹೇಳಿರುವ public enemy No. 2 ಎಂಬ ಮಾತು ಜನರ ಮನಸ್ಸಿನಲ್ಲಿ ಮಾಸಿಹೋಗುವಂತೆಮಾಡಲು ಪ್ರಯತ್ನಮಾಡುತ್ತೀರೆಂದು ನಂಬಿದ್ದೇನೆ.

5-30 P.M.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಸ್ವಾಮಿ, ನಾನು ಈ ಡಿಮ್ಯಾಂಡನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ; ಮತ್ತು ನಮ್ಮ ಮಾಗಡಿ, ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ಈ ಮೂರು ತಾಲ್ಲೂಕುಗಳ ಬಗ್ಗೆ ಕೆಲವು ಅಂಶಗಳನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಮಾಗಡಿ, ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ಈ ಮೂರು ತಾಲ್ಲೂಕುಗಳಲ್ಲಿ ಮಳೆ ಬಹಳ ಕಡಮೆ. ಈ ತಾಲ್ಲೂಕುಗಳಲ್ಲಿ ಅತಿ ಜರೂರಾಗಿ ಜೀರ್ಣೋದ್ಧಾರವಾಗಬೇಕಾದಂಥ ಕೆಲವು ಮೈನರ್ ಕೆರೆಗಳಿವೆ. ಸರ್ಕಾರದವರು ಈಗಾಗಲೆ ಅನೇಕ ಸಣ್ಣ ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ಮುಗಿಸಿದ್ದಾರೆ. ಇಲಾಖೆಯವರೂ ಕೂಡ ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆ. ಈಗಾಗಲೇ ಲಕ್ಷ್ಮಣಪುರ, ಮದಗ, ಆಲೂರು, ಶಾಂತಾಪುರ, ಮಸರಹಳ್ಳಿ ಪ್ರಾಜೆಕ್ಟ್ ಮತ್ತು ಗೊಲ್ಲಹಳ್ಳಿ ಕೆರೆಗಳ ಅಂದಾಜುಗಳು ತಯಾರಾಗಿ ಮಾನ್ಯ ಸಚಿವರ ಹತ್ತಿರಕ್ಕೆ ಬಂದಿವೆಯೆಂದು ಕೇಳುತ್ತಿದ್ದೇವೆ. ಆದುದರಿಂದ ಜಾಗ್ರತೆಯಾಗಿ ಸರ್ಕಾರದವರು ಈ ಕೆರೆಗಳನ್ನೆಲ್ಲಾ ರಿಪೇರಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನೆಲಮಂಗಲ ತಾಲ್ಲೂಕಿನಲ್ಲಿ ಅನೇಕ ಕೆರೆಗಳಿವೆ. ಆದರೆ ಅವುಗಳನ್ನು ಯಾರೂ ಕೂಡ ಅನೇಕ ವರ್ಷಗಳಿಂದ ರಿಪೇರಿ ವಗೈರೆ ಮಾಡದೆ ಹಾಗೆ ಬಿಟ್ಟುಕೊಂಡು ಬಂದಿದ್ದಾರೆ. ಈ ವಿಚಾರ ಮಾನ್ಯ ಸಚಿವರಿಗೂ ಗೊತ್ತಿದೆ. ಆದರೆ ಇತ್ತೀಚೆಗೆ P.W.D. ಇಲಾಖೆಯವರು ಈ ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ಜಾಗ್ರತೆ ಮಾಡುತ್ತಿರುವುದು ತುಂಬ ಸ್ವಾಗತಾರ್ಹವಾದದ್ದು. ಇವರು ನಮ್ಮ ದೇಶದಲ್ಲಿರುವ ಇತರ ಎಲ್ಲಾ ಕೆರೆಗಳನ್ನೂ ಹೀಗೆ ಶ್ರದ್ಧೆಯಿಂದ ರಿಪೇರಿಮಾಡುತ್ತಾರೆಂದು ನಾನು ನಂಬಿದ್ದೇನೆ. ಈ ಬಗ್ಗೆ ನನಗೆ ಯಾವ ಸಂಶಯವೂ ಇಲ್ಲ. ಸರ್ಕಾರದವರು ದಕ್ಷತೆಯಿಂದ ನಮ್ಮ ತಾಲ್ಲೂಕಿನಲ್ಲಿರುವ 4-5 ಕೆರೆಗಳ ಕೆಲಸವನ್ನು ಜಾಗ್ರತೆ ನಿರ್ವಹಿಸಿದರೆ ಅದರಿಂದ ಜನರಿಗೆ ಬಹಳ ಅನುಕೂಲವಾಗುತ್ತದೆ.

ಆದರೆ ಈಗ ಈ ಕೆರೆಗಳನ್ನೆಲ್ಲಾ ಡೀಸಿಲ್ಟ್‌ಮಾಡಬೇಕಾದರೆ ಬಹಳ ಹಣ ಬೇಕಾಗುತ್ತದೆಂದು ಸರ್ಕಾರದವರು ಹೇಳಬಹುದು. ಅದಕ್ಕೆ ನಾನೊಂದು ಸಲಹೆ ಮಾಡುತ್ತೇನೆ. ಈಗ ತಾವು ಒಂದು ಕೆರೆಗೆ ಎಷ್ಟು ಹಣವನ್ನು ಡಿಸಿಲ್ಟ್‌ಮಾಡುವುದಕ್ಕಾಗಿ ಖರ್ಚುಮಾಡುತ್ತೀರೋ ಅದರಲ್ಲಿ ಅರ್ಧ ಹಣವನ್ನು ರೈತರಿಗೆ ಕೊಟ್ಟರೆ ಅವರು ಆ ಕೆಲಸವನ್ನು ಧಾರಾಳವಾಗಿ ಕೈಗೊಳ್ಳುತ್ತಾರೆ. ಅವರು ಈ ಸಿಲ್ಟ್ ಮಣ್ಣನ್ನು ತಮ್ಮ ಜಮೀನಿಗೆ ಗೋಡು ಮಣ್ಣಾಗಿ ಉಪಯೋಗಿಸಿಕೊಳ್ಳಲು ತಾವು ಅವಕಾಶ ಕೊಟ್ಟರೆ ಅದರಿಂದ ತಮಗೆ ಈ ಬಾಬಿನಲ್ಲಿ ಅರ್ಧ ಖರ್ಚು ಉಳಿಯುತ್ತದೆ. ಹೀಗೆ ಒಂದು ಅವಕಾಶಕೊಟ್ಟರೆ ಆ ರೈತರು ತಮ್ಮ ತಮ್ಮ ಜಮೀನುಗಳಿಗೆ ಆಗತಕ್ಕ ಗೋಡನ್ನು ಅವರವರೇ ಹೊಡೆದುಕೊಂಡುಬಿಡುವುದರಿಂದ ಅದರ ಜೊತೆಯಲ್ಲಿ ಈ ಕೆರೆ ಉಟಾವಣೆ ಕೆಲಸವೂ ಕೂಡ ನಡೆದಂತಾಗುತ್ತದೆ. ಹೀಗೆ ಮಾಡಿದರೆ ಸರ್ಕಾರಕ್ಕೂ ಅನುಕೂಲ ಅತ್ತ ರೈತರಿಗೂ ಅನುಕೂಲ. ಹೀಗೆ ಒಂದು ವ್ಯವಸ್ಥೆ ಮಾಡಬೇಕೆಂಥು ಸಲಹೆಮಾಡುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ಮಣ್ಣೆಕೆರೆ ಮತ್ತು ತ್ಯಾಮಗೊಂಡಲು ಕೆರೆಗಳಲ್ಲಿ ನೀರು ಸರಿಯಾಗಿ ನಿಲ್ಲದೆ ಕೆಳಗಿರತಕ್ಕ ಅಚ್ಚುಕಟ್ಟುದಾರರಿಗೆ ಬಹಳ ತೊಂದರೆಯಾಗಿದೆ. ನಮ್ಮ ತಾಲ್ಲೂಕಿನಲ್ಲಿ ಇನ್ನೂ ಹೀಗೆ ಅನೇಕ ದೊಡ್ಡ ದೊಡ್ಡ ಕೆರೆಗಳಿದ್ದರೂ ಅಲ್ಲಿಯ ರೈತರಿಗೆ ಸಾಕಷ್ಟು ನೀರು ಸರಬರಾಯಿ ಆಗದೆ ಅವರೆಲ್ಲರಿಗೂ ಬಹಳ ಅನಾನುಕೂಲವಾಗುತ್ತಿದೆ. ಇದೂ ಅಲ್ಲದೆ ನಮ್ಮ ತಾಲ್ಲೂಕಿನಲ್ಲಿ ಸೊಂಡೇಕೊಪ್ಪದ ಬಳಿ ಅರ್ಕಾವತಿ ನದಿ ಹರಿಯುತ್ತಿದೆ. ಅಲ್ಲಿ ಒಂದು

(ಶ್ರೀ ಡಿ. ಎಂ. ಗೋವಿಂದರಾಜು.)

ಸೇತುವೆಯನ್ನು ಆ ನದಿಗೆ ಕಟ್ಟಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸುತ್ತಲೇ ಬಂದಿದ್ದೇವೆ. ಅಲ್ಲಿ ಒಂದು ಸೇತುವೆಯ ಅಗತ್ಯ ಬಹಳವಾಗಿದೆ ಅದನ್ನು ಜಾಗ್ರತೆಯಾಗಿ ಮಾಡಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಹೀಗೆಯೇ ಬೈರಸಂದ್ರದ ಬಳಿ ಕುಮುದ್ವತಿನದಿಗೆ ನಮ್ಮ ತಾಲ್ಲೂಕಿನಲ್ಲಿ ಮತ್ತೊಂದು ಸೇತುವೆಯ ಆವಶ್ಯಕತೆ ತುಂಬ ಇರುತ್ತದೆ. ಈ ಸೇತುವೆಯನ್ನು ಕಟ್ಟಿದರೆ ಅಲ್ಲಿ ಸುಮಾರು 50-60 ಗ್ರಾಮಗಳ ಜನರಿಗೆ ತುಂಬ ಅನುಕೂಲವಾಗುತ್ತದೆ. ಈ ಕೆಲಸವನ್ನೂ ಕೂಡ ಮಾನ್ಯ ಮಂತ್ರಿಗಳು ಖಂಡಿತ ಮಾಡಿಸಿಕೊಡುತ್ತಾರೆಂದು ನಾನು ನಂಬಿದ್ದೇನೆ.

Sri H. C. LINGAREDDY (Malur).—While supporting the Demand on Irrigation, I would like to say a few words. Different points of view have been stressed by my friends and I am very glad that the Government have been putting forth earnest efforts in the matter of restoration of tanks. Tank restoration is very important and for a village a good tank with water is the very life breath, the very life blood of the village and where there are no good tanks with water, we have been finding that either the people will be lazy or they will be very poor and they will be always in courts and they will always be indebted and they do not have any prospects or prosperity at all. Though the Government have been paying a good deal of attention to the restoration of these tanks, it is very necessary that it is to be done on a systematic and planned basis. We have as many as 19,982 minor tanks and 2,598 major tanks in the State and these tanks are mostly in a few districts—Bangalore District, Kolar District, Chitaldrug District. Shimoga District and Hassan District. In the other districts there are a few tanks and they come under malnad. Of course, friends from Malnad have been very vociferous that those tanks also have got to be restored. I am not arguing on any geographical basis. It is very necessary that we have got to pay sufficient attention to the restoration of all the tanks in the State. Some friends were asking 'Why pay so much attention to big major projects and very scanty attention to minor irrigation and major irrigation tank restoration works?' It is very necessary. I am not one of those who say that we should not pay attention to the construction of big dams and very big major irrigation works. I am not at all saying that. It is very necessary that we should see that even these major irrigation works are carried out. They are also very necessary. But at the same time it is necessary that we should pay more attention to the major and minor irrigation tanks which are scattered all the State over than to those major irrigation works. So far as we see, the State has been very enthusiastic and earnest in securing loans and grants from the Central Government to put into execution these major irrigation works. I wish the Government pays more attention to the restoration of the minor and major tanks which are scattered all the State over. Because these tanks, we find, are mostly in the scarcity areas of the State. No doubt, the Government have been restoring a few tanks in the taluks, but that is not sufficient. After all, there will be small complaints like the repair of the sluice, the repair of the waste-weir and there will be a breach in the tank bund and if applications are sent to the heads of departments, very often we find there will be a lot of delay. If the sluice is out of order, all the water will run out and the whole water will be wasted and the villagers will not get any crop at all and sometimes if the waste weir is not raised, all the water will flow out or if the sluice is a little raised more than what is necessary, the bund will breach. These things we find very commonly in the villages and I request the Public Works Minister and the concerned officers to pay more attention and speed up these matters and effect the necessary repairs in the scarcity areas.

There is another difficulty which my friend Sri Basappa and Sri Narayana Reddy were pointing out. The Irrigation Act now requires that in addition to the contribution that is to be paid by the atchkatdars they have to pay water rate. Where there is an assured supply of water, it may be all right, as in Mandya District and some other areas where there will be plenty of rains, but in the scarcity areas now alone they will be having famine and rains vary from 25 to 30 inches and

sometimes even less and if it is insisted there that we should pay water rate also, it will hit hard the raiyats and they will not come forward even for restoration with the result that many of these tanks cannot be restored at all. Therefore I request the Government at least to exempt the people in the scarcity areas from the operation of the Irrigation Act so far as the payment of the water rate is concerned, though they have got to pay the contribution as usual.

Then there is another difficulty in the Public Works Department. Whenever there is a revised estimate, of course, *pro rata* the atchkatdars have got to pay the contribution and the Government also will be sharing the contribution; but what actually happens is, when there is a revised estimate, the atchkatdars will be asked to bear the entire difference between the revised rate and the estimated rate. That I think is not just and is not correct. Government have also to bear the *pro rata* contribution which they originally agreed to. Merely because the estimate is not sanctioned and the work is not worked out, when there is a revised estimate, it is wrong and unjust to say that the atchkatdars should bear the entire cost. Again, in Kolar District, because we are adjoining the Madras and Andhra Districts, there is this difficulty. The States concerned agreed to take up certain works within certain zones. But we have been finding that the Andhra and the Madras States, instead of being reciprocal, have not been caring for the Mysore State to carry out the irrigation works. Our State which is gentlemanly and so patient always wants to follow not merely the letter of the law but the spirit of the law. For example, there is one Manighatta tank in Kolar Taluk. It comes under the Agreement. For the last five years, the estimate is being prepared and the plan is prepared, but the work has not been carried out. Again, in Malur there is a tank attached to the Malur Town, the water of which has been reserved for the Town Water Supply all these years and now the town people have made. . . .

Mr. SPEAKER.—Government have already agreed to depute one of the Hon'ble Members.

Sri H. C. LINGA REDDY.—On the plea that the people have to agree to pay contribution and also water rate, the estimate is held up and the work is is not carried out. I request the Government to expedite these works.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಸ್ವಾಮಿ ಅಧ್ಯಕ್ಷರೆ, ನನಗೆ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಸಂತೋಷಿಸುತ್ತೇನೆ. ಈ ಮನವಿಗೆ ಪೂರ್ಣ ಒಪ್ಪಿಗೆಯನ್ನು ಕೊಡುವುದರಲ್ಲಿ ಎರಡುಮೂರು ವಿಷಯ ಗಳನ್ನು ಮಾನ್ಯಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಮಲೆನಾಡು, ಬೈಲು ಸೀಮೆ ಎನ್ನುವ ವಾದವನ್ನೆತ್ತಿ ಕೆಲವರು ಮಾತನಾಡುತ್ತಾರೆ. ನೀರಾವರಿ ಕಾಮಗಾರಿಗಳ ಸಂಬಂಧವಾಗಿ ನಮ್ಮ ಜಿಲ್ಲೆಗೆ ಕೇವಲ 66 ಸಾವಿರ ರೂಪಾಯಿ ಒದಗಿಸಿರುವುದು ಎಷ್ಟುಮಟ್ಟಿಗೆ ನ್ಯಾಯವಾಗಿದೆ ಎಂಬುದನ್ನು ತಿಳಿಯಬೇಕಾಗಿದೆ. ಬೆಂಗಳೂರು ಜಿಲ್ಲೆಯಲ್ಲಿ ಅನೇಕ ಕೆರೆಗಳು ರಿಪೇರಿಯಾಗಬೇಕಾಗಿವೆ. ಈ ಹಣ ಏತಕ್ಕೂ ಸಾಲದು. ಈ ರೀತಿ ಏಕೆ ಅನ್ಯಾಯವಾಗಿದೆ ಎಂಬುದು ನಮಗೆ ಅರ್ಥವಾಗುವುದಿಲ್ಲ. ಕೋಲಾರ, ಚಿತ್ರದುರ್ಗ ಜಿಲ್ಲೆಗಳಂತೆ ನಮ್ಮ ಜಿಲ್ಲೆಯಲ್ಲಿ ಕ್ಷಾಮವಿಲ್ಲದೆ ಜನರು ಸುಖವಾಗಿದ್ದಾರೆಂದು ಅನೇಕರು ಭಾವಿಸುತ್ತಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಒಂದು ಸಾವಿರದಿಂದ ಇಪ್ಪತ್ತು ಸಾವಿರ ರೂಪಾಯಿಗಳ ವರೆಗೆ ಖರ್ಚುಮಾಡಿ ನೀರಾವರಿ ಬಾವಿಗಳನ್ನು ತೆಗೆಸಿಕೊಂಡಿದ್ದೇವೆ. ಆದರೂ ಕೆರೆಗಳಲ್ಲಿ ನೀರಿಲ್ಲದೇ ಹೋದರೆ ಬಾವಿಗಳಲ್ಲಿಯೂ ನೀರು ಸಿಕ್ಕುವುದಿಲ್ಲ. ಇಪ್ಪತ್ತರಿಂದ ಐವತ್ತು ಅಡಿಗಳವರೆಗೆ ನೀರು ಇಳಿದು ಹೋಗುತ್ತದೆ. ಪಂಪುಗಳನ್ನು ಹಾಕಿಕೊಂಡಿದ್ದಾರೆ. ಸಾವಿರಾರು ರೂಪಾಯಿ ಖರ್ಚುಮಾಡಿರುವ ಬಾವಿಗಳಿಂದಲೂ ನಾಲ್ಕಾರು ಎಕರೆಗೆ ಬೇಕಾಗುವ ನೀರು ಒದಗುವುದಿಲ್ಲ. ಕೆರೆಗಳಲ್ಲಿ ನೀರಿಲ್ಲದೇ ಹೋದರೆ ಬಾವಿಗಳು ಉಪಯೋಗವಾಗುವುದಿಲ್ಲ. ಲಕ್ಷಾಂತರ ರೂಪಾಯಿ ಖರ್ಚುಮಾಡಿ ಜನ ಬಾವಿಗಳನ್ನು ತೆಗೆಸಿ ಪಂಪುಗಳನ್ನು ಹಾಕಿದ್ದಾರೆ. ಆದುದರಿಂದ ಈ ಬಾವಿಗಳ ಹತ್ತಿರವಿರುವ ಕೆರೆಗಳನ್ನು ರಿಪೇರಿ ಮಾಡಿಸಿ ಅಲ್ಲಿ ನೀರು ನಿಲ್ಲುವಂತೆ ಮಾಡಿಸದಿದ್ದರೆ, ವ್ಯವಸಾಯ ಕೆಟ್ಟು ಹೋಗುತ್ತದೆ.

ಈ ಸಭೆಯ ಸದಸ್ಯರನ್ನೊಳಗೊಂಡ ' ಎಸ್ಟಿಮೇಟ್ ಕಮಿಟಿ ' ಎಂದು ಒಂದು ಸಮಿತಿಯನ್ನು ಮಾಡಿ, ಈ ಇಲಾಖೆಯ ವಿಷಯವನ್ನು ಈ ಸಮಿತಿಯವರು ಪೂರ್ಣ ವಿಮರ್ಶೆಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಹೀಗೆ ಒಂದು ಸಮಿತಿಯನ್ನು ಮಾಡಿ ಅವರ ಸಲಹೆಗಳು ಬರಿಯ ಒಂದು ವರದಿಯ ರೂಪದಲ್ಲೇ ನಿಂತರೆ ಏನು ಉಪಯೋಗವಾಯಿತು ? ನಾವು ಯಾವುದಕ್ಕಾದರೂ ಹಣ ಖರ್ಚುಮಾಡಿದ ಮೇಲೆ ಅದರಿಂದ ಲಾಭ ಅಥವಾ ಪ್ರಯೋಜನವೇನಾಯಿತೆಂಬುದನ್ನು ನೋಡಬೇಕು. ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡುವ ಈ ಇಲಾಖೆಯ ಕೆಲಸ ಕಾರ್ಯಗಳನ್ನು ವಿಮರ್ಶಿಸಿ ಈ ಸಭೆಯ ಸದಸ್ಯರ ವರದಿಯನ್ನು ಕೊಟ್ಟಿರುವಾಗ ಅದನ್ನು ಕಾರ್ಯರೂಪಕ್ಕೆ ತರಬೇಕು. ಈ ರೀತಿ ಮಾಡದಿದ್ದರೆ ಸಮಿತಿಯ ಸಲಹೆಗಳು ವ್ಯರ್ಥವಾಗಿ ಸಮಿತಿಯನ್ನು ಮಾಡಿದ ಉದ್ದೇಶ ಸಫಲವಾಗುವುದಿಲ್ಲ

(ಶ್ರೀ ಕೆ. ಬಿ. ಬೈರೇಗೌಡ.)

ಸಮಿತಿಯ ವರದಿಗೆ ಸಾಕಷ್ಟು ಬೆಲೆ ಬರಬೇಕಾದರೆ ಅದನ್ನು ಕಾರ್ಯರೂಪಕ್ಕೆ ತರಬೇಕು. ಈರೀತಿ ಮಾಡ ಬೇಕೆಂದು ಒತ್ತಾಯ ಮಾಡುತ್ತೇನೆ.

ಈ ಇಲಾಖೆಯಲ್ಲಿರುವ ರೇಟುಗಳ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಅಂದಾಜು ಸಮಿತಿ ಯವರು ವರದಿಯಲ್ಲಿ ತಿಳಿಸಿರುವಂತೆ, standardisation of rates and plans ಮಾಡದೇಯಿದ್ದರೆ ಪ್ರತಿಸಾರಿಯೂ ರಿವೈಸ್ ಮಾಡಬೇಕಾಗಿ ಬಂದು ಕೆಲಸ ಗಳು ಸುಸೂತ್ರವಾಗಿ ನಡೆಯುವುದಿಲ್ಲ. ಆಸ್ಪತ್ರೆ, ಸ್ಕೂಲು ಮುಂತಾದ ಕಟ್ಟಡಗಳಿಗೆ ಒಂದೇ ರೀತಿಯ ಪ್ಲಾನ್ ಇಟ್ಟುಕೊಂಡು ಕಾರ್ಯರೂಪಕ್ಕೆ ಬರುವಂತೆ ಮಾಡಬೇಕು. ಹಾಗಿಲ್ಲದೆ ಮೊದಲು ಒಂದು ರೀತಿ ಮಾಡಿ ಆಮೇಲೆ ಅದನ್ನು ಬದಲಾವಣೆ ಮಾಡಿದರೆ ಪ್ರಯೋಜನವಿಲ್ಲ. ಈ ವಿಷಯವನ್ನು ನಾನು ಒತ್ತಾಯ ಮಾಡುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಎರಡು ಮೂರು ಕೆರೆಗಳು—ದೇವಹಳ್ಳಿ, ಕಟಮಾಚನ ಕೆರೆ, ಆವತಿ ಕೆರೆ, ಇವು ನಾದುರಸ್ತಾಗಿ ಏಳೆಂಟು ವರ್ಷಗಳಿಂದಲೂ ಅವುಗಳ ಕೆಳಗೆ ತರಿ ಫಸಲಾಗಿಲ್ಲ. ಇವನ್ನು ದುರಸ್ತುಮಾಡಿ ನೀರಿನ ಅನುಕೂಲ ಮಾಡಿ ಎಂದು ಹೇಳಿದರೆ, ಪರೀಕ್ಷೆ ಮಾಡುತಿ ದ್ದೇವೆಂದು ಹೇಳುತ್ತಾರೆ. ಇದನ್ನು ಜಾಗ್ರತೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಯಾವ ದೊಡ್ಡ ಯೋಜನೆಯನ್ನೂ ಮಾಡಿ ಕೋಟ್ಯಂತರ ಲಕ್ಷಾಂತರ ರೂಪಾಯಿ ಖರ್ಚುಮಾಡಿಲ್ಲ. ಇರತಕ್ಕ ಕೆರೆಗಳಿಗೆ ಬೇಕಾಗುವಷ್ಟು ಹಣವನ್ನೊದಗಿಸಿ ಅವುಗಳನ್ನು ಸರಿ ಯಾಗಿ ದುರಸ್ತು ಮಾಡದಿದ್ದರೆ ಉಪಯೋಗವಾಗು ವುದಿಲ್ಲ. ಕೆರೆಗಳಿರುವ ಕಡೆ ಕೆರೆ ಸರಿಯಾದ ಸ್ಥಿತಿಯ ಲ್ಲಿಲ್ಲದಿದ್ದರೆ ನೀರಿಗೆ ಬಹಳ ಕಷ್ಟ. ಕೆರೆಗಳಿಲ್ಲದೇ ಯಿರುವ ಊರುಗಳಲ್ಲಿ ಬಾವಿ ತೋಡಿದರೂ ನೀರು ಬರುವುದಿಲ್ಲ. ಸಾವಿರಾರು ರೂಪಾಯಿ ಖರ್ಚುಮಾಡಿ ಬಾವಿ ತೋಡಿದರೂ ನೀರು ಸರಿಯಾಗಿ ಬರುವುದಿಲ್ಲ. ಆದುದರಿಂದ ಕೆರೆಗಳನ್ನು ಸರಿಯಾಗಿ ದುರಸ್ತು ಮಾಡಿ ದರೆ ನೀರು ಬರುತ್ತದೆ. ಈಗ ಕೊಟ್ಟಿರುವ 60-65 ಸಾವಿರ ರೂಪಾಯಿ ಸಾಕಾಗುವುದಿಲ್ಲ. ಕೆರೆಗಳೆಷ್ಟಿ ವೆಯೋ ಅವಕ್ಕೆ ಸಾಕಾಗುವಷ್ಟು ಹಣವನ್ನೊದಗಿಸ ಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಜಿ. ದುಗ್ಗಪ್ಪ (ಹೊಳಲಕೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ಕೆರೆಗಳು ಜಾಸ್ತಿಇರುವ ಜಿಲ್ಲೆ ಗಳ ತೊಂದರೆ ಒಂದು ರೀತಿಯಾದರೆ ಕೆರೆಗಳಿಲ್ಲದಿರುವ ಜಿಲ್ಲೆಗಳ ತೊಂದರೆ ಇನ್ನೊಂದು ರೀತಿಯಾಗಿದೆ. ನಮ್ಮ ಜಿಲ್ಲೆಯಲ್ಲಿ ಹೆಚ್ಚು ಕೆರೆಗಳಿಲ್ಲದೆ ತೊಂದರೆಯಾಗಿದೆ. ಒಟ್ಟು ಇರುವುದು 144 ಮೇಜರ್ ಕೆರೆಗಳು ಮತ್ತು 206 ಮೈನರ್ ಕೆರೆಗಳು. ಆದಕಾರಣ ನಾನು ಸರ್ಕಾರ ವನ್ನು ಕೇಳಿಕೊಳ್ಳುವುದಿಷ್ಟೆ ; ನಮ್ಮ ಜಿಲ್ಲೆಯಲ್ಲಿ ಮಳೆಯಾಗುವುದು ಕಡಮೆ. ಅಲ್ಲಿ ಕೆಲವು ಹಳ್ಳಗಳಿವೆ. ಅಲ್ಲಿ ಬರುವ ಅಲ್ಪಸ್ವಲ್ಪ ನೀರನ್ನು ತಡೆಗಟ್ಟಿ ಕೆರೆಗಳನ್ನು ಮಾಡಿದರೆ ಅನುಕೂಲ. ಉದಾಹರಣೆಗೆ ಸಾಗಲೀ ಹಳ್ಳ ಎಂದಿದೆ. ಇದರ ನೀರು ತುಂಗಭದ್ರ ನದಿಗೆ ಹೋಗು ತ್ತದೆ. ಚೀಫ್ ಇಂಜನಿಯರ್‌ರವರು ಕೂಡ ನೋಡಿ ದ್ದಾರೆ. ಏನಾದರೂ ಮಾಡಿ ಆ ನೀರನ್ನು ತಡೆಗಟ್ಟಿದರೆ ನಮ್ಮ ಜಿಲ್ಲೆಗೆ ಅನುಕೂಲವಾಗುತ್ತದೆಯೋ ಏನೋ ಎನಿಸುತ್ತದೆ. ಕಳೆದ ಎರಡು ವರ್ಷಗಳಿಂದ ಬರಮ ನಾಯಕನ ದುರ್ಗ, ದೊಗ್ಗನಹಾಳು ಈ ಎರಡು ಕೆರೆ ಗಳಮೇಲೆ ಮೂರು ಕಾಸೂಕೂಡ ಖರ್ಚುಮಾಡಿಲ್ಲ. ಏನು ಕಾರಣವೋ ಗೊತ್ತಿಲ್ಲ. 1946ನೆಯ ಇಸವಿ ಯಲ್ಲಿ ಮುತಗದೂರು ಕೆರೆಯನ್ನು ಮಾಡಿದರೂ ನೂರು ಎಕರೆಗೆ ನೀರುಕೊಟ್ಟಿಲ್ಲ. ಇದು 1946ರಿಂದ ಪ್ರಾರಂ ಭವಾಗಿ ಅಚ್ಚುಕಟ್ಟಿಗೆ ನೀರು ಕೊಡಿ ಎಂದರೆ ಇನ್ನೂ ಕೊಡದಿದ್ದರೆ ಹೇಗೆ?

ಇನ್ನೊಂದು, ಕಾಗಲಗೆರೆ ಎಂದಿದೆ. ಶ್ರೀಮಾನ್ ಸಿದ್ದಪ್ಪನವರು ಮಂತ್ರಿಗಳಾಗಿದ್ದ ಕಾಲದಿಂದಲೂ ಅದಕ್ಕೆ ಅಂದಾಜು ವಗೈರೆ ಆಗಿ ಅಕಸ್ಮಾತ್ ಈ ವರ್ಷ ಬಡ್ಜೆಟ್ಟಿನಲ್ಲಿ ಅದಕ್ಕೆ ಹಣವನ್ನು ತೋರಿಸಿದ್ದಾರೆ. ಶ್ರೀಮಾನ್ ಇಮಾಂ ಸಾಹೇಬರ ಕಾಲದಿಂದಲೂ ಅದನ್ನು ಮಾಡಿಸಿಕೊಡಬೇಕೆಂದು ಜನ ಕೇಳುತ್ತಿದ್ದಾರೆ. ಈ ಕೆಲಸವನ್ನು ಈ ವರ್ಷ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರೆವಿನ್ಯೂ ಮಂತ್ರಿಗಳೂ ರೆವಿನ್ಯೂ ಕಮೀಷನರೂ ನಮ್ಮ ಜಿಲ್ಲೆಗೆ ಬಂದಿದ್ದಾಗ ಅಲ್ಲಿನ ಕೆಲಸ ಗಳನ್ನೆಲ್ಲಾ ತೆಗೆದುಕೊಳ್ಳಲು ಯಾವ ಅಡ್ಡಿ ಆತಂಕವೂ ಇಲ್ಲವೆಂದು ಹೇಳಿ ಸೂಚನೆಕೊಟ್ಟು ಬಂದರು. ಆದರೂ ಇಲ್ಲಿಯವರೆಗೂ ಅಲ್ಲಿಂದ ವರದಿಯನ್ನು ತರಿಸಿಲ್ಲ, ಮೂರು ಕಾಸಿನ ಕೆಲಸವನ್ನೂ ಸಹ ಇದುವರೆಗೂ ಮಾಡಿಲ್ಲ.

Activities of the Mysore Public Works Department ಎನ್ನುವ ಒಂದು ಪುಸ್ತಕ ವನ್ನು ನಮ್ಮ ಕೈಯಲ್ಲಿ ಕೊಟ್ಟಿದ್ದಾರೆ. ಹೊಳಲ್ಕೆರೆ ತಾಲ್ಲೂಕಿಗೆ ಮೂರುಕಾಸಿನ provision ಸಹ ಮಾಡಿಲ್ಲ. ಇದು ಬಹಳ ಅನ್ಯಾಯವೆಂದು ನಾನು ತಮ್ಮಲ್ಲಿ ಹೇಳುತ್ತೇನೆ.

ಅಧ್ಯಕ್ಷರು.—ಈ ಸಲ ಮೂರು ಪ್ರಾಜೆಕ್ಟ್‌ಗಳನ್ನು ಸೇರಿಸಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ಕೆಲಸ ಷುರುವಾದ ಮೇಲೆ ಸ್ವಲ್ಪ ಸಮಾಧಾನಪಟ್ಟುಕೊಳ್ಳಬಹುದು.

ಶ್ರೀ ಕಡಿದಾಳ್ ಮಂಜಪ್ಪ.—ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿರತಕ್ಕ major worksನಲ್ಲಿ ದೊಡ್ಡದೊಡ್ಡ projects ಹಿಂದೆ ಆಗಿದ್ದುವು, ಈಗ ಆಗುತ್ತ ಇರುವುವು ಮುಂದೆ ಆಗತಕ್ಕ ಕೆಲಸಗಳು ಎಲ್ಲ ಇವೆ.

ಶ್ರೀ ಜಿ. ದುಗ್ಗಪ್ಪ.—ತಾವು appendix ನೋಡೋಣವಾಗಲಿ. "The following are the irrigation works in progress" ರಸ್ತೆಗಳನ್ನು ತೆಗೆದುಕೊಳ್ಳೋಣ. ಮಲೆನಾಡಿನವರ ಹಾಗೆ ನಾವು 22 ಪ್ರಾಜೆಕ್ಟ್ ಕಟ್ಟಿಸಿಕೊಡಿ, 11 ರಸ್ತೆಗಳನ್ನು ಮಾಡಿ ಕೊಡಿ, 25 ಕೆರೆಗಳನ್ನು ಕಟ್ಟಿಸಿಕೊಡಿ, ಅಣೆಕಟ್ಟು ಗಳನ್ನು ಕಟ್ಟಿಸಿಕೊಡಿ ಎಂದು ಕೇಳುವುದಿಲ್ಲ. ಮೂರು ಕೆರೆಗಳಿಗೆ ಮಾತ್ರ ಅವಕಾಶವಿದೆ. ಅವಕ್ಕೆ provision ಮಾಡಿ ಬಡ್ಜೆಟ್ಟಿನಲ್ಲಿ ಸೇರಿಸಿ ಈ ವರ್ಷ ಕೆಲಸ ಪ್ರಾರಂಭ ಮಾಡಿಸಿ ಎಂದು ಕೇಳುತ್ತಿದ್ದೇನೆ. ಅದಕ್ಕಿಂತ ಹೆಚ್ಚಿಗೆ ಏನನ್ನೂ ಕೇಳುವುದಿಲ್ಲ. ನಾನು ಈ ವಿಚಾರದಲ್ಲಿ ಒಂದು cut motion ಕಳುಹಿಸಿದ್ದೇನೆ. ದೊಗ್ಗನ ಹಾಳಕೆರೆ, ಭರಮಣ್ಣ ನಾಯಕನ ದುರ್ಗದಕೆರೆ ಮತ್ತು ಕಾಗಳ ಕೆರೆ ಹತ್ತಿರ ಒಂದು ಹೊಸಕೆರೆ ಇವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—National Extension Service Blocks ತೆಗೆದುಕೊಂಡಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ಅದು ಇಂಡಿಯಾ ಸರ್ಕಾ ರದ್ದು. ಅದರಲ್ಲಿ ಮೈಸೂರು ಸರ್ಕಾರದ್ದು ಏನೂ ಇಲ್ಲ. ಅದೇನೇ ಇರಲಿ ಈ ವರ್ಷವೇ ಮೇಲೆ ಹೇಳಿದ ಮೂರು ಕೆಲಸಗಳನ್ನೂ ಪ್ರಾರಂಭಮಾಡುವುದಕ್ಕೆ ಸಂಬಂಧಪಟ್ಟ ಇಲಾಖೆಗೆ ಸೂಕ್ತ instructions ಕೊಡಬೇಕು ಎಂದು ತಮ್ಮನ್ನು ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಈ ಡಿಮ್ಯಾಂಡನ್ನು ಸಂಪೂರ್ಣವಾಗಿ ಸಮರ್ಥಿಸುತ್ತ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ಮೈಸೂರು ದೇಶದಲ್ಲಿ 22,000 ಮೈನರ್ ಮತ್ತು ಮೇಜರ್ ಕೆರೆಗಳಿವೆ ಎಂದು ಕಾಣುತ್ತದೆ. ಇದರಲ್ಲಿ ಅರ್ಧ ಎಂದರೆ ಸುಮಾರು 10 ಸಾವಿರ ಕೆರೆಗಳು ಕಟ್ಟೆ ಒಡೆದುಹೋಗಿ ಅಥವಾ ತೂಬು ಹೋಗಿರುವುವು ಆಗಿವೆ. ನಮ್ಮ ಜಿಲ್ಲೆಯಲ್ಲಿ ಲೆಕ್ಕ ಹಾಕಿದರೆ ಸುಮಾರು ಒಂದೂವರೆ ಸಾವಿರ ಮೇಜರ್ ಮತ್ತು ಮೈನರ್ ಕೆರೆಗಳಿದ್ದರೂ ಮಳೆ ಬಂದು ಅವುಗಳಿಂದ ನೀರು ಹರಿದು ಹೋಗುತ್ತಿದ್ದರೂ ಕೇಳುವವರೇ ಇಲ್ಲ. ಕಟ್ಟೆ ಒಡೆದುಹೋಗಿದ್ದರೆ ಅವನ್ನು ಪುನಃ ಸರಿಮಾಡಿಸಿಲ್ಲ. ಕ್ಷಾಮ ಕಾಲದಲ್ಲಿ ಅನೇಕ ಕೆರೆಗಳಲ್ಲಿ ಹೂಳು ತೆಗೆಯಿಸಿ ಕೆರೆಗಳನ್ನು ರಿಪೇರಿ ಮಾಡಿದ್ದಾರೆ. ಮಂತ್ರಿಗಳು ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲಿರುವ ಅಧಿಕಾರಿಗಳಿಗೂ ಚೀಫ್ ಇಂಜಿನಿಯರ್‌ರವರ ಮುಖಾಂತರ ಸರ್ಕ್ಯುಲರ್ ಕಳುಹಿಸಿ ಈ ಕೆಲಸಗಳಿಗೆ ನಿಗಾ ಕೊಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಆದರೂ ಇವೊತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿ ಎಷ್ಟು ಕೆಲಸಗಳು ನಡೆದಿವೆ ಎಂದು ಕೇಳುತ್ತೇನೆ. ಮಂತ್ರಿಗಳು ಕೆಲಸಮಾಡುತ್ತಿದ್ದಾರೆ. ಕೋಟ್ಯಂತರ ರೂಪಾಯಿ ಖರ್ಚುಮಾಡಲು ಹಣವನ್ನೊದಗಿಸುತ್ತಿದ್ದಾರೆ. ಮಾನ್ಯ ಸದಸ್ಯರಾದ ಶಿವಪ್ಪನವರು ಮತ್ತು ದುಗ್ಗಪ್ಪನವರು ಮಾತನಾಡುತ್ತ ನಮಗೆ ಸಹಾಯ ಕೊಡದೆ ಚಿಕ್ಕಮಗಳೂರು ಜಿಲ್ಲೆಯವರಿಗೆ ನೀರನ್ನು ಕೊಟ್ಟಿದ್ದೀರೆಂದು ಹೇಳಿದರು. ಲಕ್ಕವಳ್ಳಿ ಜಲಾಶಯವನ್ನು ನಮ್ಮ ಜಿಲ್ಲೆಯಲ್ಲಿ ಕಟ್ಟುತ್ತಿದ್ದೀರಿ. ಅದರ ಕೆಳಗೆ ಎರಡು ಲಕ್ಷ ಎಕರೆ ಸಾಗುವಳಿಯಾಗುತ್ತದೆ. ಇದರ ಪೈಕಿ ನಾಲ್ಕು ಸಾವಿರ ಎಕರೆ ತರೀಕೆರೆ ತಾಲ್ಲೂಕಿನಲ್ಲಿಯೂ ಕೆಲವು ಭಾಗ ಶಿವಮೊಗ್ಗ ಜಿಲ್ಲೆಯಲ್ಲಿಯೂ ಉಳಿದದ್ದೆಲ್ಲ ಚಿತ್ರದುರ್ಗ ಜಿಲ್ಲೆಯಲ್ಲೂ ಸಾಗುವಳಿಗೆ ಬರುವುದರಿಂದ ಈ ಜಲಾಶಯದ ಹೆಚ್ಚು ಪ್ರಯೋಜನ ಆ ಜಿಲ್ಲೆಯವರಿಗೆ ದೊರೆಯುತ್ತದೆ. ನಾವು ಸೊಳ್ಳೆಯಿಂದ ಕಡಿಸಿಕೊಳ್ಳಬೇಕು ; ನಮಗೆ ನೀರಿನ ಉಪಯೋಗವಿಲ್ಲ. ಆದರೆ, ಅವರು ನೀರಿನ ಉಪಯೋಗವನ್ನು ಪಡೆದು ಬೇಕಾದ ಬೆಳೆಯನ್ನು ಬೆಳೆದುಕೊಳ್ಳಬಹುದು. ಇದು ಯಾವ ನ್ಯಾಯವೆಂದು ಕೇಳುತ್ತೇನೆ.

ನಮ್ಮ ಮಾನ್ಯ ಮಂತ್ರಿಗಳಲ್ಲಿ ಕಡೂರು ತಾಲ್ಲೂಕಿಗೆ ಸಂಬಂಧಿಸಿದ ಅನೇಕ ವಿಚಾರಗಳನ್ನು ಅರಿಕೆಮಾಡಿಕೊಂಡಿದ್ದೇನೆ. ಆದರೆ, ಅದರಲ್ಲಿ ಮಾನ್ಯ ಮಂತ್ರಿಗಳ ತಪ್ಪು ಇಲ್ಲ. ಚೀಫ್ ಇಂಜಿನಿಯರ ತಪ್ಪು ಇಲ್ಲ. ನೌಕರರ ತಪ್ಪು ಇಲ್ಲ. ಜಿಲ್ಲೆಯಲ್ಲಿ ಮತ್ತು ತಾಲ್ಲೂಕಿನಲ್ಲಿರತಕ್ಕ ಅಧಿಕಾರಿಗಳು ದಕ್ಷತೆಯಿಂದ ಕೆಲಸಮಾಡುತ್ತಿಲ್ಲವೆಂದು ಹೇಳುತ್ತಿದ್ದೇನೆ. ಮೈಸೂರು ಸಂಸ್ಥಾನದಲ್ಲಿರುವ 82 ತಾಲ್ಲೂಕುಗಳ ಪೈಕಿ ರೆವಿನ್ಯೂ ಕಂದಾಯ ಕೊಡುವುದರಲ್ಲಿ ಕಡೂರು ತಾಲ್ಲೂಕು ಐದನೆಯ ತಾಲ್ಲೂಕು ಆಗುತ್ತದೆ. ಸುಮಾರು ಒಂದೂವರೆ ಕೋಟಿ ರೂಪಾಯಿ ಉತ್ಪತ್ತಿಯಿರತಕ್ಕ ಮೈಸೂರು ದೇಶದಲ್ಲಿ ಐದನೆಯ ತಾಲ್ಲೂಕಾಗಿರತಕ್ಕ ಕಡೂರು ತಾಲ್ಲೂಕಿನಲ್ಲಿ ಒಂದೂಕಾಲು ಲಕ್ಷ ಜನಸಂಖ್ಯೆ ಇದೆ. ಇಂಥ ತಾಲ್ಲೂಕಿನಲ್ಲಿ ಇವೊತ್ತಿನವರೆಗೆ ಯಾವ ಮೈನರ್ ಕೆರೆಯನ್ನಾಗಲಿ, ಮೇಜರ್ ಕೆರೆಯನ್ನಾಗಲಿ ಅಥವಾ ಇನ್ನಾವ ನೀರಾವರಿ ಕೆಲಸವನ್ನಾಗಲಿ ಮಾಡಿದ್ದೀರಾ? ಇದು ಯಾರ ತಪ್ಪು ? ಮಂತ್ರಿಗಳು ಬಂದ ಕಾಲದಲ್ಲಿ ಅವರಲ್ಲಿ ಹೋಗಿ ನಮ್ಮ ತಾಲ್ಲೂಕಿನಲ್ಲಿ ಏನೇನು ಕಾರ್ಯಗಳು ನಡೆಯಬೇಕು ಎಂಬುದನ್ನೆಲ್ಲ ಹೇಳಿದ್ದೇವೆ. ಇವೊತ್ತು ಕಡೂರು ತಾಲ್ಲೂಕಿನಲ್ಲಿ ಒಂದು ಪ್ರಾಜೆಕ್ಟ್, ಒಂದು channel ಅಥವಾ ಕೆರೆ ರಿಪೇರಿ, ಯಾವುದು ಆಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಕಡೂರು ಊರು ಮುಂದಿನ ಕೆರೆಯನ್ನು ಜೀರ್ಣೋದ್ಧಾರ ಮಾಡಿದ್ದೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅದು ಒಡೆದ ಕೆರೆ. ಯಾವ ಕೆರೆಯನ್ನೂ ರಿಪೇರಿ ಮಾಡಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ದೇವನೂರು ಅಣೆ ಕಟ್ಟು . . . .

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ನಮ್ಮ ತಾಲ್ಲೂಕಿನಲ್ಲಿ ಐದು ಕೆರೆಗಳಿವೆ. ಇವೆಲ್ಲವನ್ನೂ ದುರಸ್ತಿ ಮಾಡಿಸಿದರೆ ವಾಣಿವಿಲಾಸ ಸಾಗರಕ್ಕೆ ನೀರು ಕಡಿಮೆಯಾಗುತ್ತದೆ ಎಂಬ ಉದ್ದೇಶದಿಂದ ದುರಸ್ತಿ ಮಾಡಿಸದೆ ಇರಬಹುದು ಎಂದು ತೋರುತ್ತದೆ. ಹೇಗೆಂದರೆ, ನನಗೆ ಜ್ಞಾಪಕವಿರುವಹಾಗೆ, ಹಿಂದೆ ಅಯ್ಯನಕೆರೆ ರಿಪೇರಿ ವಿಷಯ ಬಂದಾಗ ಚಿತ್ರದುರ್ಗ ಜಿಲ್ಲೆಯಲ್ಲಿರತಕ್ಕ ಸದಸ್ಯರು ನಮಗೆ ನೀರು ಬರುವುದು ಕಡಿಮೆಯಾಗುತ್ತದೆ ಹಾಗೆ ಮಾಡಬೇಡಿ ಎಂದು ಅನೇಕ ಸಲ ಹೇಳಿದ್ದಾರೆ. ಹಾಗೆ ಆ ಜಿಲ್ಲೆಯ ಸದಸ್ಯರನ್ನು ತೃಪ್ತಿಪಡಿಸುವುದಕ್ಕೇನಾದರೂ ಈ ರೀತಿ ಮಾಡಿದ್ದೀರೋ ಏನೋ ಎಂದು ನನಗೆ ಸಂಶಯ ಬರುತ್ತದೆ. ಇದರಲ್ಲಿ ಮಂತ್ರಿಮಂಡಲದಮೇಲೂ ಆಕ್ಷೇಪಣೆ ಇಲ್ಲ, ಬೆಂಗಳೂರಿನಲ್ಲಿರುವ ಚೀಫ್ ಇಂಜಿನಿಯರವರಮೇಲೂ ಆಕ್ಷೇಪಣೆ ಇಲ್ಲ. ಆದರೆ, ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿರುವ ಮರಾಮತ್ತು ಇಲಾಖೆಯ ಅಧಿಕಾರಿಗಳು ಯಾವ ಕೆಲಸವನ್ನೂ ಸಮರ್ಪಕವಾಗಿ ಮಾಡುತ್ತಿಲ್ಲವೆಂದು ಘಂಟಾಘೋಷವಾಗಿ ಹೇಳಬೇಕಾಗಿದೆ. ಅವರಿಗೆ ಹೆದರಿಕೆಯೇ ಇಲ್ಲದಂತಾಗಿದೆ.

ನಾವು ಒಂದು ಲಕ್ಷ ಪ್ರಜೆಗಳಿಂದ ಆರಿಸಲ್ಪಟ್ಟು ಸದಸ್ಯರಾಗಿ ಈ ಶಾಸನಸಭೆಗೆ ಯಾತಕ್ಕೆ ಬಂದಿದ್ದೇವೆ ಎಂಬುದನ್ನು ಯೋಚನೆಮಾಡಬೇಕು. ನಾನು ತಮ್ಮನ್ನು ಆಕ್ಷೇಪಣೆ ಮಾಡುತ್ತಿಲ್ಲ. ತಾವೇನೋ 2-3 ಕೋಟಿ ರೂಪಾಯಿ ಖರ್ಚು ಮಾಡಿರುತ್ತೀರಿ. ಜಿಲ್ಲಾ ಮತ್ತು ತಾಲ್ಲೂಕು ಹಂತಗಳಲ್ಲಿರತಕ್ಕ P.W.D. ಅಧಿಕಾರಿಗಳು ಸರಿಯಾಗಿ ಕೆಲಸಮಾಡುತ್ತಿಲ್ಲ. ಇದಕ್ಕೆ ಸಾಕಷ್ಟು ಉದಾಹರಣೆಗಳನ್ನು ಕೊಡುತ್ತೇನೆ. ಇವರು ಮಾಡುತ್ತಿರುವ ಅನ್ಯಾಯಗಳನ್ನು ಘಂಟಾಘೋಷವಾಗಿ ಹೇಳುತ್ತೇನೆ. ಹೀಗಿದ್ದರೆ ನಮ್ಮ ಕೆಲಸಗಳು ಖಂಡಿತವಾಗಿ ಆಗುವುದಿಲ್ಲ. ನಮ್ಮಲ್ಲಿ ನಿಡುವಳ್ಳಿ, ಕೋಡಿಹಳ್ಳಿ ಮೊದಲಾದ 3-4 ಪ್ರಾಜೆಕ್ಟುಗಳನ್ನು ಮಾಡಬೇಕು ಎಂದು ಇದೆ. ಇವುಗಳಿಗೆ ಎಸ್ಟಿಮೇಟ್ ತಯಾರಾಗಿದೆಯೋ ಎಂದು ಹೇಳಬೇಕು. ಈ ಸರ್ಕಾರ ಬಂದಮೇಲೆ ಯಾವ ಪ್ರಾಜೆಕ್ಟ್ ಮಾಡಿಸಿದ್ದೀರಿ, ಯಾವ channel ಮಾಡಿಸಿದ್ದೀರಿ, ಯಾವ ಕೆರೆ ಮಾಡಿಸಿದ್ದೀರಿ ? ನಾನು ಇದನ್ನೆಲ್ಲ ನನಗೋಸ್ಕರ ಕೇಳುತ್ತಿಲ್ಲ. ದೇಶಕ್ಕೋಸ್ಕರ ಕೇಳುತ್ತಿದ್ದೇನೆ. ಮಂತ್ರಿಗಳು ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಕೆಲಸಮಾಡಬೇಕು ಎಂದು ಹೇಳುತ್ತೇನೆ.

6 P.M.

ಕಡೂರು ತಾಲ್ಲೂಕಿನಲ್ಲಿ ಕೆರೆಗಳ ರಿಪೇರಿ ಸರಿಯಾಗಿ ಆಗಿಲ್ಲ, ಮಾಡುತ್ತೀರೋ, ಇಲ್ಲವೋ ಅದೂ ಗೊತ್ತಿಲ್ಲ. ರಿಪೇರಿ ಮಾಡದೆ ಇದ್ದರೆ ಅಲ್ಲಿನ ರೈತರು ತರೀ ಕಂದಾಯ ಕೊಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ತಾವು ಕೂಲಂಕಷವಾಗಿ ಈ ವಿಚಾರಗಳನ್ನೆಲ್ಲಾ ತಿಳಿದುಕೊಂಡು ನಮ್ಮ ತಾಲ್ಲೂಕಿನಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಹೇಳಿ ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

* ಶ್ರೀ ಎಸ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಮೈನರ್ ಕೆರೆಗಳ ಜೀರ್ಣೋದ್ಧಾರದ ವಿಷಯದಲ್ಲಿ ಅನೇಕರು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಬಹಳ ಕಾಲದಿಂದ ಮೈನರ್ ಕೆರೆಗಳನ್ನು ಜೀರ್ಣೋದ್ಧಾರ ಮಾಡತಕ್ಕ ಜವಾಬ್ದಾರಿ ಅಚ್ಚುಕಟ್ಟುದಾರರ ಮೇಲೇ ಇತ್ತು, ಅವರೇ ಮಾಡುತ್ತ ಇದ್ದರು. ಇತ್ತೀಚೆಗೆ ಅಚ್ಚುಕಟ್ಟುದಾರರು ಈ ಮೈನರ್ ಕೆರೆಗಳ ಸಾಲಾಬಾದು ಕಾಂಗಾರಿ ಮಾಡುವುದನ್ನು ಬಿಟ್ಟಮೇಲೆ, ಸರ್ಕಾರದವರೇ ಆ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಈಗ ಸುಮಾರು 8-10 ವರ್ಷದಿಂದ ಈಚೆಗೆ ಸರ್ಕಾರದವರೇ ಈ ಮೈನರ್ ಕೆರೆಗಳ ಜೀರ್ಣೋದ್ಧಾರ ಮಾಡತಕ್ಕ ಒಂದು ಪದ್ಧತಿ ಬಂದಿದೆ, ನೂರಾರು ಕೆರೆಗಳು ಈಗಾಗಲೇ ಜೀರ್ಣೋದ್ಧಾರವಾಗಿವೆ. ಈಗ ಶ್ರೀ ಟಿ. ಸಿ. ಬಸಪ್ಪನವರು ಸಲಹೆ ಮಾಡಿದ ಹಾಗೆ ಮೈನರ್ ಕೆರೆಗಳಿಗೆ ತಾವು ಕೊಡತಕ್ಕ ಒಟ್ಟು ದುಡ್ಡನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಎಷ್ಟೆಷ್ಟು ಕೆರೆಗಳ ಜೀರ್ಣೋದ್ಧಾರ ಮಾಡಬೇಕಾಗಿದೆ ಎಂಬ ಲೆಕ್ಕ ಇಟ್ಟುಕೊಂಡು, ಇಂಥ ತಾಲ್ಲೂಕಿಗೆ ಹೆಚ್ಚಾಯಿತು, ಇಂಥ ತಾಲ್ಲೂಕಿಗೆ ಕಮ್ಮಿಆಯಿತು ಎಂಬ ಒಂದು ಆಕ್ಷೇಪಣೆ ಬರದೆ ಇರುವಹಾಗೆ ವ್ಯವಸ್ಥಿತವಾಗಿ ಮಾಡಿದರೆ ಎಲ್ಲರಿಗೂ ಸಮಾಧಾನವಾಗುತ್ತದೆ ಎಂದು ಸಲಹೆ ಮಾಡಲು ಇಷ್ಟಪಡುತ್ತೇನೆ.

ಇನ್ನು ಮೇಜರ್ ಕೆರೆಗಳನ್ನೂ ಕೂಡ ರೈತರು ಸಾಲಾಬಾದು ಕಾಂಗಾರಿ ಮಾಡತಕ್ಕ ವ್ಯವಸ್ಥೆ ಇಲ್ಲದೆ ಇರುವುದರಿಂದ, ಅದಕ್ಕೂ ಸಹ ಹೆಚ್ಚು ದುಡ್ಡು ಖರ್ಚಾಗುವ ಸ್ಥಿತಿಯಲ್ಲಿರುವುದರಿಂದ ಸರ್ಕಾರದವರೇ ಅದರ ಆಡಳಿತವನ್ನು ವಹಿಸಿಕೊಳ್ಳಬೇಕೆಂದು ಸಲಹೆ ಮಾಡಲಿಚ್ಛಿಸುತ್ತೇನೆ. ಇನ್ನು ಮೇಜರ್ ಕೆರೆಗಳ ಹಿಂದೆ ಇರತಕ್ಕ ನಾಲೆಗಳು ಮಡಬಾಯಿಗಳ ಸ್ಥಿತಿಯನ್ನು ಐದಾರು ವರ್ಷಗಳಲ್ಲಾಗಲಿ ಅಥವಾ ಯಾವುದಾದರು ಒಂದು ನಿರ್ದಿಷ್ಟವಾದ ಅವಧಿಯಲ್ಲಿ ಸರಿಪಡಿಸುವುದಕ್ಕೆ ಪ್ರಯತ್ನಮಾಡಬೇಕು. ಈ ವರ್ಷದ ಬಜೆಟ್‌ನಲ್ಲಿ ನೋಡಿದಹಾಗೆ ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ ನಾಗವಲ್ಲಿ ಕೆರೆಯಹಿಂದೆ ನಾಲಾ ಸಿಸ್ಟಂ ಸರಿಪಡಿಸಬೇಕಾದರೆ ಎಷ್ಟುದುಡ್ಡು ಆಗುತ್ತದೆ ಎಂದು ಅಂದಾಜು ಮಾಡಿ ಈ ವರ್ಷ ದುಡ್ಡು ಒದಗಿಸಿದ್ದೀರಿ. ಇದೇ ಕ್ರಮದಲ್ಲಿ ಮೈಸೂರು ದೇಶದಲ್ಲಿರತಕ್ಕ ಪ್ರತಿಯೊಂದು ನಾಲಾ ಸಿಸ್ಟಂನ್ನು ಸರಿಪಡಿಸಲು ಒಂದು ವರ್ಷವಲ್ಲ ಹತ್ತು ವರ್ಷ ಆದರೂ ತೆಗೆದುಕೊಂಡು ಸರಿಪಡಿಸಲು ವ್ಯವಸ್ಥೆ ಮಾಡಬೇಕು. ಆದ್ದರಿಂದ ಪ್ರತಿಯೊಂದು ವರ್ಷದಲ್ಲೂ ಕೂಡ ನಿರ್ದಿಷ್ಟವಾದ ಸಂಖ್ಯೆಯ ಕೆರೆಗಳನ್ನು ಮತ್ತು ನಾಲೆಗಳನ್ನು ತೆಗೆದುಕೊಂಡು ವ್ಯವಸ್ಥಿತವಾದ ರೀತಿಯಲ್ಲಿ ಸರಿಪಡಿಸಬೇಕೆಂದು ಸಲಹೆ ಮಾಡುತ್ತೇನೆ.

ಮೇಜರ್ ಕೆರೆಗಳ ವ್ಯವಸ್ಥೆಯನ್ನು ತೆಗೆದುಕೊಂಡ ಮೇಲೆ ಏಕರೇಜ್ ಸೆಸ್ ಹಾಕುವುದಕ್ಕೆ ಇರಿಗೇಷನ್ ಆಕ್ಟ್‌ನಲ್ಲಿ ಅವಕಾಶ ಇದೆ. ಆದ್ದರಿಂದ ರೈತರಿಂದ ಮುಚ್ಚಳಿಕೆ ತೆಗೆದುಕೊಂಡು ಅವರಿಂದ 2/3 ಭಾಗ ತೆಗೆದುಕೊಳ್ಳಬೇಕಾದ ಅಗತ್ಯ ಅಷ್ಟಾಗಿಲ್ಲ. ಏಕರೇಜ್ ಸೆಸ್ ಹಾಕಬೇಕಾದ್ದು ಅಗತ್ಯ, ಸರ್ಕಾರದವರು ಹಿಂದೆ ಕೆರೆಗಳನ್ನು ಕಟ್ಟಿರುವುದರಿಂದ ಆ ಕೆರೆಗಳನ್ನು ಜೀರ್ಣೋದ್ಧಾರಮಾಡಿ ಅಲ್ಲಿರತಕ್ಕ ಅಚ್ಚುಕಟ್ಟುದಾರರಿಗೆ ಹೆಚ್ಚು ಪ್ರಯೋಜನ ದೊರಕುವಂತೆ ಮಾಡುವುದಾದರೆ ಯಾರು ಪ್ರಯೋಜನ ಪಡೆಯುತ್ತಾರೋ ಅವರು ಹೆಚ್ಚು ದುಡ್ಡು ಕೊಡುವುದಕ್ಕೆ ಸಿದ್ಧವಾಗಿದ್ದಾರೆ ಎಂದು ಧಾರಾಳವಾಗಿ ಹೇಳಬಹುದು. ಶ್ರೀ ನಾರಾಯಣ ರೆಡ್ಡಿಯವರು ಒಬ್ಬರು ಆಕ್ಷೇಪಣೆ ಮಾಡಬಹುದು ಅಷ್ಟೆ. ಆದ್ದರಿಂದ ಸರ್ಕಾರದವರು ಈ ಮೇಜರ್ ಕೆರೆಗಳ ಆಡಳಿತವನ್ನು ವಹಿಸಿಕೊಂಡು, ಏಕರೇಜ್ ಸೆಸ್ ವಿಧಿಸಿ, ನಾಲಾ ಸಿಸ್ಟಂ ಸರಿಪಡಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಪಿ. ಡಬ್ಲ್ಯು. ಡಿ. ಸಬ್-ಡಿವಿಜನ್ನಿನಲ್ಲಿ ಯಾವ ಯಾವ ಸಬ್-ಡಿವಿಜನ್‌ನಲ್ಲಿ ಹೆಚ್ಚು ಕೆಲಸ ಇದೆ, ಯಾವ ಸಬ್-ಡಿವಿಜನ್‌ನಲ್ಲಿ ಕೆಲಸ ಕಡಿಮೆ ಆಯಿತು ಎಂಬುದನ್ನು ಆಗಿಂದಾಗ್ಗೆ ವರ್ಷಕ್ಕೆ, ಎರಡು ವರ್ಷಕ್ಕಾದರೂ ಇಂಜಿನಿಯರು ನಿರ್ದಿಷ್ಟವಾದ ಸಲಹೆ ತೆಗೆದುಕೊಂಡು ಯಾವ ಸಬ್-ಡಿವಿಜನ್‌ನಲ್ಲಿ ಕೆಲಸ ಜಾಸ್ತಿಮಾಡಬಹುದು, ಹೆಚ್ಚು ಜ್ಯೂರಿಸ್‌ಡಿಕ್ಷನ್ ಒದಗಿಸುವುದಕ್ಕೆ ಸಾಧ್ಯ ಅಥವಾ ಯಾವುದಕ್ಕೆ ಕೆಲಸ ಕಮ್ಮಿ ಮಾಡಬೇಕು ಬಹಳ ಜಾಸ್ತಿಇದೆ ಎಂಬುದನ್ನೂ ಮತ್ತು ಪ್ರತಿಯೊಂದು ಸಬ್-ಡಿವಿಜನ್‌ಗೂ ಕೆಲಸ ಇದೆಯೋ ಇಲ್ಲವೇ ಎಂಬುದನ್ನೂ ಆಗಿಂದಾಗ್ಗೆ ತನಿಖೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಮೇಜರ್ ಮತ್ತು ಮೈನರ್ ಕೆರೆಗಳ ರಿಪೇರಿ ಮಾಡುವ ವಿಷಯದಲ್ಲಿ ಕೆಲವರು ಸಲಹೆ ಮಾಡಿದರು. ಮೇಜರ್ ಮತ್ತು ಮೈನರ್ ಕೆರೆಗಳು ಹೊಂದಿಕೊಂಡು ಹೋದರೆ ಇರಿಗೇಷನ್ ವ್ಯವಸ್ಥೆ ಸರಿಯಾಗಿರುತ್ತದೆಯೇ ಹೊರತು ದೊಡ್ಡ ದೊಡ್ಡ ಕೆರೆಗಳನ್ನು ಕೈಬಿಟ್ಟು ಮೈನರ್ ಟ್ಯಾಂಕ್ಸ್‌ಗೇ ಗಮನ ಕೊಟ್ಟರೆ ಸರಿಹೋಗುವುದಿಲ್ಲ. ಅದೇರೀತಿ ಮೈನರ್ ಕೆರೆಗಳನ್ನು ಕೈಬಿಟ್ಟು ಬರೀ ಮೇಜರ್ ಕೆರೆಗಳಿಗೆ ಗಮನ ಕೊಟ್ಟರೆ ಅದೂ ಸರಿಹೋಗುವುದಿಲ್ಲ. ಎರಡನ್ನೂ ಸರಿ ಹೊಂದಿಸಿಕೊಂಡು, ಹೆಚ್ಚು ಲಾಭ ದೊರಕುವಂತೆ ಮಾಡಬೇಕಾದ್ದು ಅಗತ್ಯ. ದೊಡ್ಡ ದೊಡ್ಡ ಮೇಜರ್ ಕೆರೆಗಳನ್ನು ಕಟ್ಟತಕ್ಕ ಕಾಲದಲ್ಲಿ ಇರಿಗೇಷನ್ ಟ್ರ್ಯಾಕ್ಟ್ ರೋಡ್‌ಗಳನ್ನು ಜೊತೆಯಲ್ಲೇ ಮಾಡಬೇಕಾದದ್ದು ಬಹಳ ಅಗತ್ಯ. ಅದನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಈ ಕೆಲಸ ತೆಗೆದುಕೊಳ್ಳುವ ಕಾಲದಲ್ಲೇ ಯೋಚನೆ ಮಾಡಬೇಕು. ರೈತರು ವ್ಯವಸಾಯ ಮಾಡತಕ್ಕ ಕಾಲದಲ್ಲಿ ನೂರಾರು, ಸಾವಿರಾರು ಎಕರೆಗಳಿಗೆ ಗೊಬ್ಬರ ಸಾಗಿಸುವುದಕ್ಕೆ ಮಾರ್ಗವಿಲ್ಲದೆ ಈಗ ಬಹಳ ತೊಂದರೆಪಡುತ್ತಾ ಇದ್ದಾರೆ. ಆದ್ದರಿಂದ ಹೊಸದಾಗಿ ಕಟ್ಟುತ್ತಿರುವ ಕೆರೆಗಳಲ್ಲಿ ಆ ರೀತಿ ರಸ್ತೆಗಳ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ತುಮಕೂರು ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಹಾಗೆ ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಹಿಂದೆ ಕ್ಷಾಮ ಪರಿಸ್ಥಿತಿಯುಂಟಾಗಿದ್ದ ಕಾಲದಲ್ಲಿ ಪಂಡಿತ ಜವಹರಲಾಲ್ ನೆಹರು ಅವರು ಪಾವಗಡ ತಾಲ್ಲೂಕಿಗೆ ಬಂದಿದ್ದಾಗ ಜಯಮಂಗಲಿ ನದಿ ಹತ್ತಿರ ಒಂದು ದೊಡ್ಡ ಕೆರೆ ಕಟ್ಟುವ ಅವಕಾಶ ಇದೆ, ಅದನ್ನು ಮಾಡಿಸಬೇಕೆಂದು ರೈತರೆಲ್ಲಾ ಹೇಳಿಕೊಂಡರು. ನಮ್ಮ ಮುಖ್ಯ ಮಂತ್ರಿಗಳೂಕೂಡ ಅಲ್ಲಿಗೆ ಹೋಗಿದ್ದಾಗ ಅದನ್ನು ಅವರ ಗಮನಕ್ಕೆ ತಂದರು. ಅಂದಾಜು ತಯಾರಾಗಿದೆಯೋ, ಏನು ಎಂಬುದು ಇನ್ನೂ ತಿಳಿಯದು. ಅದನ್ನು ಎರಡನೆ ಪಂಚವಾರ್ಷಿಕ ಯೋಜನೆಯಲ್ಲಾದರೂ ಸೇರಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಕೆಲವುಕಡೆ ದೊಡ್ಡ ಕೆರೆಗಳಿರತಕ್ಕ ಪ್ರದೇಶ ಎಂದರೆ ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ ಶಿರಾ ಮತ್ತು ಇತರ ತಾಲ್ಲೂಕುಗಳಲ್ಲಿ ಆ ಕೆರೆಗಳಿಗೆ ಆಗಿಂದಾಗ್ಗೆ ಮಳೆ ಇಲ್ಲದೇ ಇರುವುದರಿಂದ ಹೆಚ್ಚು ನೀರಿನ ವಸತಿ ಇಲ್ಲದೆ ಅವುಗಳಲ್ಲ ನೀರು ತುಂಬುವುದಕ್ಕೆ ಕಷ್ಟವಾಗಿದೆ. ಆದರೆ ಕುಣಿಗಲ್ ತಾಲ್ಲೂಕಿನಲ್ಲಿ ಹೆಚ್ಚುಮಳೆ ಆಗಿ ನೀರಿನ ವಸತಿಯ ಅನುಕೂಲ ಇರುವುದರಿಂದ ಅಲ್ಲಿರ

ತಕ್ಕ ಕೆರೆಗಳನ್ನು ವ್ಯವಸ್ಥೆಗೊಳಿಸಬೇಕಾದದ್ದು ಬಹಳ ಅಗತ್ಯ. ಕುಣಿಗಲ್ ಕೆರೆ ಸುಮಾರು 3,000 ಎಕರೆ ಅಚ್ಚುಕಟ್ಟು ಪ್ರದೇಶ ಇರತಕ್ಕ ಒಂದು ದೊಡ್ಡಕೆರೆ. ಆ ಕೆರೆಯಹಿಂದೆ ನಾಲಾ ಮತ್ತು ಮಡಬಾಯಿಗಳ ಸ್ಥಿತಿಯನ್ನು ನೋಡಿದರೆ ರೈತರು ಹೇಗೆ ಬೆಳೆ ಬೆಳೆಯುತ್ತಾರೆ ಎಂಬುದನ್ನು ಹೇಳುವುದಕ್ಕೆ ಕಷ್ಟವಾಗುತ್ತದೆ. ರಸ್ತೆಗಳ ವ್ಯವಸ್ಥೆ ಕೂಡ ಇಲ್ಲ. ನಾಲಾ, ಮಡಬಾಯಿಗಳು ಪೂರ್ತಿಯಾಗಿ ರಿಪೇರಿ ಆಗದೆ ರೈತರಿಗೆ ತೀರ ತೊಂದರೆ ಆಗಿದೆ. ಅದನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಒಂದು ಮೂರು ವರ್ಷದ ಯೋಜನೆಯನ್ನಾದರೂ ಹಾಕಿಕೊಂಡು ಪೂರೈಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಂಗಳದ ಕೆರೆ ವಿಷಯದಲ್ಲಿ ಒಂದು ಸಲಹೆ ಮಾಡಬೇಕೆಂದು ಇದ್ದೇನೆ. ಇದು ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿತ್ತು. ಏನೋ ಕಾರಣಾಂತರದಿಂದ ಪಂಚವಾರ್ಷಿಕ ಯೋಜನೆಯಿಂದ ಕೈಬಿಡಬೇಕಾಗಿ ಬಂತು. ಮಾರ್ಕೋನಹಳ್ಳಿ ಜಲಾಶಯದ ಬಲಗಡೆ ನಾಲಾದಿಂದ 1,400 ಎಕರೆಯಷ್ಟು ಅಚ್ಚುಕಟ್ಟು ನಾವು ಈಗಾಗಲೇ ಮಾಡಿರುವುದರಿಂದ ಮಾರ್ಕೋನಹಳ್ಳಿ ಜಲಾಶಯದಲ್ಲಿರತಕ್ಕ ನೀರನ್ನು ಅಷ್ಟು ಎಕರೆ ಜಮೀನಿಗೆ ಒದಗಿಸಲು ಕಷ್ಟವಾಗುತ್ತದೆ ಎಂದು ನನ್ನ ಭಾವನೆ. ಒಂದುವೇಳೆ ಬಲಗಡೆ ನಾಲಾ ಪ್ರದೇಶದವರಿಗೆ ಒದಗಿಸಿದ್ದೇ ಆದರೆ ಎಡಗಡೆ ನಾಲಾದಲ್ಲಿರತಕ್ಕ ಅಚ್ಚುಕಟ್ಟುದಾರರಿಗೆ ತೊಂದರೆ ಆಗುವ ಪರಿಸ್ಥಿತಿ ಬರುತ್ತದೆ. ಅದನ್ನು ತಪ್ಪಿಸಬೇಕಾದರೆ ಮಂಗಳ ಕೆರೆಯನ್ನು ತಾವು ಕೈಗೆ ತೆಗೆದುಕೊಂಡು, ಬಲಗಡೆ ಮಾಡಿರತಕ್ಕ ನಾಲೆಗೆ ನೀರನ್ನು ಒದಗಿಸುವ ಏರ್ಪಾಡನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನೂ ಶಿಂಷಾನದಿಯ ನೀರಿನ ಬಹು ಭಾಗವನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗಿಲ್ಲ. ಅದು ಮದರಾಸು ಸರ್ಕಾರದವರಿಗೆ ಸೇರಿಲ್ಲ. ಮೈಸೂರು ಸರ್ಕಾರದವರಿಗೆ ಸೇರಿದ ಪ್ರಾಂತ್ಯದಲ್ಲಿರತಕ್ಕ ಒಂದು ಆಸ್ತಿ. ಆದ್ದರಿಂದ ಆ ನದಿಯ ನೀರನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳಲಿಕ್ಕೆ ಅವಕಾಶವಿದೆ. ಮಾರ್ಕೋನಹಳ್ಳಿ ಹಿಂಭಾಗದಲ್ಲಿ 10-15 ಸಾವಿರ ಎಕರೆಗಳಿಗೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೂ ಮದ್ದೂರು ತಾಲ್ಲೂಕಿಗೆ ಸಂಬಂಧಪಟ್ಟ ಕೆಲವು ಗ್ರಾಮಗಳಿಗೆ ನೀರಿನ ಅನುಕೂಲ ಮಾಡಿಕೊಳ್ಳುವುದಕ್ಕೂ ಉಪಯೋಗವಾಗುವಂತೆ ಒಂದು ಅಣೆಕಟ್ಟು ಕಟ್ಟಲು ಸಾಧ್ಯವಿದೆ. ಅದನ್ನು ತನಿಖೆ ಮಾಡಿಸಿ ರೈತರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಡಿಮ್ಯಾಂಡ್ ಮನವಿಯನ್ನು ಸ್ವಾಗತಿಸುತ್ತಾ ಹಿಂದಿನ ಕಾಲದಲ್ಲಿ ನಮ್ಮ ಸರ್ಕಾರದವರು ಕೆರೆ ಜೀರ್ಣೋದ್ಧಾರಕ್ಕಾಗಿ ಎಷ್ಟು ಹಣ ಖರ್ಚು ಮಾಡುತ್ತಿದ್ದರೋ, ಅದಕ್ಕಿಂತ ಹೆಚ್ಚು ಹಣವನ್ನು ಈಗ ಖರ್ಚು ಮಾಡುತ್ತಿದ್ದಾರೆಂದು ಹೇಳದೆ ವಿಧಿಯಿಲ್ಲ. ಇದನ್ನು ಎಲ್ಲಾ ಮಾನ್ಯ ಸದಸ್ಯರೂ ಹೇಳಿದ್ದಾರೆ; ಒಪ್ಪಿದ್ದಾರೆ. ಇದು ಅಭಿನಂದನೀಯವಾದುದು. ಈಗ ನಾನು ನಮ್ಮ ಜಿಲ್ಲೆಯ ಕೆರೆ ಜೀರ್ಣೋದ್ಧಾರದ ವಿಷಯದಲ್ಲಿ ಮಾತನಾಡುವುದಕ್ಕೆ ಮೊದಲು ಮಾನ್ಯ ಸದಸ್ಯರಾದ ಶಿವಪ್ಪನವರು ಮಲೆನಾಡು ವಿಚಾರದಲ್ಲಿ ಬಹಳ ಕೋಪದಿಂದ ಮಾತನಾಡಿದ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಮಲೆನಾಡಿನಲ್ಲಿ ಹೆಚ್ಚಿಗೆ ಮಳೆಬಾರದಿದ್ದರೆ ಅಲ್ಲಿರುವ ಕೆರೆಗಳು ತುಂಬದೇ ಇದ್ದರೆ ಚಿತ್ರದುರ್ಗ ಜಿಲ್ಲೆಗಾಗಲಿ, ಕೃಷ್ಣರಾಜ ಸಾಗರಕ್ಕಾಗಲಿ, ಇತರ ಕೆರೆಗಳಿಗಾಗಲಿ ನೀರು ಬರುತ್ತಿರಲಿಲ್ಲ ಎಂದು ಹೇಳುತ್ತೇನೆ. ಮಲೆನಾಡಿನವರು ಮಾಡಿರುವ ಸೇವೆಯನ್ನು ಎಲ್ಲರೂ ಜ್ಞಾಪಿಸಿಕೊಳ್ಳಬೇಕಾದುದು ಅತ್ಯಾವಶ್ಯಕ. ಪ್ಲಾನಿಂಗ್ ಕಮಿಷನ್ ಮತ್ತು ಮಲೆನಾಡಿನ ಅಭಿವೃದ್ಧಿ ಸಮಿತಿ, ಮಲೆನಾಡು ಅಭಿವೃದ್ಧಿಗಾಗಿ ಹೆಚ್ಚು ಹಣ ಖರ್ಚು ಮಾಡಲು ಒಪ್ಪಿರುವಾಗ ಮಾನ್ಯ ಸದಸ್ಯರು ಏಕೆ ಆ ರೀತಿ ಮಾತನಾಡಿದರೋ ತಿಳಿಯದು. ಹಿಂದಿನ ಸಾಲುಗಳಲ್ಲಿ ಮಲೆನಾಡಿನಲ್ಲಿ ಕೆರೆಗಳ ಜೀರ್ಣೋದ್ಧಾರಕ್ಕಾಗಲಿ ನೀರಾವರಿ ಯೋಜನೆಗಾಗಲಿ ಹತ್ತು ವರ್ಷಗಳ ಹಿಂದೆ ಸರ್ಕಾರದವರು ಮಲೆನಾಡಿನಲ್ಲಿ ಎಷ್ಟು ಖರ್ಚು ಮಾಡುತ್ತಿದ್ದರು ಎಂಬುದನ್ನು ನೋಡಿದರೆ, ಅದನ್ನು ಇತರ ಜಿಲ್ಲೆಗಳೊಂದಿಗೆ ಹೋಲಿಸಿದರೆ ಬಹಳ ಮಟ್ಟಿಗೆ ಕಡಿಮೆ ಎಂಬುದು ಗೊತ್ತಾಗುತ್ತದೆ. ಈಗಲೂ ಖರ್ಚು ಮಾಡುತ್ತಿರುವ ಹಣ ಕಡಮೆ. ಉದಾಹರಣೆಗೆ ಬೆಳವಾಡಿ ಕೆರೆಯನ್ನು ತೆಗೆದುಕೊಳ್ಳಬಹುದು. ಇಂಥ ನೂರಾರು ಸಣ್ಣ ಕೆರೆಗಳು ಒಡೆದು ಹೋಗಿ ರೈತರಿಗೆ ತುಂಬ ನಷ್ಟವಾಗಿರುವ ವಿಚಾರ ಪತ್ರಿಕೆಗಳಲ್ಲೂ ಮತ್ತು ಈ ಸಭೆಯಲ್ಲೂ ಪ್ರಸ್ತಾಪ ಮಾಡಲ್ಪಟ್ಟಿದೆ. ಹಾಗೆ ಒಡೆದು ಹೋಗಿರುವ ಕೆರೆಗಳ ಜೀರ್ಣೋದ್ಧಾರ, ಏರಿ ಮತ್ತು ಕೋಡಿಗಳನ್ನು ರಿಪೇರಿ ಮಾಡುವ ಕೆಲಸ ಬಹಳವಾಗಿ ನಡೆದಿಲ್ಲ, ಅನೇಕವಾಗಿ ನಿಂತು ಹೋಗಿವೆ ಎಂಬುದನ್ನು ಗಮನಿಸಿ ಅದಕ್ಕೆ ಹೆಚ್ಚು ಹಣವನ್ನು ಮಲೆನಾಡಿಗೆ ಒದಗಿಸುವುದು ಆದ್ಯ ಕರ್ತವ್ಯವಾಗಿದೆ. ಇದನ್ನು ಈ ಮಾನ್ಯ ಸಭೆಯ ಸದಸ್ಯರೆಲ್ಲರೂ ಹೇಳಿದ್ದಾರೆ. ಇದರಂತೆಯೇ ಮಲೆನಾಡಿನ ಅಭಿವೃದ್ಧಿಗೆ ಹೆಚ್ಚು ಹಣ ಕೊಡಬೇಕು. ಭಾರಿ ಕಾಂಗಾರಿ, ನೀರಾವರಿ ಯೋಜನೆಗಳನ್ನು ಕೈಗೊಳ್ಳುವ ವಿಚಾರವನ್ನು ಎಲ್ಲರೂ ಒಪ್ಪುತ್ತಾರೆಂಬುದು ತಿಳಿದಿದೆ. ಆದರೆ ಕೆಲವರಿಗೆ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ; ಇದು ಸರಿಯಲ್ಲ. ದೇಶದ ಹಿತದೃಷ್ಟಿಯಿಂದ, ರಾಷ್ಟ್ರದ ಹಿತದೃಷ್ಟಿಯಿಂದ ಭಾರಿ ನೀರಾವರಿ ಯೋಜನೆಗಳನ್ನು ಕೈಕೊಳ್ಳುವುದು ಎಲ್ಲಾ ಸರ್ಕಾರಗಳ ಕರ್ತವ್ಯವೆಂದು ಹೇಳುತ್ತೇನೆ. ಆದರೆ ಸಣ್ಣ ಸಣ್ಣ ನೀರಾವರಿ ಯೋಜನೆ, ಮೈನರ್ ಅಥವಾ ಮೇಜರ್ ಕೆರೆಗಳ ಕಾಂಗಾರಿ ಮುಂತಾದುವನ್ನು ಉದಾಸೀನ ಮಾಡಬಾರದು. ಅವುಗಳಿಗೂ ಕೂಡ ನೀರಾವರಿ ಯೋಜನೆಗಳಿಗೆ ಮತ್ತು ಭಾರಿ ಕಾಂಗಾರಿಗಳಿಗೆ ಗಮನ ಕೊಡುವ ಹಾಗೆ ಹೆಚ್ಚು ನಿಗಾ ಕೊಡಬೇಕು. ಈ ದಿವಸ ಸರ್ಕಾರದ ನೀತಿ, ಮಂತ್ರಿಮಂಡಲದ ಅಥವಾ ಮಿಕ್ಕ ಅಧಿಕಾರಿಗಳ ಮನೋಭಾವ ದೇಶದ ಉದ್ಧಾರದ ಬಗ್ಗೆ, ದೇಶದಲ್ಲಿರುವ ಕೆರೆ, ನೀರಾವರಿ ಯೋಜನೆ ಮುಂತಾದುವುಗಳ ಉದ್ಧಾರದ ಬಗ್ಗೆ ಹೇಗಿದೆ ಎಂಬುದನ್ನು ಈ ಸಭೆಯವರು ಮೊದಲು ತಿಳಿದುಕೊಳ್ಳಬೇಕೆಂದು ಒತ್ತಿ ಹೇಳಬೇಕಾಗಿದೆ. ಏಕೆಂದರೆ, ಕೆಲವು ಸದಸ್ಯರ ಪ್ರಭಾವದಿಂದಲೋ ಅಥವಾ ಮತ್ಯಾವ ಕಾರಣದಿಂದಲೋ ಕೆಲವು ಕಾಂಗಾರಿಗಳಿಗೆ ಕೆಲವು ಕ್ಷೇತ್ರಗಳಲ್ಲಿ ಅಥವಾ ಜಿಲ್ಲೆಗಳಲ್ಲಿ ಗಮನಕೊಟ್ಟು ಇನ್ನು ಕೆಲವಕ್ಕೆ ನಿಗಾ ಕೊಡುತ್ತಿಲ್ಲ. ಆದರೆ, ಇದರ ಅನರ್ಥ ಇಡೀ ದೇಶಕ್ಕೇ ಉಂಟಾಗುತ್ತದೆ. ಕೆಲವು ಕಾಂಗಾರಿಗಳು ಅರ್ಧಂಬರ್ಧವಾಗಿವೆ. ಈ ದಿವಸ ಮಂತ್ರಿವರ್ಗದವರ ನಿಗಾ ಆ ಕಡೆ ಹೆಚ್ಚಾಗಿದೆಯೆಂದು ಕಂಡರೆ ಒಂದು ತಿಂಗಳಲ್ಲಿ ಅಥವಾ ಕೆಲವಾರು ದಿವಸಗಳಲ್ಲಿ ಆ ಕಾಂಗಾರಿಗಳು ನಡೆಯುತ್ತವೆ. ಅದಕ್ಕೆ ಉದಾಹರಣೆಯಾಗಿ ನೂತನವಾಗಿ ಕಟ್ಟುತ್ತಿರುವ ವಿಧಾನಸಭಾ ಕಟ್ಟಡ ಎಷ್ಟರಮಟ್ಟಿಗೆ ವೇಗವಾಗಿ ಆಗುತ್ತಿದೆ ಎಂಬುದನ್ನು ಈ ಸಮಯದಲ್ಲಿ ಹೇಳುತ್ತೇನೆ. ಮಂತ್ರಿಗಳ ಅಭಿಪ್ರಾಯವನ್ನು ಯಾವ ರೀತಿಯಲ್ಲಿ ಅಧಿ

(ಶ್ರೀ ಜಿ. ಪುಟ್ಟಸ್ವಾಮಿ).

ಕಾರಿಗಳ ತಿಳಿಯುತ್ತಾರೋ ಗೊತ್ತಿಲ್ಲ. ಇದನ್ನು ಸರಿ ಪಡಿಸಲು ಯಾವ ಕೆಲಸಕ್ಕೆ ಹೆಚ್ಚು ನಿಗಾಕೊಡಬೇಕೆಂಬ ವಿಚಾರದಲ್ಲಿ ಮತ್ತು ಮೊದಲು ಯಾವುದಕ್ಕೆ ನಿಗಾ ಕೊಡಬೇಕು, ಆಮೇಲೆ ಯಾವುದಕ್ಕೆ ನಿಗಾ ಕೊಡಬೇಕು ಎಂಬುದಕ್ಕೆ ಮಂತ್ರಿಗಳು ಸರ್ಕ್ಯುಲರ್ ಮೂಲಕ ಅಧಿಕಾರಿಗಳಿಗೆ ತಿಳುವಳಿಕೆ ಕೊಡುತ್ತಾರೆಂದು ನಂಬಿದ್ದೇನೆ. ಚಿಕ್ಕಮಗಳೂರು ಟೌನಿಗೆ ನೀರು ಸರಬರಾಯಿ ವಿಚಾರದಲ್ಲಿ, ಟೌನಿನಲ್ಲಿ ಕುಡಿಯುವ ನೀರಿನ ವಿಚಾರದಲ್ಲಿ ಮತ್ತು ರೈತರ ಜಮೀನು ಸಾಗುವಳಿಗೆ ನೀರು ಸರಬರಾಯಿ ಮಾಡುವ ವಿಚಾರದಲ್ಲಿ ಈ ಹಿಂದೆಯೇ ಮಾನ್ಯ ಮಂತ್ರಿಗಳಲ್ಲೂ ಮತ್ತು ಇಲಾಖಾ ಆಫೀಸರುಗಳಲ್ಲೂ ಮನವಿ ಮಾಡಿದ್ದರೂ, ರೈತವರ್ಗದವರು ಮತ್ತು ಪೌರಸಭೆಯವರು ನಿಯೋಗ ಹೋಗಿದ್ದರೂ ನಿಗಾ ಕೊಟ್ಟಿರುವುದಿಲ್ಲ. ಚಿಕ್ಕಮಗಳೂರು ಹಿರೇ ಕೊಳಲೆಕೆರೆ ಜೀರ್ಣೋದ್ಧಾರ ಮಾಡುವುದಾಗಿ ಭರವಸೆ ಕೊಟ್ಟರೂ, ಈ ರೀತಿ ಭರವಸೆ ಕೊಟ್ಟಿರುವುದು ಕಾಗದದಲ್ಲಿದೆಯೇ ಹೊರತು ಕಾರ್ಯಗತವಾಗಿಲ್ಲ. ಆಡಳಿತದಲ್ಲಿ ಇಲಾಖಾಧಿಕಾರಿಗಳ ಅಶ್ರದ್ಧೆಯಿದೆಯೆಂಬುದಕ್ಕೆ ಇದೊಂದು ಉದಾಹರಣೆ. ನನ್ನ ಒಂದು ಪ್ರಶ್ನೆಗೆ ಉತ್ತರವಾಗಿ ಈಗ ಚಿಕ್ಕಮಗಳೂರು ಟೌನಿನ ನೀರು ಸರಬರಾಯಿ ಕಾಂಗಾರಿಗೆ ಆರು ಲಕ್ಷ ರೂಪಾಯಿಗಳನ್ನು ಕೊಟ್ಟಿದೆ, ಈಗಾಗಲೇ ಪೈಪು ಬರುತ್ತಿದೆ ಎಂದು ಮಂತ್ರಿಗಳು ಅಪ್ಪಣೆ ಮಾಡಿದರು. ಈ ಕೆಲಸದ ಅಂದಾಜವೇ ಬೇರೆ. ಸುಮಾರು ಒಂದು ಲಕ್ಷ 20 ಸಾವಿರ ರೂಪಾಯಿಗಳ ಯೋಜನೆ ಬಗ್ಗೆ ನೀರು ಹೆಚ್ಚಿಸಲು ಎಸ್ಟಿಮೇಟ್ ಮಾಡಿ ಸರ್ಕಾರದಿಂದ ಗ್ರ್ಯಾಂಟು ಮಂಜೂರಾಗಿ ನಾಲ್ಕಾರು ವರ್ಷಗಳಾದರೂ ಪೈಪು ಮಾತ್ರ ಬರುತ್ತಿದೆ. ಕಾಂಗಾರಿಯೇನೂ ನಡೆದಿಲ್ಲ. ಈ ಆರು ಲಕ್ಷ ರೂಪಾಯಿಗಳ ಸಾಲದ ಅಂದಾಜಕ್ಕೂ 1,20,000 ರೂಪಾಯಿಗಳ ಅಂದಾಜಕ್ಕೂ ಸಂಬಂಧವಿಲ್ಲ. ಆರು ಲಕ್ಷ ರೂಪಾಯಿಗಳ ಸಾಲ ಒದಗಿಸುವ ವಿಷಯದಲ್ಲಿ ಸರ್ಕಾರ ಯಾವ ಯೋಜನೆಯನ್ನೂ ಮಂಜೂರು ಮಾಡಿಲ್ಲ. ಈ ದಿವಸ ರಿಕಾರ್ಡು ಕೂಡ ಆಗಿದೆ. ಚಿಕ್ಕಮಗಳೂರು ಟೌನಿನ ಪ್ರಜಾಸಂಖ್ಯೆ 24 ಸಾವಿರ. ಕುಡಿಯುವ ನೀರಿನ ಅನುಕೂಲತೆ ಪ್ರಜಾಸಂಖ್ಯೆಗೆ ತಕ್ಕಷ್ಟಾಗಬೇಕು. ಚಿಕ್ಕಮಗಳೂರು ಹಿರೇಕೊಳಲೆಕೆರೆ ಎರಡು ಉದ್ದೇಶಗಳಿಗೂ ನೀರು ಒದಗಿಸುತ್ತಿರುತ್ತದೆ. ಸಾವಿರಾರು ಎಕರೆ ಸಾಗು ಮಾಡುವ ರೈತರ ಹಿತಕ್ಕೆ ಈ ಕೆರೆಯ ಜೀರ್ಣೋದ್ಧಾರ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ಇದಕ್ಕೆ ಯಾವ ಒಂದು ಯೋಜನೆಯೂ ಸರ್ಕಾರದವರೆಗೆ ಬಂದಿಲ್ಲವೆಂದು ವಿಷಾದದಿಂದ ಸೂಚಿಸುತ್ತೇನೆ. ಈಗಲಾದರೂ ಹಿರೇಕೊಳಲೆ ಕೆರೆಯ ಜೀರ್ಣೋದ್ಧಾರದ ಕೆಲಸ ಮತ್ತು ಕುಡಿಯುವ ನೀರಿನ ಅಭಿವೃದ್ಧಿ ಯೋಜನೆಯನ್ನು ಸರ್ಕಾರದವರು ತೀವ್ರವಾಗಿ ಕೈಕೊಳ್ಳಬೇಕು.

ಈ ಹಿರೇ ಕೊಳಲೆಕೆರೆ ಜೀರ್ಣೋದ್ಧಾರವಾದದ್ದೇ ಆದರೆ ಈ ಎರಡು ಉದ್ದೇಶಗಳೂ ಸಫಲವಾಗಿ ಸಾರ್ವಜನಿಕರಿಗೆ ಅನುಕೂಲವಾಗುವುದರಿಂದ ಕೆರೆ ಜೀರ್ಣೋದ್ಧಾರ ಫಂಡಿನಿಂದ ಕೆಲವು ಭಾಗ ಹಣವನ್ನೂ ಸಹ ಮಂಜೂರು ಮಾಡಿ ಚಿಕ್ಕಮಗಳೂರು ಟೌನ್ ಮುನಿಸಿಪಾಲಿಟಿಗೆ ಮಂಜೂರಾಗಿರುವ ಸಾಲವನ್ನೂ ಸಹ ಜಾಗ್ರತೆಯಾಗಿ ಪಾವತಿ ಮಾಡುವ ಏರ್ಪಾಡು ಮಾಡಿ ಈ ಎರಡು ಕಡೆಯ ಹಣದಿಂದ ಈ ಎರಡು ಉದ್ದೇಶಗಳ ಕಾಂಗಾರಿಯನ್ನು ಕೈಗೊಂಡು ಈ ಕೆರೆಯ ಅಚ್ಚುಕಟ್ಟುದಾರರಿಗೂ ಮತ್ತು ಚಿಕ್ಕಮಗಳೂರು ಟೌನಿನ ಪ್ರಜೆಗಳಿಗೂ ಅನುಕೂಲವಾಗುವಂತೆ ಕೂಡಲೇ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕಾಗಿ ಪ್ರಾರ್ಥಿಸುತ್ತೇನೆ.

ಸಂದರ್ಭವಿಲ್ಲದಿದ್ದರೂ ಇನ್ನೊಂದು ಬಹು ಮುಖ್ಯವಾದ ವಿಚಾರವನ್ನು ಹೇಳದೆ ವಿಧಿಯಿಲ್ಲ. ಸರ್ಕಾರದವರು ಕೋಟ್ಯಂತರ ರೂಪಾಯಿಗಳನ್ನು ಈ ಇಲಾಖೆಯ ಮುಖಾಂತರ ಖರ್ಚು ಮಾಡುತ್ತಿದ್ದಾರೆ. ಆದರೆ ಆಡಳಿತ ದಕ್ಷತೆಯನ್ನು ಹೆಚ್ಚು ಮಾಡುವುದಕ್ಕೆ ತಕ್ಕ ಪ್ರಯತ್ನ ಮಾಡಿಲ್ಲ. ಈ ಇಲಾಖೆಯಲ್ಲಿ ಮುಖ್ಯವಾಗಿ ದಕ್ಷತೆ, ನಿಸ್ಪೃಹತೆ ಇರಬೇಕಾದದ್ದು ಅವಶ್ಯಕ. ನಮ್ಮ ನೆರೆಹೊರೆ ಪ್ರಾಂತದಲ್ಲಿ ನೋಡಿದರೆ ಅಲ್ಲಿ ಈ ಇಲಾಖೆಯ ಅಧಿಕಾರಿಗಳ ಸಂಬಳ ಜಾಸ್ತಿಯಾಗಿದೆ. ಈ ಕಾರಣದಿಂದ ನೆರೆಹೊರೆ ಪ್ರಾಂತ್ಯಗಳು ನಮ್ಮ ಈ ಇಲಾಖೆಯ ಅಧಿಕಾರಿಗಳನ್ನು ಆಕರ್ಷಣೆ ಮಾಡುತ್ತಿವೆ. ಅನೇಕ ಅಧಿಕಾರಿಗಳು ಕೆಲಸ ಬಿಟ್ಟು ಹೋಗುತ್ತಿರುತ್ತಾರೆಂದು ತಿಳಿಯುತ್ತೇನೆ. ಹೀಗಾಗಿ ನಮ್ಮ ಸಂಸ್ಥಾನದಲ್ಲಿ ಈ ಇಲಾಖೆಯಲ್ಲಿ ದಕ್ಷತೆ ಕಡಮೆಯಾಗಿದೆ. ಆದ್ದರಿಂದ, ಕೋಟ್ಯಂತರ ರೂಪಾಯಿಗಳ ಕೆಲಸಗಳನ್ನು ನಾವು ನಡೆಸುತ್ತಾ ಇರಬೇಕಾದರೆ, ಈ ಇಲಾಖೆಯವರಿಗೂ ತಕ್ಕಮಟ್ಟಿಗೆ ಸಂಬಳವನ್ನು ಜಾಸ್ತಿ ಮಾಡುವುದೂ ನಮ್ಮ ಕರ್ತವ್ಯವಾಗಿದೆಯೆಂದು ಹೇಳಿ ಮುಗಿಸುತ್ತೇನೆ.

*ಶ್ರೀ ಕೆ. ಪಟ್ಟಾಭಿರಾಮನ್ (ಕೋಲಾರ).—ಮಾನ್ಯ ಸಭಾಪತಿಗಳೇ, ಈ ಡಿಮ್ಯಾಂಡಿನ ವಿಚಾರ ನಾನು ದೀರ್ಘವಾಗಿ ಮಾತನಾಡಬೇಕೆಂದು ಇಷ್ಟಪಡುವುದಿಲ್ಲ. ಎರಡು ಮೂರು ವಿಷಯಗಳನ್ನು ಮಾತ್ರ ಪ್ರಸ್ತಾಪಮಾಡಿ ಮುಗಿಸುತ್ತೇನೆ.

ಒಂದನೆಯದಾಗಿ, ಈ ದಿನ ಆದ ಚರ್ಚೆಯಿಂದಲೇ ಸ್ವಾಭಾವಿಕವಾಗಿ ದೇಶದಲ್ಲಿ ಆಗುತ್ತಿರತಕ್ಕ ಕೆಲವು ವಿದ್ಯಮಾನಗಳು ಮತ್ತು ಅತ್ಯಂತ ಪ್ರಬಲವಾದ ಕೆಲವು ಪ್ರಶ್ನೆಗಳು ನಮ್ಮ ಮುಂದೆ ಬರುತ್ತವೆ. ಕಾರಣವೇನೆಂದರೆ, ಒಂದಾನೊಂದು ಕಾಲದಲ್ಲಿ ಕೆರೆಗಳನ್ನು ಕಟ್ಟಿದ್ದರು, ಆ ಕೆರೆಗಳ ಅಚ್ಚುಕಟ್ಟನ್ನು ಆಗ ನಿಯಮಿತವಾದ ನೀರಿನ ಪರಿಮಿತಿಯನ್ನು ನೋಡಿಕೊಂಡು, ಇಷ್ಟೇ ಎಕರೆಗಳನ್ನು ಸಾಗುವಳಿ ಮಾಡಬೇಕು ಎಂದು ನಿರ್ಧರಿಸಿದ್ದರು. ಆದರೆ, ಈಚೆಗೆ ಕಾರಣಾಂತರದಿಂದ ಅಚ್ಚುಕಟ್ಟು ಜಾಸ್ತಿಯಾಗುತ್ತಿದೆ. ಆದರೆ, ಅದಕ್ಕೆ ಸರಿಯಾಗಿ ಕೆರೆಯ ನೀರಿನ ಸೌಕರ್ಯ ಹೆಚ್ಚುತ್ತಿಲ್ಲ. ಇದೇ ಹಿಂದೆ ಒಂದು ದೊಡ್ಡ ಪ್ರಶ್ನೆಯಾಗಿ ಗುಂಡಪ್ಪಗೌಡರ ಕಮಿಟಿಯಿಂದಲೂ ಒಂದು ಶಿಫಾರಸ್ಸು ಸರ್ಕಾರದ ಮುಂದೆ ಬಂತು. ಅದರಂತೆ ಸರ್ಕಾರದವರು ಒಂದೊಂದು ಕೆರೆಯ ಕೆಳಗೂ ಎಷ್ಟು ಅಚ್ಚುಕಟ್ಟಿರಬೇಕೆಂದಿದೆಯೋ ಅಷ್ಟೇ ಇದೆಯೇ ಅಥವಾ ಅಚ್ಚುಕಟ್ಟು ಜಾಸ್ತಿಯಾಗಿದ್ದರೆ ಅದಕ್ಕೆ ಸಾಕಾಗುವಷ್ಟು ನೀರನ್ನು ಹೆಚ್ಚಿಸತಕ್ಕ ರೀತಿಯಿದೆಯೇ, ಅಚ್ಚುಕಟ್ಟು ಕಡಮೆಯಾಗಿದ್ದರೆ ಯಾವ ರೀತಿ ನೀರು ಹಾಯುವುದಿಲ್ಲ ಎಂಬುದನ್ನೆಲ್ಲಾ ನೋಡಿ, ಹೆಚ್ಚು ಕಂದಾಯ ತರಾವಾಗಿದ್ದರೆ ಕಡಮೆ ಮಾಡುವುದು, ಕಡಮೆಯಾಗಿದ್ದರೆ ಹೆಚ್ಚುಮಾಡುವುದು, ಈ ಕೆಲಸವನ್ನು ಸರ್ಕಾರದವರು ಆಗಲೇ ತೀರ್ಮಾನ ಮಾಡಬೇಕಾಗಿತ್ತು. ಅನೇಕ ಕಡೆಗಳಲ್ಲಿ, ಅದರಲ್ಲೂ ಮುಖ್ಯವಾಗಿ ನಮ್ಮ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಕಾಣಬರುತ್ತದೆ, ಅಲ್ಲಿ ಹತ್ತಾರು ವರುಷಗಳಿಂದ ತರೀ ಫಸಲು ಪಡೆಯದಿರುವವರು, ಭತ್ತ ಕಾಣದವರು ಇಂದಿಗೂ ತರೀ ಕಂದಾಯವನ್ನು ಕೊಡುತ್ತಿದ್ದಾರೆ. ಇದು ನ್ಯಾಯವಾಗಿ ಕಾಣುವುದಿಲ್ಲ. ಎಷ್ಟೋ ಸಾರಿ ಜಮಾಬಂದಿ ಕಾಲದಲ್ಲಿ ಈ ವಿಷಯಗಳು ಸರ್ಕಾರ

ದವರ ಮುಂದೆ ಬರುತ್ತಿವೆ. ಈ ಕಾರಣದಿಂದ ಅವರ ಸಲಹೆಯಂತೆ ಇಡೀ ಸಂಸ್ಥಾನದಲ್ಲಿ ಈ ಕಾರ್ಯವನ್ನು ಸರ್ಕಾರದವರು ಆರಂಭಿಸಬೇಕು. ಪ್ರತಿಯೊಂದು ಕೆರೆಯ ಅಚ್ಚುಕಟ್ಟನ್ನು ನಿಗದಿಮಾಡಿ, ಶಾಸ್ತ್ರೀಯವಾಗಿ ಅಲ್ಲಿರತಕ್ಕ ನೀರು ಸರಬರಾಯಿಗೆ ಅನುಗುಣವಾಗಿ ಅಚ್ಚುಕಟ್ಟಿದೆಯೇ ನೋಡಬೇಕು. ಹೆಚ್ಚು ಅಚ್ಚುಕಟ್ಟಿದ್ದರೆ ಕಡಮೆ ಮಾಡಬೇಕು, ಮಿಕ್ಕ ಜಮೀನುಗಳಿಗೆ ತರೀ ಕಂದಾಯವನ್ನು ಮನ್ನಾ ಮಾಡಬೇಕು. ಕೆಲವು ಕಡೆ ರೈತರು ತರೀ ಫಸಲಿನ ಅನುಕೂಲತೆ ಪಡೆಯುತ್ತಿದ್ದರೂ ಹಳೆಯ ರೀತಿಯಲ್ಲೇ ಅವರಿಂದ ಕಂದಾಯ ತೆಗೆದುಕೊಳ್ಳುತ್ತಿದ್ದಾರೆ. ಅದನ್ನು ಸರಿಪಡಿಸತಕ್ಕದ್ದೂ ಬಹಳ ಅಗತ್ಯ.

ಸರ್ಕಾರದವರ ಗಮನಕ್ಕೆ ತರಬೇಕಾಗಿರುವುದು ಇನ್ನೊಂದೇನೆಂದರೆ, ನಮ್ಮ ಮಿತ್ರರಾದ ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು ಇದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನೇ ಒತ್ತಾಯ ಮಾಡಬೇಕೆಂದು ನನ್ನ ಉದ್ದೇಶ. ಇದು ಕೋಲಾರ ಡಿಸ್ಟ್ರಿಕ್ಟಿನ ಮಣಿಘಟ್ಟದ ಕೆರೆಯ ವಿಷಯ. ಪಾಲಾರ್ ನದಿಯಿಂದ ಬರುವ ನೀರು ಸೇರಿ ಮಣಿಘಟ್ಟದ ಕೆರೆಯಾಗಿದೆ. ಕೋಲಾರಕ್ಕೆ ಮೇಲಿಂದ ಬರತಕ್ಕ surplus water ನ್ನು ಶೇಖರಿಸಿಟ್ಟುಕೊಂಡು ಕೆರೆಗಳ ನೀರಾವರಿ ಸಹಾಯಕ್ಕೆ ಒಂದು ವ್ಯವಸ್ಥೆಯಾಗುವ ಹಾಗಿದ್ದರೂ ಕೂಡ, ಭೂಗರ್ಭದಲ್ಲಿ ಕೂಡಿರುವ ನೀರಿಗಾಗಿ ಒಂದು ಯೋಜನೆಮಾಡಿ ಸಹಾಯಮಾಡುವ ಪ್ರಯತ್ನ ಅಲ್ಲಿ ನಡೆದಿಲ್ಲ. ಮಣಿಘಟ್ಟದ ಕೆರೆ ಹಾಲಿ ಒಂದು ದೊಡ್ಡ ಕೆರೆಯಾಗಿದೆ. ಆ ಕೆರೆ ಒಡೆದು ಹೋಗಿದ್ದರೂ ಇನ್ನೂ ಆ ರೈತರು ತರೀ ಕಂದಾಯವನ್ನೇ ಕೊಡುತ್ತಿದ್ದಾರೆ. ಅದನ್ನು ಕಟ್ಟಿ ಎಂದು ಹೇಳುತ್ತಿದ್ದರೂ, ಪಾಲಾರ್ ನದಿಯ ನೀರಿನ ಹಂಚಿಕೆಯ ವಿಚಾರದಲ್ಲಿ ಮದ್ರಾಸ್ ಸರ್ಕಾರದವರಿಗೂ ಮೈಸೂರು ಸರ್ಕಾರದವರಿಗೂ ಆಗಿರತಕ್ಕ ಒಪ್ಪಂದಕ್ಕೆ ಇದು ತೊಂದರೆಯಾಗುತ್ತದೆಂದು ಹೇಳುತ್ತಿದ್ದಾರೆ. ನಾನೇಕೆ ಇದನ್ನು ಹೇಳುತ್ತಿದ್ದೇನೆಂದರೆ— ಇದೊಂದು ದೊಡ್ಡ ಪ್ರಶ್ನೆ ; ಈ ದಿವಸದ ಚರ್ಚೆಯಲ್ಲಿ ಕೂಡ ಬಂದಿದೆ. ಸಾಮಾನ್ಯವಾಗಿ ಕೋಲಾರ ಜಿಲ್ಲೆಯಲ್ಲಿರುವ ಮೂರು-ನಾಲ್ಕು ನದಿಗಳ ವಿಚಾರದಲ್ಲಿ ಈ ರೀತಿ ತೊಂದರೆ ಬಂದಿದೆ. ಅವುಗಳಲ್ಲಿ ಮುಖ್ಯವಾದದ್ದು ಒಂದು ಪೆನ್ನಾರ್, ಇನ್ನೊಂದು ಪಾಲಾರ್. ಪೆನ್ನಾರ್ ನದಿಯ ವಿಚಾರದಲ್ಲಿ ಆಂಧ್ರ ದೇಶದವರು ಅಡ್ಡಿಯಾಗಿದ್ದಾರೆಂದು ಗೊತ್ತಾಗಿದೆ. ಇದಕ್ಕೆ ನನ್ನ ಸಲಹೆಯೇನೆಂದರೆ, ಈ ಎರಡು ನದಿಗಳ ವಿಚಾರದಲ್ಲಿ ಹಿಂದೆ ಏನು ತೀರ್ಮಾನವಾಗಿತ್ತೋ ಅದನ್ನು ಪುನಃ ಪರಿಶೀಲನೆ ಮಾಡುವ ಸಂದರ್ಭ ಬಂದಿದೆ. ಈ ನೀರನ್ನು ಪ್ರಾರಂಭದಲ್ಲೂ, ಮಧ್ಯವರ್ತಿ ಪ್ರದೇಶದಲ್ಲೂ ನಾವು ಉಪಯೋಗಿಸಬಹುದು. ಆದ್ದರಿಂದ ಈ ನೀರಿನ ವಸತಿ ನಮಗೆ ಎಷ್ಟುಮಟ್ಟಿಗೆ ಸಿಕ್ಕಬೇಕೋ ಅಷ್ಟನ್ನು ದೊರಕಿಸಿಕೊಳ್ಳುವುದಕ್ಕೆ ಇದಕ್ಕೆ ಸಂಬಂಧಪಟ್ಟ ಒಪ್ಪಂದವನ್ನು ಪುನಃ ಪರಿಶೀಲಿಸುವುದು ಅಗತ್ಯ ; ಮತ್ತು ಬೇರೆ ಪ್ರಾಂತ್ಯಗಳವರು ಈ ನೀರನ್ನು ಉಪಯೋಗಿಸುವ ಬಗ್ಗೆ ಯಾವುದಾದರೂ ಯೋಜನೆಗಳನ್ನು ಹಾಕಿದ್ದರೆ ಅವರಿಗೆ ಪೂರ್ವಭಾವಿಯಾಗಿ ಎಚ್ಚರಿಕೆ ಕೊಡುವುದೂ ಮುಖ್ಯ. ನಾನು ಆಗಲೇ ಹೇಳಿದಹಾಗೆ ಮಣಿಘಟ್ಟದ ಕೆರೆಯ ಕಾಮಗಾರಿ ಬಹಳ ಮುಖ್ಯವಾದುದು. ಶ್ರೀ ಲಿಂಗಾರೆಡ್ಡಿಯವರು ಬಹಳ ಚೆನ್ನಾಗಿ ಇದರ ಬಗ್ಗೆ ಹೇಳಿದ್ದಾರೆ. ನಮ್ಮ ಹೋಬಳಿಯಲ್ಲಿ ಆ ಪ್ರಾಂತ್ಯ ಬಹಳ ಭೀಕರವಾಗಿ ಕಾಣುತ್ತಿದೆ. ಎದುರಿಗೆ ದೊಡ್ಡ ಕೆರೆಯಂತೆ ಕಾಣುತ್ತಿದೆ. ಒಳಗೆ ತೊಟ್ಟು ನೀರೂ ಇರುವುದಿಲ್ಲ. ಹೆಸರಿಗೆ ಮಣಿಘಟ್ಟದ ಕೆರೆ ದೊಡ್ಡಕೆರೆ. ನೋಡತಕ್ಕ ಜನರಿಗೆ ಎಷ್ಟು ವ್ಯಸನವಾಗುತ್ತದೆ ! ಪೂರ್ವದಲ್ಲಿ ಯಾವರೀತಿಯಿತ್ತೆಂಬ ಬಗ್ಗೆ ಒಂದು ಮಾತು ಹೇಳುವುದಾದರೆ ನಮ್ಮ ಪೂರ್ವಿಕರಿಗೆ ಹಳ್ಳಿಗಳ ಚಿತ್ರ ಒಂದು ಭವ್ಯ ಚಿತ್ರವಾಗಿತ್ತು. ಒಂದೊಂದು ಹಳ್ಳಿಯೂ ಸ್ವಪರಿಪೂರ್ಣತೆಯಿಂದ ಕೂಡಿದ ಗ್ರಾಮವಾಗಿರಬೇಕೆಂದು ಹೇಳಿ ಎಲ್ಲಾ ಸೌಕರ್ಯಗಳನ್ನೂ ಒದಗಿಸಿಕೊಟ್ಟಿದ್ದರು. ಅವರು ಆಹಾರ ಮೊದಲುಗೊಂಡು ಪ್ರತಿಯೊಂದು ವಿಚಾರದಲ್ಲಿಯೂ ಗಾಢವಾದ ಮತ್ತು ಪರಿಣಾಮಕಾರಿಯಾದ ವ್ಯವಸ್ಥೆಯನ್ನು ಮಾಡಿಕೊಂಡು ಬಂದಿರುವುದನ್ನು ಸರ್ಕಾರದವರು ನೋಡಬಹುದು. ಹೀಗಿರುವಾಗ, ಈಗ ಕೋಲಾರ ಜಿಲ್ಲೆಯಿಂದ ಬಂದಂಥ ಸದಸ್ಯರಿಗೆ ನೀವು ದೊಡ್ಡದೊಡ್ಡ ಜಲಾಶಯಗಳ ವಿಚಾರ ಹೇಳಿದರೆ ಕನಸಿನಲ್ಲಿ ಕೇಳಿದ ಹಾಗಾಗುತ್ತದೆ. ಶ್ರೀ ನಾರಾಯಣರೆಡ್ಡಿಯವರು ಇಲ್ಲಿ ಇಷ್ಟು ದಪ್ಪನಾಗಿ ಕಂಡರೂ ಅವರ ಊರನ್ನು ನೋಡಿದರೆ ಎಷ್ಟು ಸಣ್ಣದಾಗಿ ಕಾಣುತ್ತಾರೆ ! ಆದರೂ ಸರ್ಕಾರ ನಮಗೆ ಏನೂ ಉಪಕಾರ ಮಾಡಿಲ್ಲವೆಂದು ಹೇಳುವುದಿಲ್ಲ. ಆದರೆ ಕೋಲಾರ ಜಿಲ್ಲೆಗೆ ದೈವಿಕವಾಗಿ ಬಂದಂಥ ಕೆಲವು ಕಷ್ಟಗಳಿವೆ. ಇಲ್ಲಿ ದೊಡ್ಡದೊಡ್ಡ ಜಲಾಶಯಗಳಿಂದ ನೀರಾವರಿ ಯೋಜನೆಗಳಾವುದನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಕೋಲಾರ ಜಿಲ್ಲೆಗೆ ಏನಾದರೂ ಉಪಕಾರ ಮಾಡಬೇಕಾದರೆ, ಅದು ಏನಿದ್ದರೂ ವಿಶಾಲದೃಷ್ಟಿಯಿಂದ ನೋಡಿ ಕ್ಷಾಮಕ್ಕೆ ಸಹಾಯಕವಾಗುವ ರೀತಿಯಲ್ಲಿ ಅಲ್ಲಿರುವ ಸಣ್ಣಸಣ್ಣ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದು. ಇದನ್ನು ಮುಖ್ಯವಾಗಿ ನೀವು ಮಾಡದೆ ಇದ್ದರೆ ನಮ್ಮ ಕೋಲಾರ ಜಿಲ್ಲೆಗೆ ಏನನ್ನೂ ಮಾಡಿದಂತಾಗುವುದಿಲ್ಲ. ಇದಕ್ಕಿಂತ ಹೆಚ್ಚಿನ ಸಹಾಯ ನೀವು ಏನೂ ಮಾಡುವಂತಹುದಿಲ್ಲ. Kolar has got the largest number of tanks ಎಂಬ ಹೆಮ್ಮೆ ನಾನು ಪಡೆದಿದ್ದೇನೆ, we have the largest number of unrestored tanks ಎಂಬ ಹೆಮ್ಮೆಯೂ ನನ್ನ ಪಾಲಿಗೇ ಬರುವುದಾಗಿದೆ.

ಹಿಂದೆ, ಕ್ಷಾಮ ಕಾಲದಲ್ಲಿ ಕೆರೆಗಳಿಗೆ ಸಂಬಂಧಪಟ್ಟ ಹಾಗೆ ನಿಮ್ಮ ಅಧಿಕಾರಿಗಳು ಮಾಡಿರತಕ್ಕ ಸ್ತುತ್ಯವಾದ ಕಾರ್ಯವನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಕೇಂದ್ರ ಸರ್ಕಾರದಿಂದ ಬಂದಂಥ ಲಕ್ಷಾಂತರ ರೂಪಾಯಿಗಳನ್ನು ನಮ್ಮ ಕೆರೆಗಳ ದುರಸ್ತಿಗೆ ಮಂಜೂರುಮಾಡಿ ಶಾಶ್ವತವಾದ ರೀತಿಯಲ್ಲಿ ಸಹಾಯಕವಾಗತಕ್ಕ ವ್ಯವಸ್ಥೆಯನ್ನು ಅಧಿಕಾರಿಗಳು ಮಾಡಿದ್ದಾರೆ. ಇದು ಸ್ತೋತ್ರಾರ್ಹ. ಇದಕ್ಕಾಗಿ ಕೋಲಾರ ಜಿಲ್ಲೆಯ ಪರವಾಗಿ ನಾನು ತಮ್ಮನ್ನು ವಂದಿಸುತ್ತೇನೆ. ಆದರೆ ಇಷ್ಟಕ್ಕೇ ನಿಲ್ಲಿಸಿದರೆ ಸಾಲದು. ಈಗ ಯಾವ ರೀತಿ ಹೂಳು ತೆಗೆಯಿಸುವುದು ಮುಂತಾದ ಕಾಮಗಾರಿಗಳನ್ನು ನಡೆಸಿ ಇತರ ಡಿಸ್ಟ್ರಿಕ್ಟ್‌ಗಳಿಗೆ ಮಾರ್ಗದರ್ಶಕರಾದರೋ ಅದನ್ನೇ ಮುಂದುವರಿಸಬೇಕು. ಈಗೇನು ಇಂಜಿನಿಯರಿಂಗ್ ಇಲಾಖೆಯವರು ಮಾಡುತ್ತಿದ್ದಾರೆಂದರೆ, ಅವರು ಒಂದುಕಡೆ ಪ್ರಾಯೋಗಿಕವಾಗಿ ಕೆಲಸ ಕೈಗೊಳ್ಳುವುದು, ಅದನ್ನು ಅಲ್ಲಿಗೇ ಬಿಟ್ಟು ಇನ್ನೊಂದು ಕಡೆ ಇನ್ನೊಂದು ಶುರುಮಾಡುವುದು ಹೀಗೆ ಮಾಡುತ್ತಿದ್ದಾರೆ. ಪ್ರಾಯೋಗಿಕವಾಗಿ ಮಾಡುವುದೆಲ್ಲವನ್ನೂ ನಮ್ಮಲ್ಲಿ ಮಾಡಿದ್ದಾರೆ. ಈಚೆಗೆ ಅವರು ಬರುವುದೇ ನಿಂತುಹೋಗಿದೆ. ಈ ರೀತಿ ಅರ್ಥಂಬರ್ಥ ಮಾಡಿ ಬಿಡುವುದು ಸರಿಯಲ್ಲ. ಇಲ್ಲಿ ಚರ್ಚೆಯಲ್ಲಿ ಆಗಾಗ್ಗೆ ಒಂದು ಸಂಶಯದ

(ಶ್ರೀ ಕೆ. ಪಟ್ಟಾಭಿರಾಮನ್.)

ಮಾತು ಕಾಣಬರುತ್ತಿದೆ. ಈ ಬಡ್ಜೆಟೆಲ್ಲಾ ಯಾರಿಗೆ ? ಚಿಕ್ಕಮಗಳೂರು ಡಿಸ್ಟ್ರಿಕ್ಟ್, ಶಿವಮೊಗ್ಗ ಡಿಸ್ಟ್ರಿಕ್ಟ್ ಗಳಲ್ಲಿರುವ ದೊಡ್ಡದೊಡ್ಡ ಜಲಾಶಯಗಳಿಗೆ ಎನ್ನುತ್ತಾರೆ. ಅಂದಮಾತ್ರಕ್ಕೆ ಆ ನೀರು ಕೋಲಾರಕ್ಕೆ ಬರಲಿ ಎಂದು ಯಾರೂ ಹೇಳುವುದಿಲ್ಲ. ಅವರು ನಮ್ಮನ್ನೂ ಸಹ ಎಲ್ಲಿ ಸೇರಿಸಿಕೊಂಡು ಹೇಳಿಬಿಡುತ್ತಾರೋ ಅನ್ನತಕ್ಕ ಭಯ ನನಗುಂಟಾಗಿತ್ತು. ನಾನು ಹಾಗೆ ಅವರು ನಮ್ಮನ್ನು ಸೇರಿಸಿಕೊಳ್ಳದೆ ಇದ್ದರೆ ಸಾಕು ಎಂದು ದೇವರನ್ನು ಪ್ರಾರ್ಥನೆ ಮಾಡುತ್ತಿದ್ದೆ.

6-30 P.M.

ಇನ್ನು ಮೂರನೆಯದಾಗಿ ಈ ಆಡಳಿತ ದೃಷ್ಟಿಯಲ್ಲಿ ಏನು ತೊಂದರೆ ಆಗುತ್ತಿದೆ ಅನ್ನತಕ್ಕ ಬಗ್ಗೆ ನಾನು ಎರಡು ಮಾತುಗಳನ್ನು ಹೇಳಬೇಕಾಗಿದೆ. ಈ ದಿವಸ ಈ ನೀರಾವರಿ ಕಾಮಗಾರಿಗಳ ಕೆಲಸ ಕಾರ್ಯಗಳನ್ನು ರೆವಿನ್ಯೂ ಮತ್ತು ಇಂಜಿನಿಯರಿಂಗ್ ಈ ಎರಡು ಇಲಾಖೆಗಳೂ ಸೇರಿಕೊಂಡು ಮಾಡಬೇಕಾಗಿದೆ. ಈ ದಿವಸ ರೆವಿನ್ಯೂ ಇಲಾಖೆ ಎಲ್ಲಿ ತನ್ನ ಕೆಲಸವನ್ನು ಪ್ರಾರಂಭಿಸುತ್ತದೆಯೋ ಅಲ್ಲಿ ಈ ಇಂಜಿನಿಯರಿಂಗ್ ಇಲಾಖೆ ತನ್ನ ಗಮನವನ್ನು ಕೊನೆಗಾಣಿಸುತ್ತಿದೆ. ಈ ವಿಚಾರವಾಗಿ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ಮಾನ್ಯ ರೆವಿನ್ಯೂ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಜನರು ಯಾವ ಒಂದು ಕೆಲಸ ಮಾಡಬೇಕಾಗಿದ್ದರೂ ಮೊದಲು ಅವರ ಕಣ್ಣಿಗೆ ಬೀಳುವುದು ಈ ರೆವಿನ್ಯೂ ಇಲಾಖೆ—ಹೀಗಾಗಿ ಈ ದಿವಸ ಯಾವುದಾದರೂ ಒಂದು ಹಳ್ಳಿಯಲ್ಲಿ ರೈತನಾಗಿರತಕ್ಕವನಿಗೆ ಏನಾದರೂ ಒಂದು ಕೆರೆ ಕಾಮಗಾರಿ ಕೆಲಸ ಆಗಬೇಕಾಗಿದ್ದರೆ ಆತ ಮೊದಲು ರೆವಿನ್ಯೂ ಅಧಿಕಾರಿಗಳಿಗೆ ಒಂದು ಅರ್ಜಿಹಾಕುತ್ತಾನೆ. ಹಾಗೆ ಆತನು ಕೊಡತಕ್ಕ ಅರ್ಜಿ ಮೊದಲು ಡೆಪ್ಯುಟಿ ಕಮಿಷನರ್‌ಗೆ ಹೋಗುತ್ತದೆ. ಅನಂತರ ಅವರು ಆ ಅರ್ಜಿಯನ್ನು ಇಂಜಿನಿಯರಿಂಗ್ ಇಲಾಖೆಗೆ ರವಾನೆ ಮಾಡುತ್ತಾರೆ. ಹೀಗೆ ರೈತರು ಕೊಡತಕ್ಕ ಅರ್ಜಿಯ ಬಗ್ಗೆ ರೆವಿನ್ಯೂ ಇಲಾಖೆಯವರು ನೋಡತಕ್ಕಂಥ ದೃಷ್ಟಿಯೇ ಒಂದಾಗಿರುತ್ತದೆ, ಆ ಇಂಜಿನಿಯರಿಂಗ್ ಇಲಾಖೆಯವರು ನೋಡತಕ್ಕಂಥ ದೃಷ್ಟಿಯೇ ಒಂದಾಗಿರುತ್ತದೆ. ಈ ಒಂದೊಂದು ಇಲಾಖೆಯ ದೃಷ್ಟಿಯೂ ಒಂದೊಂದು ರೀತಿಯಾಗಿರುತ್ತದೆ. ಇದರ ಪರಿಣಾಮವಾಗಿ ಈ ದಿವಸ ಆ ರೈತರುಗಳಿಗೆಲ್ಲಾ ತುಂಬ ಅನಾನುಕೂಲವಾಗುತ್ತಿದೆ. ರೈತರಿಗೆ ಅನೇಕ ಸಂದರ್ಭಗಳಲ್ಲಿ ಬಹಳ ಕಷ್ಟನಷ್ಟಗಳೂ ಕೂಡ ಉಂಟಾಗಿರುತ್ತವೆ. ನಾವೀಗ ಇಂಥ ಕಷ್ಟದ ದಿವಸಗಳನ್ನು ನೋಡುತ್ತಿದ್ದೇವೆ. ಹೀಗೆ ಎಲ್ಲೆಲ್ಲ ಎರಡು ಇಲಾಖೆಗಳು ಒಂದು ಕೆಲಸವನ್ನು ಒಂದುಗೂಡಿ ಮಾಡಬೇಕಾಗಿರುತ್ತದೆಯೋ ಅಂಥ ಸಂದರ್ಭಗಳಲ್ಲಿ ಈ ಎರಡು ಇಲಾಖೆಗಳೂ ಒಂದು ಒಗ್ಗಟ್ಟಿನಿಂದ ಕೆಲಸಮಾಡಬೇಕಾದದ್ದು ತೀರ ಆವಶ್ಯಕ. ಇದಕ್ಕಾಗಿ ತಾವು ಈಗ ಇರತಕ್ಕಂಥ ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡತಕ್ಕದ್ದು ತೀರ ಅವಶ್ಯಕವೆಂದು ನನಗೆ ಕಾಣುತ್ತದೆ. ಈ ದಿವಸ ಜಾರಿಯಲ್ಲಿರತಕ್ಕ ಲ್ಯಾಂಡ್ ರೆವಿನ್ಯೂ ಕೋಡಿನ ಪ್ರಕಾರ ಕೆಲಸ ಕಾರ್ಯಗಳು ಬೇಗ ಆಗುವುದಕ್ಕೆ ಸಾಧ್ಯವೇ ಇಲ್ಲ. ಕೆಲಕೆಲವು ಸಂದರ್ಭಗಳಲ್ಲಿ ಸರ್ಕಾರದವರು ಅತಿ ತ್ವರಿತವಾಗಿ ಕೆಲವು ಸರ್ಕಾರಿ ಆಜ್ಞೆಗಳನ್ನು ಹೊರಡಿಸಬೇಕಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ರೈತರಿಗೆ ತಮ್ಮ ಬೆಳೆಗಳೆಲ್ಲಾ ಇನ್ನೇನು ಸ್ವಲ್ಪದರಲ್ಲಿ ಒಣಗಿಹೋಗುವುದರಲ್ಲಿದೆ ಅನ್ನುವಾಗ, ಅವರಿಗೆ ಇನ್ನೂ ಒಂದೆರಡು ಹದ ನೀರು ಬೇಕಾಗಿರುತ್ತೆಂದು ಕಂಡುಬಂದ ಸಂದರ್ಭಗಳಲ್ಲಿ ಅವರು ಸರ್ಕಾರಕ್ಕೆ ಒಂದು ಅರ್ಜಿ ಬರೆದುಕೊಂಡು ಸರ್ಕಾರದವರು ಜಾಗ್ರತೆ ಒಂದು ಆಜ್ಞೆಯನ್ನು ಹೊರಡಿಸಿ ಅವರಿಗೆ ಒಂದೆರಡು ಹದ ನೀರು ಕೊಡುವಂತೆ ಮಾಡಬೇಕೆಂದು ಕೇಳಿದರೆ ಅದಕ್ಕೆ ಸರ್ಕಾರದವರು ತಕ್ಷಣ ಒಂದು ಆಜ್ಞೆಯನ್ನು ಹೊರಡಿಸಲೇಬೇಕಾಗಿರುತ್ತದೆ. ಆದರೆ ಈ ದಿವಸ ಹಾಗೆ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲದಿರುವುದರಿಂದ ಆ ಅರ್ಜಿಯನ್ನು ರೆವಿನ್ಯೂ ಇಲಾಖೆಯವರು ಇಂಜಿನಿಯರಿಂಗ್ ಇಲಾಖೆಯವರಿಗೆ ಹಾಕಿಬಿಡುತ್ತಾರೆ. ಅನಂತರ ಆ ಇಂಜಿನಿಯರಿಂಗ್ ಇಲಾಖೆಯವರು ಸ್ಥಳಕ್ಕೆ ಬಂದು ಅದನ್ನೆಲ್ಲಾ ನೋಡಬೇಕು, ಅನಂತರ ಅವರು ಆ ಬಗ್ಗೆ ತಮ್ಮ ಅಭಿಪ್ರಾಯವನ್ನು ಸೂಚಿಸಿದನಂತರ ಅದರ ಮುಂದಿನ ನಡವಳಿಕೆಗಳು ಪ್ರಾರಂಭವಾಗುತ್ತವೆ. ಹೀಗೆಲ್ಲಾ ಆಗಬೇಕಾದರೆ ಆ ಕೆಲಸಗಳು ಆಗುವುದರಲ್ಲಿ ನಿಧಾನವಾಗತಕ್ಕದ್ದು ಸ್ವಾಭಾವಿಕವಾಗಿಯೇ ಇರುತ್ತದೆ. ಇದರಿಂದ ರೈತರಿಗೆ ಕೇವಲ ಒಂದೆರಡು ಹದ ನೀರು ದೊರೆಯದಂತಾಗಿ ಆಗುತ್ತಿದ್ದಂಥ 100-200 ಪಲ್ಲ ದವಸ ಕೈಗೆಸಿಕ್ಕದೆ ಅವರಿಗೆ ಲುಕ್ಸಾನಾಗಿಯೇ ಆಗುತ್ತದೆ. ಹೀಗೆ ಒಂದು ಇಲಾಖೆ ಒಂದು ರೀತಿ ಅಭಿಪ್ರಾಯಪಟ್ಟರೆ, ಇನ್ನೊಂದು ಇಲಾಖೆ ಇನ್ನೊಂದು ರೀತಿಯಾಗಿ ಅಭಿಪ್ರಾಯಪಟ್ಟಾಗ ಈ ಕೆಲಸಕಾರ್ಯಗಳೆಲ್ಲಾ ಬೇಗ ಆಗ ಬೇಕೆಂದರೆ ಅದು ಹೇಗೆ ಸಾಧ್ಯವಾಗುತ್ತದೆ? ಹೀಗೆ ಎರಡು ಇಲಾಖೆಗಳ ಅಭಿಪ್ರಾಯಗಳೂ ದ್ವಿಗುಣವಾಗಿ ರೈತರಿಗೆ ತುಂಬ ಲುಕ್ಸಾನಾಗುತ್ತಿದೆ. ಕೋಲಾರ ಜಿಲ್ಲೆಯಲ್ಲಿ ಇಂಥ ಒಂದು ನಿದರ್ಶನ ನನ್ನ ಕಣ್ಣು ಎದುರಿನಲ್ಲೇ ನಡೆದಿದೆ. ಈ ಎಲ್ಲಾ ಕಾರಣಗಳಿಂದಲೂ ಈ ಇಲಾಖೆಗಳ ಆಡಳಿತ ದೃಷ್ಟಿಯನ್ನು ಆದಷ್ಟು ಬೇಗ ಕುದುರಿಸುವುದೂ ಮತ್ತು ಅವಶ್ಯಕವಾದಂಥ ತಿದ್ದುಪಡಿಗಳನ್ನು ಈಗ ಇರತಕ್ಕ ಕಾನೂನುಗಳಿಗೆ ಮಾಡತಕ್ಕದ್ದೂ ಬಹಳ ಅಗತ್ಯವೆಂದು ಹೇಳಲಿಚ್ಛಿಸುತ್ತೇನೆ. ಈ ಸಂಬಂಧವಾಗಿ ಅನೇಕ ರೀತಿಯ ಅನಾನುಕೂಲಗಳು ರೈತರಿಗೆ ಆಗುತ್ತಿರುವುದರ ಬಗ್ಗೆ ಈಗಾಗಲೆ ನನ್ನ ಮಾನ್ಯ ಮಿತ್ರರಾದಂಥ ಶ್ರೀ ಬಿ. ವಿ. ನಾರಾಯಣರೆಡ್ಡಿಯವರು ಅವರದೇ ಆದಂಥ ಒಂದು ಶೈಲಿಯಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅದೆಲ್ಲವನ್ನೂ ನಾನೂ ಸಹ ಅಕ್ಷರಶಃ ಒಪ್ಪುತ್ತೇನೆ. ನನ್ನ ಆಶಯವೂ ಕೂಡ ಹಾಗೆಯೇ ಇದೆ.

ಇನ್ನು ನಮ್ಮ ಕೋಲಾರ ಜಿಲ್ಲೆಯಲ್ಲಿ ಪಾಲಾರ್ ಮತ್ತು ಪೆನ್ನಾರ್ ಎಂಬುದಾಗಿ ಎರಡು ನದಿಗಳಿವೆ. ಈ ಪೈಕಿ ಪಾಲಾರ್ ನದಿಯಲ್ಲಿ ಭೂಗರ್ಭದಲ್ಲಿ ಬರತಕ್ಕಂಥ ಜಲವಸತಿ ಬಹಳ ಚೆನ್ನಾಗಿದೆ. ಇದರಿಂದ ಒದಗಬಹುದಾದ ನೀರಿನ ಸೌಕರ್ಯವನ್ನು ಸರ್ಕಾರದವರು ಸದುಪಯೋಗಪಡಿಸಿಕೊಳ್ಳಬೇಕಾದದ್ದು ತುಂಬ ಅವಶ್ಯಕವಾದದ್ದು. ಆದರೆ ಈ ಸಂಬಂಧವಾಗಿ ನಾವೇನಾದರೂ ಇಲ್ಲಿಯವರೆಗೆ ಅಂಥಾ ಪ್ರಯತ್ನಗಳನ್ನೇನಾದರೂ ನಡೆಸಿರುತ್ತೇವೆಯೋ ಎಂದು ನೋಡಿದರೆ ಯಾವುದೂ ನನಗೆ ಕಂಡುಬರುತ್ತಿಲ್ಲ. ಈ ನದಿಗಳು ಮದ್ರಾಸ್ ಪ್ರಾವಿನ್ಸಿನಲ್ಲಿ ಕೇವಲ 30-40 ಮೈಲಿಗಳು ಮಾತ್ರ ಹರಿಯುತ್ತಿದ್ದಾಗ್ಯೂ ಅವರು ಈ ನದಿಗಳಿಂದ ಬಹಳ ಅನುಕೂಲವನ್ನು ಪಡೆಯುತ್ತಿದ್ದಾರೆ. ಆದರೆ ನಾವು ಯಾವ ಒಂದು ಪ್ರಯೋಜನವನ್ನೂ ಸಹ ಈ ನದಿಗಳಿಂದ ಪಡೆಯಲು ಪ್ರಯತ್ನವನ್ನು ಇಲ್ಲಿಯವರೆಗೂ ಮಾಡಿಲ್ಲ. ಈ ನದಿಗಳು ನಮ್ಮ ದೇಶದಲ್ಲಿ ಹುಟ್ಟಿ, ಬಹುಭಾಗ ನಮ್ಮ ದೇಶದಲ್ಲೇ

ಹರಿಯುತ್ತಿದ್ದಾಗ್ಯೂ ನಾವು ಇವುಗಳಿಂದ ಪ್ರಯೋಜನ ಪಡೆದು ಕೊಳ್ಳದೆ ಇರುವುದು ನಮ್ಮ ಅಶ್ರದ್ಧೆಯೋ ಅಥವಾ ನಮ್ಮ ದುರಾದೃಷ್ಟವೋ ಅದು ನನಗೆ ಗೊತ್ತಾಗುತ್ತಿಲ್ಲ. ತಮಗೆ ಈ ನದಿಗಳಿಂದ ಯಾವ ಪ್ರಯೋಜನವನ್ನು ಹೊಂದುವುದಕ್ಕೂ ಸಾಧ್ಯವಾಗದಿದ್ದರೂ ಕೊನೆಗೆ ಆ ಕೋಲಾರ ಜಿಲ್ಲೆಗೆ ಕುಡಿಯುವ ನೀರಿನ ವ್ಯವಸ್ಥೆಯನ್ನಾದರೂ ತಾವು ಮಾಡಲೇ ಬೇಕಾಗಿದೆ. ಆ ಕೋಲಾರ ಜಿಲ್ಲೆಗೆ ಈ ಕುಡಿಯುವ ನೀರಿನ ವ್ಯವಸ್ಥೆಮಾಡಲು ಇದನ್ನು ಬಿಟ್ಟರೆ ಬೇರೊಂದು ಅನುಕೂಲತೆಯಿರುವುದಿಲ್ಲ. ಈ ಸಂದರ್ಭದಲ್ಲಿ ನಾನು ಈ ಪಾಲಾರ್ ನದಿಯ ವಿಚಾರದಲ್ಲಿ ಎರಡು ಮಾತುಗಳನ್ನು ಲಂಬಿಸಿಹೇಳಿದರೆ ಅದೇನೂ ಅಷ್ಟು ಅಪ್ರಕೃತವಾಗಲಾರದೆಂದು ಭಾವಿಸಿದ್ದೇನೆ. ನಾನೂ ಮತ್ತು ಇನ್ನೂ ಕೆಲವು ನಮ್ಮ ಮಾನ್ಯ ಸ್ನೇಹಿತರುಗಳೂ ಮತ್ತು ಶ್ರೀಮಾನ್ ಟಿ. ಚನ್ನಯ್ಯನವರೂ ಎಲ್ಲರೂ ಕೂಡ ಕೋಲಾರ ತಾಲ್ಲೂಕಿನ ವೇಮಗಲ್ ಬಳಿ ಹೋಗಿ ಪರೀಕ್ಷಾರ್ಥವಾಗಿ ಈ ನದಿಯ ಭೂಗರ್ಭದಲ್ಲಿರತಕ್ಕಂಥ ಜಲಾಂಶವನ್ನು ಪರೀಕ್ಷೆ ಮಾಡಿದ್ದೇವೆ. ಆ ಕಾಲದಲ್ಲಿ ಕೆರೆಗಳೆಲ್ಲಾ ಬತ್ತಿ ಹೋಗಿದ್ದವು ಬಾವಿಗಳೆಲ್ಲಾ ಒಣಗಿಹೋಗಿದ್ದವು. ಅಂಥ ಕಾಲದಲ್ಲಿ ಸಹ ಈ ನದಿಯಲ್ಲಿ ಮೇಲೆ ನೀರು ಹರಿಯುತ್ತಿರುವುದು ಕಾಣಿಸದೆ ಇದ್ದಾಗ್ಯೂ ನಾವು ಪ್ರಾಯೋಗಿಕವಾಗಿ ಹಳ್ಳದ ಮಟ್ಟದಲ್ಲಿ 8-10 ಅಡಿ ಮರಳನ್ನು ತೋಡಿಸಿದೆವು. ಆಗ ಅದರ ತಳದಿಂದ ನೀರು ಯಥೇಚ್ಛವಾಗಿ ಬಂದುಬಿಟ್ಟಿತು. ಆ ನೀರನ್ನು ತಡೆಗಟ್ಟುವುದಕ್ಕೇ ಸಾಧ್ಯವಾಗಲಿಲ್ಲ. ಅಲ್ಲಿ ಕೆಲಸ ಮಾಡುತ್ತಿದ್ದಂಥ ಜನರು ಮೇಲಕ್ಕೆ ತಮ್ಮ ಸಾಮಾನುಗಳನ್ನು ಎತ್ತಿಕೊಂಡು ಬರುವುದಕ್ಕೇ ಬಹಳ ಕಷ್ಟವಾಯಿತು. ಈ ವಿಚಾರಗಳೆಲ್ಲಾ ಶ್ರೀಮಾನ್ ಟಿ. ಚನ್ನಯ್ಯನವರಿಗೂ ಗೊತ್ತಿರತಕ್ಕವಾಗಿವೆ. ಹೀಗೆ ಆ ದಿವಸ ಕೆರೆ-ಬಾವಿಗಳೆಲ್ಲಾ ಬತ್ತಿಹೋಗಿ ಆ ನದಿ ಒಣಗಿದ್ದಂತೆ ಕಂಡು ಬರುತ್ತಿದ್ದಂಥ ಕಾಲದಲ್ಲೇ ಆ ನದಿಯ ಒಳಗಡೆ ಅಷ್ಟೊಂದು ಜಲಾಧಾರವಿದ್ದದ್ದು ಕಂಡು ಬಂದಿತು. ಹೀಗೆಲ್ಲಾ ಅಲ್ಲಿ ನೀರಿನ ಅನುಕೂಲತೆಯಿದ್ದಾಗ್ಯೂ ಸರ್ಕಾರದವರು ಯಾವ ಒಂದು ಪ್ರಯತ್ನವನ್ನೂ ಮಾಡದೆ ಇರುವುದರಿಂದ ಜನರ ಬಗ್ಗೆ ಸರ್ಕಾರದವರ ಮನೋಭಾವ ಯಾವರೀತಿಯಾಗಿರುತ್ತದೆ ಅನ್ನುವುದನ್ನು ಗ್ರಹಿಸುವುದು ಕಷ್ಟವಲ್ಲ. ಆದರೆ ಜನರಲ್ಲಿ ಇಂಥ ಒಂದು ನಿರುತ್ಸಾಹ ಭಾವನೆ ಹುಟ್ಟುವುದಕ್ಕೆ ಸರ್ಕಾರದವರು ಖಂಡಿತ ಅವಕಾಶ ಕೊಡಬಾರದು. ಈ ನದಿಯಿಂದ ಕೋಲಾರ ಟೌನಿಗೆ ನೀರು ಸರಬರಾಯಿ ಮಾಡುವುದಕ್ಕೆ ತುಂಬ ಅನುಕೂಲವಾಗಿದೆ. ಅಲ್ಲಿಗೆ ಈ ನೀರನ್ನು ಒದಗಿಸಲು ಇದಕ್ಕಿಂತ ಉತ್ತಮವಾದ ಸೌಕರ್ಯವಿರುವ ಪ್ರದೇಶ ಮತ್ತೊಂದು ಇಲ್ಲ. ಈಗ ತಾನೆ ನಮ್ಮ ಪ್ರತಿಪಕ್ಷದ ನಾಯಕರಾದಂಥ ಶ್ರೀಮಾನ್ ಮಹಮ್ಮದ್ ಇಮಾಂರವರು ನಮ್ಮ ಮೈಸೂರು ಇಂಜಿನಿಯರ್‌ಗಳಷ್ಟು ದಕ್ಷರಾದಂಥ ಇಂಜಿನಿಯರುಗಳು ಮತ್ತೆ ಎಲ್ಲಿಯೂ ಇರುವುದಿಲ್ಲ ಎಂದು ಒಂದು ಸವಾಲನ್ನೇ ಹಾಕಿದ್ದಾರೆ. ಈಗ ಸರ್ಕಾರದವರು ಹಾಗೆ ಅವರು ಹಾಕಿರತಕ್ಕಂಥ ಸವಾಲನ್ನು ಸಾರ್ಥಕಪಡಿಸಿಕೊಳ್ಳಬೇಕಾಗಿದೆ. ಹೀಗೆ ಸಾರ್ಥಕಪಡಿಸಿಕೊಂಡು ಆ ಕೋಲಾರ ಟೌನಿಗೆ ಈ ನದಿಯಿಂದ ಕುಡಿಯುವ ನೀರಿನ ಸೌಕರ್ಯವನ್ನೊದಗಿಸಿ ಕೊಡಬೇಕೆಂದು ಅಧ್ಯಕ್ಷರ ಮುಖೇನ ಸರ್ಕಾರದವರನ್ನು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಆದರೆ ನಾನು ಸರ್ಕಾರದವರಿಗೆ ಕೋಲಾರ ಟೌನಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡತಕ್ಕ ಮನಸ್ಸಿಲ್ಲವೆಂದೇನೂ ಹೇಳುತ್ತಿಲ್ಲ. ಆದರೆ ನಮ್ಮ ಕೋಲಾರ ಜಿಲ್ಲೆಯು ಕ್ಷಾಮಪೀಡಿತ ಪ್ರದೇಶವಾಗಿರುವುದರಿಂದ ಸರ್ಕಾರದವರು ಪಾಲಾರ್ ಮತ್ತು ಪೆನ್ನಾರ್ ನದಿಗಳ ಬಗ್ಗೆ ಅನ್ಯ ಪ್ರಾಂತ್ಯ ಸರ್ಕಾರಗಳೊಡನೆ ಏನೊಂದು ಒಪ್ಪಂದವನ್ನು ಮಾಡಿಕೊಂಡಿದ್ದಾರೋ ಅದು ಆಗಿ ಈಗಾಗಲೇ ಬಹಳ ದಿವಸಗಳಾಗಿರುವುದರಿಂದ ಅದನ್ನು ಪುನಃಪರಿಶೀಲನೆ ಮಾಡತಕ್ಕ ಬಗ್ಗೆ ತೀರ ಅಗತ್ಯವಿದೆಯೆಂದು ನಾನು ಇಲ್ಲಿಗೆ ಎರಡು ಮೂರಾವರ್ತಿ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಅದನ್ನೀಗ ತಾವು ಮಾಡಬೇಕಾಗಿದೆ. ಇದಕ್ಕೆ ಈಗಲಾದರೂ ಸರ್ಕಾರದವರು ತೀವ್ರ ಗಮನಕೊಟ್ಟು ಆ ಕ್ಷಾಮ ಪೀಡಿತರ ಜಿಲ್ಲೆಗೆ ಈ ನದಿಗಳಿಂದ ಏನೇನು ಉಪಯೋಗ ಲಭಿಸಬಹುದೋ ಅದೆಲ್ಲವನ್ನೂ ಹೊಂದುವುದಕ್ಕೆ ಕೂಡಲೇ ಕಾರ್ಯಕ್ರಮವನ್ನು ಸರ್ಕಾರದವರು ಕೈಗೊಂಡು ಆ ಪ್ರದೇಶದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಅಧ್ಯಕ್ಷರಾದ ತಮ್ಮ ಮೂಲಕ ನಾನು ಮತ್ತೊಮ್ಮೆ ಸರ್ಕಾರದವರನ್ನು ಪ್ರಾರ್ಥಿಸಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮರಾಮತ್ ಶಾಖೆಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ದಿವಸ 12 ಘಂಟೆಗಳಿಂದಲೂ ನಾವೆಲ್ಲರೂ ಕುಳಿತುಕೊಂಡಿದ್ದೇವೆ. ಈಗಾಗಲೇ ಆರೂವರೆ ಘಂಟೆಯಾಗಿದೆ. ಈ ಮಧ್ಯ ಕಾಲದಲ್ಲಿ ಅನೇಕ ಸದಸ್ಯರುಗಳು ಅನೇಕ ಉಪಯುಕ್ತ ಸಲಹೆಗಳನ್ನು ಈ ಬಾಬಿನ ಪರವಾಗಿ ನೀಡಿದ್ದಾರೆ. ಈ ಡಿಮ್ಯಾಂಡಿನ ಮೇಲೆ ಈ ದಿವಸ ಇಷ್ಟು ಹೊತ್ತು ಇಷ್ಟೊಂದು ಅಗಾಧವಾಗಿ ಚರ್ಚೆ ನಡೆದಿರುವುದನ್ನು ನೋಡಿದರೆ ಮಾನ್ಯ ಸದಸ್ಯರುಗಳಿಗೆಲ್ಲಾ ಈ ನೀರಾವರಿ ಯೋಜನೆಗಳ ಬಗ್ಗೆ ಎಷ್ಟೊಂದು ತೀವ್ರಾಸಕ್ತಿಯಿರುತ್ತದೆ ಅನ್ನುವುದು ಇದರಿಂದಲೇ ವೇದ್ಯವಾಗುತ್ತದೆ. ಮೈಸೂರು ಸರ್ಕಾರದವರು ಈ ದಿವಸವೇ ಅಲ್ಲ, ಬಹಳ ಹಿಂದಿನಿಂದಲೂ ಈ ನೀರಾವರಿ ಯೋಜನೆಯ ಬಗ್ಗೆ ಬಹಳ ತೀವ್ರಾಸಕ್ತಿಯನ್ನು ವಹಿಸುತ್ತಿದ್ದರು ಅನ್ನುವುದು ಸರ್ವರಿಗೂ ತಿಳಿದಂಥ ವಿಚಾರವೇ ಆಗಿದೆ. ಹಾಗೆ ವಹಿಸುತ್ತಿದ್ದುದರ ಪರಿಣಾಮವಾಗಿ ಈ ದಿವಸ ನಮ್ಮ ಸಂಸ್ಥಾನದಲ್ಲಿ ಅನೇಕ ದೊಡ್ಡ ದೊಡ್ಡ ಕೆರೆಗಳೂ, ಅನೇಕ ದೊಡ್ಡ ದೊಡ್ಡ ನೀರಾವರಿ ಯೋಜನೆಗಳೂ ನಿರ್ಮಿತವಾಗಿವೆ. ಈ ಹಿಂದೆ ನಮ್ಮ ಪೂರ್ವಿಕರು ಪ್ರತಿಯೊಂದು ಗ್ರಾಮಕ್ಕೂ ಒಂದೆರಡು ಕೆರೆಳಂತೆ ಕಟ್ಟಿಸುತ್ತಿದ್ದರು. ಅದರ ಪರಿಣಾಮದಿಂದ ಈ ದಿವಸ ನಮ್ಮಲ್ಲಿ ಈ ಕೆರೆಗಳು ಅಧಿಕ ಸಂಖ್ಯೆಯಲ್ಲಿರುವುದಕ್ಕೆ ಅವಕಾಶವಾಗಿದೆ. ಆದರೆ ಈ ದಿವಸ ಈ ಕೆರೆಗಳಲ್ಲಿ ಅನೇಕ ಕೆರೆಗಳು ನಾದುರಸ್ತಾಗಿವೆ. ಈ ಪೈಕಿ ಸುಮಾರು ಶೇಕಡ 15-20 ರಷ್ಟು ಕೆರೆಗಳು ಸಂಪೂಣವಾಗಿ ಹೂತುಹೋಗಿವೆ. ಅವುಗಳಿಂದ ಈ ದಿವರೆ ಏನೂ ಪ್ರಯೋಜನವಾಗತ್ತಿಲ್ಲ. ಇಂಥ ಕೆರೆಗಳನ್ನು ಜೀರ್ಣೋದ್ಧಾರು ಮಾಡುವುದರಿಂದ ಅವುಗಳಿಂದ ಬರಬಹುದಾದಂಥ ಪ್ರತಿಫಲವು ಅಷ್ಟು ಪ್ರಯೋಜನಕಾರಿಯಾಗಿರುವುದಿಲ್ಲ. ಬರತಕ್ಕಂಥ ಲಾಭಕ್ಕಿಂತ ತೆರಬೇಕಾದ ವೆಚ್ಚವೇ ಹೆಚ್ಚಾಗುತ್ತದೆಯೆಂಬ ಅಂಶವನ್ನು ನಾನೀಗ ಮಾನ್ಯ ಸದಸ್ಯರಲ್ಲಿ ಅತಿ ವಿನಯದಿಂದ ಅರಿಕೆ ಮಾಡಿಕೊಳ್ಳಬೇಕಾಗಿದೆ. ಅದರೆ ಇಲ್ಲಿಯವರೆಗೂ ಅನೇಕ ಮಾನ್ಯ ಸದಸ್ಯರು ಅನೇಕ ಉಪಯುಕ್ತ ಸಲಹೆಗಳನ್ನು ಮಾಡಿದ್ದಾರೆ. ಹೀಗೆ ಸಲಹೆಗಳನ್ನು ಅವರು ಸರ್ಕಾರಕ್ಕೆ ಮಾಡುತ್ತಿರುವಾಗ ಅದರ ಜೊತೆಯಲ್ಲೇ ಅವರವರ ತಾಲ್ಲೂಕುಗಳಲ್ಲಿ ಏನೇನು ಕೆಲಸ ಕಾರ್ಯಗಳಾಗಬೇಕಾಗಿದೆ, ಅಲ್ಲಿ ಏನೇನು ಕುಂದು ಕೊರತೆಗಳಿರುತ್ತವೆ ಅನ್ನುವುದನ್ನೂ ಕೂಡ ಈಗ ಸರ್ಕಾ

(ಶ್ರೀ ಕಡಿದಾಳ್ ಮಂಜಪ್ಪ.)

ರವರ ಗಮನಕ್ಕೆ ತಂದಿದ್ದಾರೆ. ಆದರೆ ಇದೇ ಸಂದರ್ಭದಲ್ಲಿ ಕೆಲವು ಮಾನ್ಯ ಸದಸ್ಯರುಗಳು ಅವರವರ ತಾಲ್ಲೂಕಿನಲ್ಲಿ ಆಗಬೇಕಾಗಿದ್ದ ನೀರಾವರಿ ಕಾಮಗಾರಿಗಳ ಬಗ್ಗೆ ಅವುಗಳನ್ನು ಸರ್ಕಾರದವರು ಬೇಗ ಕೈಗೊಳ್ಳಬೇಕಾಗಿದೆ ಅನ್ನತಕ್ಕಂಥ ವಿಚಾರವನ್ನು ಮಂತ್ರಿಗಳ ಗಮನಕ್ಕೆ ತಂದಿದಾಗ್ಲೂ ಸಹ ಅವರು ಆ ಕೆಲಸ ಕಾರ್ಯಗಳನ್ನು ಕೈಗೊಂಡಿಲ್ಲವೆಂಬುದಾಗಿ ಆಕ್ಷೇಪಣೆಗಳನ್ನು ಕೂಡ ಮಾಡಿರುತ್ತಾರೆ. ನಾನು ಈ ವಿಚಾರವಾಗಿ ಎಷ್ಟೋಸಲ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಆ ಕೆಲಸಗಳನ್ನೆಲ್ಲಾ ಬೇಗ ಕೈಗೊಳ್ಳಬೇಕೆಂದು ಒತ್ತಿ ಒತ್ತಿ ಸೂಚನೆಗಳನ್ನು ಕೊಟ್ಟಿದ್ದೇನೆ. ನಮ್ಮ ಸಂಸ್ಥಾನದಲ್ಲಿ ಸುಮಾರು 22 ಸಾವಿರ ಕೆರೆಗಳಿರುತ್ತವೆ. ಅನೇಕ ಮಾನ್ಯ ಸದಸ್ಯರುಗಳು ಅನೇಕ ಸಂದರ್ಭಗಳಲ್ಲಿ ಅನೇಕ ಕೆರೆಗಳ ಬಗ್ಗೆ ನನ್ನಲ್ಲಿ ಪ್ರಸ್ತಾಪ ಮಾಡಿರುತ್ತಾರೆ. ಆದರೆ ಹಾಗೆ ಅವರು ತಿಳಿಸಿರತಕ್ಕಂಥ ಎಲ್ಲಾ ಕೆರೆಗಳ ವಿಚಾರವನ್ನೂ ನಾನು ತಲೆಯಲ್ಲಿಟ್ಟುಕೊಂಡು ಅವರು ಹೇಳಿದ್ದಂಥ ಕೆರೆಗಳ ಪೈಕಿ ಯಾವಯಾವುದು ಎಷ್ಟೆಷ್ಟರ ಮಟ್ಟಿಗೆ ದುರಸ್ತಿಯಾಗಿದೆ ಅಥವಾ ಇಲ್ಲ ಅನ್ನುವುದನ್ನು ಈಗ ಹೇಳುವುದಕ್ಕೆ ಸಾಧ್ಯವಾಗ ವುದಿಲ್ಲ. ಇದು ಬಹಳ ಕಷ್ಟವಾದಂಥ ಕೆಲಸ ಅನ್ನುವುದನ್ನು ನಾನೀಗ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಿಜವಾಗಿಯೂ ರೈತರಿಗೆ ಅನೇಕ ಕೆರೆಗಳ ಕಾಮಗಾರಿ ಆಗಬೇಕಾಗಿದೆ. ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ನಿಜವಾಗಿಯೂ ಮಾನ್ಯ ಸದಸ್ಯರಿಗೆ ಕೆರೆ ಕಾಮಗಾರಿಗಳಾಗಬೇಕೆಂಬ ಆಸೆಯಿದೆ. ನಮಗೂ ಇದೆ. ಆದರೆ ನಾನು ಮೊದಲೇ ಅರಿಕೆಮಾಡಿಕೊಂಡಹಾಗೆ ಎಲ್ಲವನ್ನೂ ಒಂದೆರಡು ವರ್ಷಗಳಲ್ಲಿ ಜೀರ್ಣೋದ್ಧಾರ ಮಾಡುವುದಕ್ಕಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಕೆಲವರು ಪ್ರಭಾವಶಾಲಿಗಳಾದವರು ಬಂದು ಕೇಳಿದರೆ ಅವರ ಪ್ರಾಂತ್ಯಕ್ಕೆ ಹೆಚ್ಚು ಕೆಲಸಗಳನ್ನು ಮಾಡಿಸುತ್ತಾರೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಈ ರೀತಿ ಎಂದಿಗೂ ಮಾಡಬಾರದೆಂದು ನಮ್ಮ ಅಧಿಕಾರಿಗಳಿಗೆ ಸ್ಪಷ್ಟವಾದ ಸೂಚನೆ ಕೊಟ್ಟಿದ್ದೇವೆ. 'ಲಂಪ್‌ಸಮ್' ಗ್ರಾಂಟ್ ಏನಿದೆಯೋ ಅದನ್ನು ಪ್ರತಿ ತಾಲ್ಲೂಕಿಗೂ ಸರಿಸಮನಾಗಿ ಹಂಚುವ ಏರ್ಪಾಡುಮಾಡಬೇಕೆಂದು ಹೇಳಿದ್ದೇವೆ. ಅದರಂತೆ ಈ ವರ್ಷ ಒಂದು ಕಾರ್ಯಕ್ರಮವನ್ನಿಟ್ಟುಕೊಂಡಿದ್ದೇವೆ. ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಿಸುವಾಗ ಅಥವಾ ಜೀರ್ಣೋದ್ಧಾರಮಾಡುವಾಗ ತಾಲ್ಲೂಕುವಾರು ಆಧಾರದಮೇಲೆ ಮಾಡುವುದಕ್ಕಾಗುವುದಿಲ್ಲವೆಂದು ಮಾನ್ಯ ಸದಸ್ಯರಲ್ಲಿ ಅರಿಕೆಮಾಡುತ್ತೇನೆ. ಹೊಸ ಕಾಮಗಾರಿಗಳನ್ನು ಕೈಕೊಳ್ಳುವಾಗ ಮತ್ತು ಜೀರ್ಣೋದ್ಧಾರ ಕೆಲಸಗಳನ್ನು ಕೈಕೊಳ್ಳುವಾಗ 'ಇರಿಗೇಷನ್ ಆಕ್ಟ್'ನಲ್ಲಿರತಕ್ಕ ನಿಬಂಧನೆಗಳ ಪ್ರಕಾರ ನಾವು ನಡೆಯಬೇಕಾಗುತ್ತದೆ. ಹೀಗೆ ನಡೆಯಬೇಕಾದರೆ, ಸ್ವಾಭಾವಿಕವಾಗಿ ನಿಧಾನವಾಗುತ್ತದೆ. ಸಾರ್ವಜನಿಕರ ಹಣವನ್ನು ಖರ್ಚುಮಾಡುವಾಗ ವಿಚಕ್ಷಣೆಯಿಂದ ಮಾಡುವುದು ಅಗತ್ಯ. ಯಾವುದಾದರೂ ಕಾಮಗಾರಿಯನ್ನು ತೆಗೆದುಕೊಂಡರೆ ನಿಜವಾಗಿಯೂ ಅದರಿಂದ ಜನರಿಗೆ ಸಹಾಯವಾಗುತ್ತದೆಯೆ, ಸಾಕಷ್ಟು ನೀರು ಶೇಖರವಾಗುತ್ತದೆಯೆ, ಅದರಿಂದ ಎಷ್ಟು ಎಕರೆಗಳಿಗೆ ನೀರಾವರಿ ಸಹಾಯವನ್ನು ಪಡೆಯಲು ಸಾಧ್ಯವಾಗುತ್ತದೆ ಮುಂತಾದ ಅನೇಕ ವಿಷಯಗಳನ್ನು ಅಧಿಕಾರಿಗಳೂ ಸರ್ಕಾರದವರೂ ಪರ್ಯಾಲೋಚನೆ ಮಾಡಬೇಕು. ಜತೆಗೆ, ವಾಟರ್‌ರೇಟ್ ಮತ್ತು ಕಾಂಟ್ರಿಬ್ಯೂಷನ್ ಸ್ವಲ್ಪ ತಲೆನೋವಿನ ಪ್ರಶ್ನೆ. ಅನೇಕ ಸದಸ್ಯರು ಕಾಂಟ್ರಿಬ್ಯೂಷನ್ ಮತ್ತು ವಾಟರ್‌ರೇಟು ಹಾಕಿರುವುದು ಬಹಳ ಜಾಸ್ತಿ ಎಂದು ಹೇಳಿದ್ದಾರೆ. ಶ್ರೀಮಾನ್ ನಾರಾಯಣರೆಡ್ಡಿಯವರೂ ಬಸಪ್ಪನವರೂ ಇದು ಜಾಸ್ತಿ ಇಷ್ಟು ಹಾಕಬಾರದು ಎಂದು ಹೇಳಿದ್ದಾರೆ. ನೀರಾವರಿಯೋಜನೆಗಳಿಗೆ ಭಾರತ ಸರ್ಕಾರದಿಂದ ಸಾಲವನ್ನು ಪಡೆಯುತ್ತಿದ್ದೇವೆ. ನಾವು ಅವರಿಗೆ ಇದರವೇಲೆ ಶೇಕಡ ನಾಲ್ಕರಷ್ಟು ಬಡ್ಡಿಯನ್ನು ಕೊಡಬೇಕು. ಇದಕ್ಕೆ ನಮಗೆ ಕೊನೆಯಪಕ್ಷ ಶೇಕಡ ಮೂರರಷ್ಟಾದರೂ ಬಡ್ಡಿ ಬರಬೇಕೆಂಬ ಉದ್ದೇಶದಿಂದ return ಇಷ್ಟು ಬರಬೇಕೆಂದು ಸರ್ಕಾರದವರು ವಿಧಾಯಕಮಾಡಿದ್ದಾರೆ. ಇದು ಹೊಸ ನಿಬಂಧನೆಯೇನೂ ಅಲ್ಲ, ಕಳೆದ ಹಲವು ವರ್ಷಗಳಿಂದ ಈ ನಿಬಂಧನೆ ಜಾರಿಯಲ್ಲಿದೆಯೆಂದು ಮನವಿ ಮಾಡಿಕೊಳ್ಳುತ್ತೇನೆ . . . .

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಯಾವಾಗಿನಿಂದ ಇದೆ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಮಂತ್ರಿಯಾಗುವುದಕ್ಕಿಂತ ಮೊದಲೇ ಇತ್ತು. ನಾನು ಹೊಸದಾಗಿ ಇದನ್ನು ಮಾಡಿಲ್ಲ.

ಭಾರತ ಸರ್ಕಾರದಿಂದ ಸಾಲ ತೆಗೆದುಕೊಂಡ ಮೇಲೆ ಅದಕ್ಕೆ ನಾವು ಬಡ್ಡಿ ಕೊಡಬೇಕು. ಶ್ರೀ ನಾರಾಯಣರೆಡ್ಡಿಯವರೂ ಬಸಪ್ಪನವರೂ ಹೇಳಿರುವುದರಲ್ಲಿ ಒಂದು ಮಾತ್ರ ಯೋಚನೆಮಾಡತಕ್ಕ ವಿಚಾರವಿದೆ. ಒಂದು ಕೆರೆ ಅಥವಾ ಜಲಾಶಯ ಒಂದು ಸಾರಿ ಒಡೆದರೆ ವಾಟರ್‌ರೇಟ್ ಕೊಡತಕ್ಕದ್ದು ಅಗತ್ಯ. ಇನ್ನೊಂದುಸಾರಿ ಒಡೆದರೂ ವಾಟರ್‌ರೇಟ್ ಕೊಡಬಹುದು. ಆದರೆ ಮೂರು ನಾಲ್ಕು ಸಾರಿ ಒಡೆದರೆ ಪದೇ ಪದೇ ವಾಟರ್‌ರೇಟ್ ವಸೂಲು ಮಾಡುವುದು ಸೂಕ್ತವೆ ಎಂಬುದನ್ನು ಸರ್ಕಾರ ತೀವ್ರವಾಗಿ ಆಲೋಚನೆಮಾಡಿ ನೋಡಬೇಕಾಗಿದೆ. ಇದರ ಸಂಬಂಧವಾಗಿ ಒಂದು ಸಮಿತಿ ನೇಮಕವಾಗಿದೆ. ಆ ಸಮಿತಿಯವರು ನೀರಿನ ತೆರಿಗೆಯ ವಿಚಾರದಲ್ಲಿ ಕೂಲಂಕಷವಾಗಿ ವಿಮರ್ಶೆಮಾಡಿ ವರದಿಯನ್ನು ಕೊಡಬೇಕೆಂದು ಸೂಚನೆ ಕೊಡಲಾಗಿದೆ. ಜಾಗ್ರತೆಯಾಗಿ, ಒಂದೆರಡು ತಿಂಗಳೊಳಗೆ ಅವರು ವರದಿಯನ್ನು ಸರ್ಕಾರದ ಮುಂದಿಡುತ್ತಾರೆಂದು ನಂಬಿಕೆಯಿದೆ. ಯಾವುದಾದರೂ ಒಂದು ಪರಮಾವಧಿಯನ್ನು ಗೊತ್ತುಮಾಡಿ, ಅದರಮೇಲೆ ಕಂದಾಯ ಅಥವಾ ವಾಟರ್‌ರೇಟ್ ಕೊಡುತ್ತಿದ್ದರೆ ಆ ರೀತಿ ವಾಟರ್‌ರೇಟ್ ಹಾಕಬಾರದೆಂದು ನನ್ನ ಅಭಿಪ್ರಾಯ. ಇದರಂತೆ ಮಾಡುತ್ತಾರೆಂದು ನಂಬಿಕೆಯಿದೆ. ಯಾವ ರೀತಿ ಇರಬೇಕು, ಎಷ್ಟು ಪರಮಾವಧಿ ಕಾಂಟ್ರಿಬ್ಯೂಷನ್ ವಾಟರ್‌ರೇಟ್ ಹಾಕಬಹುದು ಎಂಬ ವಿಚಾರಗಳನ್ನೆಲ್ಲಾ ಪರಿಶೀಲನೆಮಾಡುತ್ತಾರೆ. ವಾಟರ್‌ರೇಟ್ ಮತ್ತು ಕಾಂಟ್ರಿಬ್ಯೂಷನ್ ನಿಗದಿಮಾಡುವಾಗ ಅಗತ್ಯವಾಗಿ ಸರ್ಕಾರಕ್ಕೆ ಬರಬೇಕು. ಸರ್ಕಾರದ ಗಮನಕ್ಕೆ ಬರದೆ ನಿಗದಿಮಾಡುವುದು ಸಾಧ್ಯವಿಲ್ಲ. ಈ ಕಾರಣದಿಂದ ಅಂದಾಜು finalise ಆಗುವುದು ಸ್ವಲ್ಪ ತಡವಾಗುತ್ತದೆಂದು ಅರಿಕೆ.

ಕಾಮಗಾರಿಗಳನ್ನು ತೆಗೆದುಕೊಂಡನಂತರ ಅವುಗಳನ್ನು ಜಾಗ್ರತೆ ಪೂರೈಸುವುದು ಆವಶ್ಯಕ ಎಂದು ಹೇಳಿದರು; ಇದರಲ್ಲಿ ಭಿನ್ನಾಭಿಪ್ರಾಯವೇನೂ ಇಲ್ಲ. ಯಾವುದಾದರೂ ಕಾಮಗಾರಿ ತೆಗೆದುಕೊಂಡರೆ ಅದನ್ನು ಆದಷ್ಟು ಜಾಗ್ರತೆ ಪೂರೈಸುವುದು ಅಗತ್ಯ. ಮುಂದುವರಿದು, ಶ್ರೀ ಇಮಾಂ ಸಾಹೇಬರು ತಮ್ಮ ಕಾಲದಲ್ಲಿ ಮಂಜೂರಾದ ಕೆಲವು

ಕಾಮಗಾರಿಗಳನ್ನು ಮಾಡಲು ಇಷ್ಟು ಕಾಲ ತೆಗೆದು ಕೊಂಡು ನಾವು ಸಿಬ್ಬಂದಿ ಖರ್ಚು ಹೆಚ್ಚಾಗಲು ಅವಕಾಶಮಾಡಿದ್ದೇವೆಂದು ಹೇಳಿದರು. ಈ ವಿಚಾರ ದಲ್ಲಿ ಒಂದೆರಡು ಮಾತು ಹೇಳುವುದು ಸೂಕ್ತ. ತುಂಗಾ, ನುಗು ಮತ್ತು ಭದ್ರಾ ಇವು ದೊಡ್ಡ ಜಲಾಶಯಗಳು. ನುಗು ಜಲಾಶಯದ ಯೋಜನೆ 1946 ನೆಯ ಇಸವಿಯಲ್ಲಿ ಮಂಜೂರಾಯಿತೆಂದು ಕಾಣುತ್ತದೆ. ಆಗ 81 ಲಕ್ಷಕ್ಕೆ ಮಂಜೂರಾಯಿತು. ಅನಂತರ 1949 ರಲ್ಲಿ ಅದೇ 83.5 ಲಕ್ಷಕ್ಕೆ ರಿವೈಸ್ ಆಯಿತು. ಮತ್ತೆ 1954 ರಲ್ಲಿ 99.5 ಲಕ್ಷಕ್ಕೆ ರಿವೈಸ್ ಆಗಿದೆ. ಈಗ ಪುನಃ ರಿವೈಸ್ ಆಗಬೇಕಾಗಿದೆ. ತುಂಗಾ ಅಣೆಕಟ್ಟಿನ ಕಾಮಗಾರಿ 1946 ರಲ್ಲಿ 70 ಲಕ್ಷ ರೂಪಾಯಿಗೆ ಮಂಜೂರಾಗಿತ್ತು. ಅನಂತರ 1953 ರಲ್ಲಿ ರಿವೈಸ್ ಆಗಿದೆ. ಅದು ಈಗ ಪುನಃ ರಿವೈಸ್ ಆಗಬೇಕು.

Sri K. PATTABHIRAMAN.—Sri Imam wants to make out a distinction between administrative sanction and technical sanction. In the absence of technical sanction there is no definiteness. It is liable to changes and abuses. What do you say for that ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಆಮೇಲೆ ಬರುತ್ತೇನೆ. ಭದ್ರಾ ಜಲಾಶಯದ ಕಾಮಗಾರಿ 1946ರಲ್ಲಿ 89 ಲಕ್ಷ ರೂಪಾಯಿಗೆ ಮಂಜೂರಾ ಗಿತ್ತು. ಈಗ ಪುನಃ ರಿವೈಸ್ ಆಗಿದೆ. ಅದನ್ನು ಕೈಗೊಂಡು ಕಾರ್ಯಗತಮಾಡುವುದು ಇಷ್ಟು ದೀರ್ಘ ಕಾಲ ತಡವಾದುದರಿಂದ ಸಿಬ್ಬಂದಿ ಖರ್ಚು ಹೆಚ್ಚಾಗು ವುದಕ್ಕವಕಾಶವಾಯಿತೆಂದು ಹೇಳಿದರು. ಯಾವ ಯಾವುದಕ್ಕೆ 1951ನೆಯ ಇಸವಿಯಿಂದ ಎಷ್ಟೆಷ್ಟು ಖರ್ಚಾಗಿದೆ ಎಂಬುದನ್ನು ಪರಿಶೀಲಿಸಿ ನೋಡಿದರೆ, ಇದರಲ್ಲಿ ನಮ್ಮ ತಪ್ಪೇನೂ ಇಲ್ಲ ಎಂಬುದು ವ್ಯಕ್ತ ವಾಗುತ್ತದೆ. ಭದ್ರಾ ರಿಸರ್ವಾಯರ್‌ಗೆ ಒಟ್ಟು ಅಂದಾಜು ಆಗಿರತಕ್ಕ ಮೊಬಲಗು 1,775 ಲಕ್ಷ ರೂಪಾಯಿಗಳು. 1951 ನೆ ಇಸವಿ ಮಾರ್ಚಿವರೆಗೆ 73.13 ಲಕ್ಷ ರೂಪಾಯಿ ಖರ್ಚಾಗಿತ್ತು, under the go slow programme. 1951-52ನೆ ಇಸವಿ ಯಲ್ಲಿ 19 ಲಕ್ಷ ಗ್ರಾಂಟ್‌ಮಾಡಿದ್ದು 22.54 ಲಕ್ಷ ಖರ್ಚು ಆಯಿತು. 1952-53 ರಲ್ಲಿ 22 ಲಕ್ಷ ಹಣ ಒದಗಿಸಿದ್ದು, ಖರ್ಚಾದುದು 22·15 ಲಕ್ಷ. 1953-54 ರಲ್ಲಿ 52 ಲಕ್ಷ ರೂಪಾಯಿಗಳನ್ನು ಒದಗಿಸಿದ್ದು ಖರ್ಚಾದುದು 55.75 ಲಕ್ಷ ರೂಪಾಯಿಗಳು. 1954-55 ರಲ್ಲಿ ನಾವು ಒದಗಿಸಿದ್ದು 178 ಲಕ್ಷ, ಡಿಸೆಂಬರುವರೆಗೆ ಖರ್ಚಾದುದು 123.25 ಲಕ್ಷ. ಆಮೇಲೆ ತುಂಗಾ ಅಣೆಕಟ್ಟಿನ ಅಂದಾಜ ಮೊಬಲಗು 231.12 ಲಕ್ಷ ರೂಪಾಯಿ. The expenditure up to the end of March 1951 was 52.25 lakhs. In the year 1951-52, the amount allotted for this work was Rs. 20 lakhs ; the expenditure incurred was Rs. 22·19 lakhs. In the year 1952-53, a sum of Rs. 26·5 lakhs had been provided; the expenditure incurred was Rs. 25·39 lakhs. In the year 1953-54, Rs. 32 lakhs had been provided ; a sum of Rs. 21·05 lakhs had been spent. In the year 1954-55 a sum of Rs. 37 lakhs had been allotted for this work ; a sum of Rs. 22·78 lakhs had been spent up to the end of December. In the case of Nugu Reservoir the estimated cost of the project is Rs. 242·4 lakhs. The expenditure up to the end of March 1951 was Rs. 29·02 lakhs. In the year 1951-52 a sum of Rs. 23 lakhs had been provided for this work. The outlay during that year was Rs. 20·95 lakhs. In the year 1952-53 a sum of Rs. 34 lakhs had been provided for this work. The outlay incurred during that year was Rs. 36·08 lakhs. During the year 1953-54 as sum of Rs. 37·5 lakhs had been provided. The outlay during that year was Rs. 38·95 lakhs. In the year 1954-55, the sum provided was Rs. 60 lakhs. The outlay up to the end of December 1954 was Rs. 37·21 lakhs. ಇದನ್ನು ನೋಡಿದರೆ ನಿಧಾನವಾಗಿರುವುದು ಇಮಾಂ ಸಾಹೇ ಬರ ಕಾಲದಲ್ಲೇ ಹೊರತು ನಮ್ಮ ಕಾಲದಲ್ಲಲ್ಲ.

ಶ್ರೀ ಎಸ್. ಶ್ರೀನಿವಾಸಅಯ್ಯಂಗಾರ್.—1946ನೆ ಇಸವಿಯಲ್ಲಿ ಇಮಾಂ ಸಾಹೇಬರು ಮಂತ್ರಿಗಳಾ ಗಿರಲಿಲ್ಲ.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸ ನಗರ).—1947ನೆ ಇಸವಿಯೊಳಗೆ ಎಷ್ಟು ಖರ್ಚು ಮಾಡಿದರು ಎಂಬ information ಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಇದರಲ್ಲಿ 1947ನೆ ಇಸವಿಯಲ್ಲಿ ಎಷ್ಟು ಖರ್ಚಾಗಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದರಲ್ಲಿ ಕೆಲವು ಕಾಮಗಾರಿಗಳನ್ನು 1947 ರಲ್ಲಿ ತೆಗೆದುಕೊಳ್ಳಲಾಯಿತು. ಆಮೇಲೆ ಈ ಭದ್ರ, ತುಂಗ, ನುಗು ಜಲಾಶಯಗಳಲ್ಲದೆ ದೊಡ್ಡ reservoirsಗಳ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳುವುದು ಸೂಕ್ತ. ಪಂಚವಾರ್ಷಿಕ ಯೋಜನೆಯಲ್ಲಿ ಈಗ ನಾನು ಹೇಳಿದ ಮೂರು ನೀರಾವರಿ ಕಾಮಗಾರಿ ಗಳಲ್ಲದೆ ಇನ್ನೂ 32 ಕಾಮಗಾರಿಗಳನ್ನು ಸೇರಿಸ ಲಾಗಿದೆ. ಅವೆಲ್ಲಾ, ಭದ್ರ, ನುಗು, ತುಂಗ ಸೇರಿ, ಒಟ್ಟು 35 ಆಗುತ್ತವೆ. Bhadra Reservoir, Tunga Anicut, Nugu Reservoir, Tuppadahalli, Gadimakunte, Sangenahalli, Extension of Branch Channels of Visvesvaraya Canal area, Uyyanahalli Anicut, Irkasandra, Honnamachanahalli, Nelligudda, Kanva Reservoir, Muthugadur, Parasurampur, Krishnarajasagara and allied works, Dummasandra Ane (Veeravaishnavi Ane), Protective works to Byramangala tank, Keelara Pick-up and improvements, Huluhalla Pick-up and improvements, Markonahalli Right Bank Channel Extension, Ambligola Reservoir,

(ಶ್ರೀ ಕಡಿದಾಳ್ ಮಂಜಪ್ಪ.)

Mangala Tank, Kenchankere, Naranapur Anicut, Kariyala Tank, Improving Pennar-Kumadvati Tank Series, Restoring Srinivasa Sagara, Ane at Tirumane, Jodi Alpahalli Tank, Bolenahalli Anicut, New Tank at Challaghatta, New tank at Belagumba, Left Bank Channel from Sanaba Tank Waste weir Suvarnamukhi Anicut in Kanakapura, Feeder Channel to Navalur tank in Periyapatna Taluk. ಒಟ್ಟು 35 ಕಾಮಗಾರಿಗಳನ್ನು ಈ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿತ್ತು. ಅವುಗಳ ಪೈಕಿ ಮೂರು ಕಾಮಗಾರಿಗಳು ವಿನಾ ಬಾಕಿ ಎಲ್ಲಾ ಕಾಮ ಗಾರಿಗಳನ್ನೂ ಪ್ರಾರಂಭಮಾಡಿದ್ದೇವೆ. ಆ ಪೈಕಿ 15-16 ಮುಗಿದಿವೆ. ಉಳಿದ ಕಾಮಗಾರಿಗಳು ಪಾಂಚ ವಾರ್ಷಿಕಯೋಜನೆ ಅವಧಿಯೊಳಗೆ . . . .

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮಂಗಳ ಸೇರಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ತಿರುಮಣಿ ಅಣೆಕಟ್ಟು ಮಂಗಳ, ಇನ್ನು ಯಾವುದೋ ಒಂದು ಸೇರಿದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮಂಗಳ ಈಗ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಈಗ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಈ ದೊಡ್ಡ ನೀರಾವರಿ ಯೋಜನೆಗಳ ವಿಚಾರದಲ್ಲಿ ಇನ್ನೊಂದು ಮಾತು ಹೇಳಬೇಕಾಗಿದೆ. ಈ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿರತಕ್ಕ ಕಾಮಗಾರಿಗಳು ಮುಗಿಯುವವರೆಗೆ ಇನ್ನು ಯಾವುದೂ ದೊಡ್ಡ ಕಾಮಗಾರಿಗಳನ್ನು ತೆಗೆದುಕೊಳ್ಳಬಾರದು ಎಂದು Planning Commissionನವರು ನಮಗೆ ಸಲಹೆ ಮಾಡಿದ್ದಾರೆ. ದುಡ್ಡಿಗೋಸ್ಕರ ಕೇಂದ್ರ ಸರ್ಕಾರದ ಮೇಲೆ ನಾವು ಅವಲಂಬಿಸಬೇಕಾಗುವುದರಿಂದ ಅವರ ಸಲಹೆಯನ್ನು ನಾವು ಒಪ್ಪಬೇಕಾಗುತ್ತದೆ. Technical sanction ವಿಚಾರವಾಗಿ ಒಂದು ಮಾತು ಹೇಳಬೇಕಾಗಿದೆ. ಯಾವುದಾದರೂ ನೀರಾವರಿ ಯೋಜನೆಯನ್ನು ಪ್ರಾರಂಭಮಾಡುವಾಗ administrative sanction, technical sanction ಎರಡನ್ನೂ ಮಾಡಿ ಯೋಜನೆಯನ್ನು ಪ್ರಾರಂಭ ಮಾಡುವುದಕ್ಕೆ ಅಸಾಧ್ಯವೆಂದು ತಮ್ಮಲ್ಲಿ ಅರಿಕೆಮಾಡಿಕೊಳ್ಳಬೇಕಾಗಿದೆ. ಶ್ರೀ ಸಿದ್ದಪ್ಪನವರು ಮರಾಮತ್ತು ಶಾಖೆಯ ಮಂತ್ರಿಗಳಾಗಿದ್ದರು. ಶ್ರೀ ಇಮಾಂ ಸಾಹೇಬರೂ ಕೂಡ ಆ ಇಲಾಖೆಯ ಮಂತ್ರಿಗಳಾಗಿದ್ದರು. ಈ ರೀತಿ administrative ಮತ್ತು technical sanction ಎರಡನ್ನೂ ಪಡೆದು ಕಾರ್ಯ ಪ್ರಾರಂಭಿಸುವುದು ಸಾಧ್ಯವಾಗದ ಮಾತು.

7 P.M.

ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಇರಬೇಕಾದದ್ದು ಅಗತ್ಯ. ಎಲ್ಲಾ ಸಂದರ್ಭಗಳಲ್ಲೂ ಕೂಡ ಈ ಎರಡು ಸ್ಯಾಂಕ್ಷನ್‌ಗಳನ್ನೂ ಪಡೆದು ಅನಂತರ ಕೆಲಸಮಾಡತಕ್ಕದ್ದು ಅಸಾಧ್ಯ (impracticable) ಎಂದು ಹೇಳಬೇಕಾಗುತ್ತದೆ.

Mr. SPEAKER.—The point was that otherwise the funds might be misused and there might be irregularities in the execution of the scheme.

Sri Kadidal MANJAPPA.—It is not irregular. There is nothing irregular. That is what I say. ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಇರಬೇಕು. ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಇಲ್ಲದೆ, ಕಾಂಪ್ರಿಹೆನ್ಸಿವ್ ಎಸ್ಟಿಮೇಟ್ ಇಲ್ಲದೆ ಕೆಲಸ ಮಾಡತಕ್ಕದ್ದು ಸೂಕ್ತವಲ್ಲ. ಆದರೆ ಟೆಕ್ನಿಕಲ್ ಸ್ಯಾಂಕ್ಷನ್ ಕೂಡ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಜೊತೆಗೆ ಮಾಡಬೇಕು, ಮಾಡಿದನಂತರವೇ ಕೆಲಸ ತೆಗೆದುಕೊಳ್ಳಬೇಕು ಎನ್ನುವುದು ಸಾಧ್ಯವಾದದ್ದಲ್ಲ. ಆದಷ್ಟು ಜಾಗ್ರತೆ ಟೆಕ್ನಿಕಲ್ ಸ್ಯಾಂಕ್ಷನ್ ಆಗಬೇಕಾದದ್ದು ಅಗತ್ಯ ಎಂಬುದನ್ನು ಒಪ್ಪುತ್ತೇನೆ.

ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರ್.—Inordinate delay ಆಗಿದೆ ಎಂದು ತಾನೆ ವಾದ; ಅದಕ್ಕೆ ಏನು ಹೇಳುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಉದಾಹರಣೆ ಹೇಳುವುದಾದರೆ ಭದ್ರಾ ಜಲಾಶಯದ ಕೆಲಸ 1947ರಲ್ಲಿ ಪ್ರಾರಂಭವಾಯಿತು. ಕೆಲಸ ತೆಗೆದುಕೊಳ್ಳಬೇಕೇ, ಬೇಡವೇ ಎಂದು ಹೇಳಿ ಯೋಚನೆ ಮಾಡುತ್ತ ಇದ್ದಾಗ ಯಾವುದೋ ಒಂದು ಸ್ಟೇಜ್‌ನಲ್ಲಿ ಸರ್ಕಾರದವರು, 'Go slow' ಪ್ರೋಗ್ರಾಂ ಹಾಕಿದರು. ಅದರ ಅವಸ್ಥೆ ಏನಾಯಿತು ? 1952ನೇ ಇಸವಿಯಲ್ಲೂ ಕೂಡ ಪೂರೈಸುವುದಕ್ಕೆ ಅಸಮರ್ಥರಾಗಿದ್ದೆವು, ಕೇಂದ್ರ ಸರ್ಕಾರದವರು ನಮಗೆ ಹಣದ ಸಹಾಯ ಮಾಡದೇ ಇದ್ದಿದ್ದರೆ ಬಹುಶಃ ಆ ಕೆಲಸವನ್ನು ಮುಂದುವರಿಸುವುದಕ್ಕೆ ಅಸಾಧ್ಯವಾಗುತ್ತಾ ಇತ್ತು. ಅಂಥ ಸಂದರ್ಭದಲ್ಲಿ ಟೆಕ್ನಿಕಲ್ ಸ್ಯಾಂಕ್ಷನ್ ಮಾಡುವುದಕ್ಕೆ ಸ್ವಾಭಾವಿಕವಾಗಿ ತಡವಾಗಿದೆ ಎಂದು ಮಾನ್ಯ ಸದಸ್ಯರಲ್ಲಿ ಅರಿಕೆಮಾಡಿಕೊಳ್ಳಬೇಕಾಗಿದೆ.

Mr. SPEAKER.—Technical sanction may be obtained for a portion of the scheme. That is what the Government had promised last year.

Sri Kadidal MANJAPPA.—That we will consider, Sir. ಆಮೇಲೆ ಸಿಬ್ಬಂದಿ ಖರ್ಚು ಬಹಳ ಜಾಸ್ತಿ ಆಗಿದೆ ಎಂದು ಹೇಳಿ ನನ್ನ ಮಿತ್ರರಾದ ಇಮಾಂರವರು ಅಪ್ಪಣೆಕೊಡಿಸಿದರು. ಮೈಸೂರು ಸಂಸ್ಥಾನದಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯ ಸಿಬ್ಬಂದಿಗೆ ಎಷ್ಟು ಖರ್ಚು ಮಾಡುತ್ತಾ ಇದ್ದಾರೆ, ಬಾಕಿ ಸಂಸ್ಥಾನದವರು ಎಷ್ಟು ಖರ್ಚು ಮಾಡುತ್ತಾ ಇದ್ದಾರೆ ಎಂಬುದನ್ನು ನಾನು ಹೇಳುತ್ತೇನೆ ಎಂದು ನಂಬುವುದು ಬೇಡಿ, ತಾವೇ ನಿಷ್ಪಕ್ಷಪಾತವಾಗಿ ಯಾವುದಾದರೂ ಒಂದು ನಿರ್ದಿಷ್ಟವಾದ ಅಂಕಿಅಂಶಗಳನ್ನು ಶೇಖರಿಸಿ ಒಂದು ತೀರ್ಮಾನಕ್ಕೆ ಬನ್ನಿ.

ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರ್.—ಒಂದು ವಿಷಯ. ಬಾಜು ಪ್ರಾಂತಗಳಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯ ಸಿಬ್ಬಂದಿ, ಅವರ ಸಂಬಳ ಮತ್ತು ದರ್ಜೆಗೂ ಮೈಸೂರು ಸಂಸ್ಥಾನದ ಪಬ್ಲಿಕ್ ವರ್ಕ್ಸ್ ಇಲಾಖೆಯ ಸಿಬ್ಬಂದಿ, ಅವರ ಸಂಬಳ, ಮತ್ತು ದರ್ಜೆಗೂ ಲೆಕ್ಕಹಾಕಿದರೆ ಇವರ ಸಂಬಳ, ದರ್ಜೆ ಕಡಿಮೆ ಎಂದು ಹೇಳಿದರೆ ಒಪ್ಪುತ್ತೀರಾ ? ಆದ್ದರಿಂದ ಕಡಿಮೆ ದರ್ಜೆ, ಸಂಬಳ ಕೊಟ್ಟು ಹೋಲಿಕೆ ಮಾಡುವುದು ನ್ಯಾಯವಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹೋಲಿಕೆ ಮಾಡುತ್ತಾ ಹೋದರೆ ಅದಕ್ಕೆ ಅಂತ್ಯವೇ ಇಲ್ಲ. ತುಂಗಭದ್ರಾ ಪ್ರಾಜೆಕ್ಟನ್ನು ಅನೇಕರು ನೋಡಿದ್ದಾರೆ. ನಾನೂ ನೋಡಿದ್ದೇನೆ. ನಾನು ಮಂತ್ರಿಯಾಗಿ

ಹೋಗಿರಲಿಲ್ಲ, ಖಾಸಗಿಯಾಗಿ ಹೋಗಿದ್ದೆ. ಅಲ್ಲಿ ಹೋದಾಗ ಅವರು ಸಿಬ್ಬಂದಿ ಖರ್ಚು ಶೇಕಡ 12 ಆಗುತ್ತದೆ ಎಂದು ಹೇಳಿದರು, ನಮ್ಮಲ್ಲಿ ಹೆಚ್ಚು ಎಂದರೆ ಶೇಕಡ 8 ಆಗುತ್ತದೆ.

ಇಮಾಂ ಸಾಹೇಬರು ಮತ್ತು ಮಾನ್ಯ ಸದಸ್ಯರನೇಕರು ತುಂಗಭದ್ರಾ ನೀರನ್ನು ಸರಿಯಾದ ರೀತಿಯಲ್ಲಿ ನಾವು ಉಪಯೋಗಿಸುವುದಕ್ಕೆ ಪ್ರಯತ್ನ ಪಟ್ಟಿಲ್ಲ ಎಂದು ಅಪ್ಪಣೆ ಕೊಟ್ಟಿದ್ದಾರೆ. ತುಂಗಭದ್ರಾ ಜಲಾಶಯದಲ್ಲಿ ಮಾನ್ಯ ಸದಸ್ಯರು ಅಪ್ಪಣೆ ಕೊಡಿಸಿದಹಾಗೆ ನೀರು ಯಥೇಚ್ಛವಾಗಿ ಇದೆ. ಸಾಗುವಳಿಗೆ ಯೋಗ್ಯವಾದ ಜಮೀನೂ ಕೂಡ ಯಥೇಚ್ಛವಾಗಿ ಇದೆ. ಆದರೆ ನಾನಾ ಕಾರಣಗಳಿಂದ ಸಾಕಾದಷ್ಟು, ನಿರೀಕ್ಷೆ ಮಾಡಿದಷ್ಟು ಜಮೀನು ತುಂಗಭದ್ರಾ ಜಲಾಶಯದ ಕೆಳಗೆ ಸಾಗುವಳಿಗೆ ಬಂದಿಲ್ಲ. ಮೊದಲನೆಯ ಕಾರಣ, ಅಲ್ಲಿ ದೊಡ್ಡ ದೊಡ್ಡ ಜಮೀನ್ದಾರರು ಹೆಚ್ಚಾಗಿ ಇದ್ದಾರೆ. ಕೆಲವು ಜಮೀನ್‌ದಾರರು ಅಲ್ಲೇ ಸ್ಥಳದಲ್ಲೇ ವಾಸವಾಗಿಲ್ಲ, ಬೇರೆ ಕಡೆ ವಾಸವಾಗಿದ್ದಾರೆ. ಎರಡನೆಯ ಕಾರಣ, ಕೂಲಿಗಾರರು ಸಿಕ್ಕುವುದು ಕಷ್ಟ. ಮೂರನೆಯ ಕಾರಣ, ಮೈಸೂರು ಸಂಸ್ಥಾನದ ಇತರ ಜಿಲ್ಲೆಯ ರೈತರು ನೀರಾವರೀ ಸಹಾಯವನ್ನು ಪಡೆಯುವುದಕ್ಕೆ ಎಷ್ಟು ಆಸಕ್ತಿಯುಳ್ಳವರಾಗಿದ್ದಾರೋ ಅಷ್ಟು ಆಸಕ್ತಿಯನ್ನು ಆ ಜಿಲ್ಲೆಯ ಜನರು ಇದುವರೆಗೂ ವಹಿಸಿಲ್ಲ. ನಾಲ್ಕನೆಯದು, ತರೀ ವ್ಯವಸಾಯ ಆ ಪ್ರಾಂತ್ಯದ ಜನರಿಗೆ ಹೊಸದು. ಆ ಮೇಲೆ ಅಲ್ಲಿ composite ಮದ್ರಾಸು ಸರ್ಕಾರ ಇದ್ದಾಗ ಲೋಕಲೈಸ್ ಮಾಡಿದ್ದರು. ಇಂಥಿಂಥಾ ಸರ್ವೇ ನಂಬರ್ ನೀರನ್ನು ಪಡೆಯುವುದಕ್ಕೆ ಯೋಗ್ಯವಾದದ್ದು ಎಂದು ಹೇಳಿ ಲೋಕಲೈಸ್ ಮಾಡಿದ್ದರು. ಮಧ್ಯೆ ಮಧ್ಯೆ ಕೆಲವು ಜಮೀನುಗಳು ಬಿಟ್ಟುಹೋಗಿವೆ. ಈಗ ಪುನಃ ಲೋಕಲೈಸ್ ಮಾಡಿದ್ದನ್ನು ರಿವೈಸ್ ಮಾಡುವುದಕ್ಕೆ ತೊಂದರೆ ಆಗಿದೆ. ಎರಡು ಸರ್ಕಾರಗಳೂ ಒಪ್ಪಬೇಕು. ಮೈಸೂರು ಸರ್ಕಾರ ಒಪ್ಪಬೇಕು, ಆಂಧ್ರ ಸರ್ಕಾರ ಒಪ್ಪಬೇಕು. ಒಪ್ಪಿದರೆ ಸಾಧ್ಯವಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ಕಷ್ಟವಾಗುತ್ತದೆ. ಅಂತೂ ಈ ವಿಚಾರವನ್ನು pursue ಮಾಡಬೇಕಾದದ್ದು ಅಗತ್ಯ. ನೀರಾವರಿ ವಿಸ್ತೀರ್ಣ ಹೆಚ್ಚಿಸುವ ಬಗ್ಗೆ ರಾಮಮೂರ್ತಿ ಸಮಿತಿಯವರು ಸಲಹೆ ಕೊಟ್ಟಿದ್ದಾರೆ. ಆ ವಿಚಾರ ಮಾನ್ಯ ಸದಸ್ಯರಿಗೆ ಗೊತ್ತಿದೆ. ಅದನ್ನು ಕಾರ್ಯರೂಪಕ್ಕೆ ತರಲು ನಾವೂ ಕೂಡ ಪ್ರಯತ್ನಮಾಡುತ್ತಾ ಇದ್ದೇವೆ. ನನ್ನ ಸ್ನೇಹಿತರಾದ ಡಾ॥ ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಕೂಡ ನೇಮಕಮಾಡಿದ್ದೇವೆ. ಆ ಸಮಿತಿಯಲ್ಲಿ ಸ್ಥಳದ ಎಂದರೆ ಬಳ್ಳಾರಿ ಜಿಲ್ಲೆಯ ಕೆಲವು ಮುಖಂಡರೂ ಕೂಡ ಇದ್ದಾರೆ. ಅದರ ಜೊತೆಗೆ ವ್ಯವಸಾಯದ ಇಲಾಖೆಯ ಒಬ್ಬ ಅಧಿಕಾರಿಯನ್ನು, ಇರಿಗೇಷನ್ ಡೆವಲಪ್‌ಮೆಂಟ್ ಕೆಲಸಕ್ಕೆ ನೇಮಕಮಾಡಿದ್ದೇವೆ. ತಕಾವಿ ಸಾಲ, ಜಮೀನು ಅಭಿವೃದ್ಧಿ ಸಾಲ ಇವುಗಳನ್ನು ಸಾಧ್ಯವಾದಷ್ಟುಮಟ್ಟಿಗೂ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಇನ್ನೂ ಹೆಚ್ಚಿನ ಹಣದ ಸಹಾಯ ಕೇಂದ್ರ ಸರ್ಕಾರದಿಂದ ಸಿಕ್ಕುವಹಾಗಿದ್ದರೆ ಹೆಚ್ಚು ಮೊಬಲಗನ್ನು ರೈತರಿಗೆ ಕೊಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಬೋರ್ಡಿನ ವಿಚಾರದಲ್ಲಿ ಹೇಳುವುದಾದರೆ: The Board has been constituted in accordance with the provisions contained in the Andhra Act; an I.A.S. officer has been nominated as a Member of the Board. We thought it desirable to have an I.A.S. officer on the Board and that he would be more competent to deal with matters that may arise for consideration in the Board. If there is any need for appointing an engineer, there is no bar for us to suggest his name for the membership of the Board, either the Chief Engineer or the Chief Electrical Engineer. At that time we were under the impression that the other Government may nominate I.A.S. Officers. That is why we had to appoint an I.A.S. officer to represent our Government also.

ಆಮೇಲೆ ತುಂಗಭದ್ರಾ ಪ್ರಾಜೆಕ್ಟಿನಿಂದ ಮೈಸೂರಿನ ಮೇಲೆ ಸಾಲದ ಹೊರೆ ಎಷ್ಟೆಂಬುದನ್ನು ನಿಗದಿಮಾಡಬೇಕಾಗಿತ್ತೆಂದು ಹೇಳುತ್ತಾರೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೂ, ನಮಗೂ ಮತ್ತು ಆಂಧ್ರ ಸರ್ಕಾರಕ್ಕೂ ಮಾತುಕತೆ ನಡೆಯುತ್ತಿದೆ. ಅದಾದ ಮೇಲೆ ಅಂತಿಮ ತೀರ್ಮಾನವಾಗಬೇಕು. ಇಲ್ಲಿಯವರೆಗೆ ತುಂಗಭದ್ರಾ ಜಲಾಶಯದ ಸಂಬಂಧದಲ್ಲಿ ನಮ್ಮ ಭಾಗದ ಪಬ್ಲಿಕ್ ಡೆಟ್, ಸಾರ್ವಜನಿಕರ ಸಾಲ ಎಷ್ಟೆಂದು ನಿಗದಿಯಾಗಿಲ್ಲ.

ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಐ.ಸಿ.ಎಫ್. ಫಂಡಿನ ವಿಚಾರದಲ್ಲಿ ಉಪಯುಕ್ತವಾದ ಸಲಹೆಯನ್ನು ಕೊಟ್ಟರು. ಅದನ್ನು ಸರ್ಕಾರದವರು ಪರಿಶೀಲನೆಮಾಡುತ್ತಾರೆ. ಅವರು ಹೇಳುವುದು ನ್ಯಾಯವಾಗಿದೆ. ಅಫಿಷಿಯಲ್ ಇಯರ್ ವಿಚಾರದಲ್ಲಿ ಸರ್ಕಾರದವರು ಕೂಲಂಕಷವಾಗಿ ವಿಮರ್ಶೆಮಾಡಿದ್ದಾರೆ. ಈಗಿರುವ ವ್ಯವಸ್ಥೆಯನ್ನು ಬದಲಾವಣೆ ಮಾಡಿದರೆ ಬಹಳ ತೊಡಕುಂಟಾಗುತ್ತದೆಂದು ಮಾನ್ಯ ಸರಸ್ಯರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಕೃಷ್ಣರಾಜಸಾಗರದ ಕೆಲವು ಅಚ್ಚುಕಟ್ಟನ್ನು ಅಭಿವೃದ್ಧಿಪಡಿಸಬೇಕೆಂದು ಹೇಳಿದ್ದಾರೆ. ಸರ್ಕಾರದವರು ಸಾಧ್ಯವಾದ ಪ್ರಯತ್ನವನ್ನೆಲ್ಲಾ ಇದುವರೆಗೆ ಮಾಡಿದ್ದಾರೆ. ಮಳವಳ್ಳಿ ತಾಲ್ಲೂಕಿನಲ್ಲಿ ಸಾಕಾದಷ್ಟು ಕೆಲಸ ಮಾಡಿದ್ದಾರೆ. 1952ರಲ್ಲಿ ನಾನು ಮಳವಳ್ಳಿಗೆ ಹೋಗಿದ್ದಾಗ ಅಲ್ಲಿಯ ಜನರು ಎಷ್ಟೋ ಕಷ್ಟಪಡುತ್ತಿದ್ದರು. ಹೆಬ್ಬಳ್ಳ ಪಿಕಪ್ ಎಷ್ಟೋ ವರ್ಷದಿಂದ ಪೂರೈಸದೆ ಇತ್ತು. ಅದು ಮೈಸೂರು ಸಂಸ್ಥಾನದಲ್ಲಿ ಬಹಳ ದೊಡ್ಡ ಪಿಕಪ್. ಅದಕ್ಕೆ 35-36 ಲಕ್ಷ ರೂಪಾಯಿಗಳ ಖರ್ಚಾಗಿದೆ. ಅದು 22 ಮೈಲಿ ಉದ್ದವಿದೆ. 11 ಮೈಲಿ ಪಿಕಪ್ ಕೆಲಸಕ್ಕೆ 7 ವರ್ಷ ಹಿಡಿದಿತ್ತು. ಮಳವಳ್ಳಿ ತಾಲ್ಲೂಕಿನ ಜನರ ಗೋಳು ನೋಡಿ ಕೇವಲ 9 ತಿಂಗಳಲ್ಲಿ ಉಳಿದ 11 ಮೈಲಿ ಕೆಲಸವನ್ನು ಅದೂ ಬಹಳ ಕಷ್ಟವಾದ ಭಾಗವನ್ನು ಮಾಡಿಸಿದ್ದೇವೆ. ಇದನ್ನು ಶ್ರೀ ಚಿಕ್ಕಲಿಂಗಯ್ಯನವರ ಜ್ಞಾಪಕಕ್ಕೆ ತರುತ್ತೇನೆ. ಇದು ಮರೆಯತಕ್ಕದ್ದಲ್ಲ.

ಕಪಿನಿ ಪ್ರಾಜೆಕ್ಟ್ ತೆಗೆದುಕೊಳ್ಳುವುದು ಆವಶ್ಯಕ ಎಂದು ಹೇಳಿದ್ದಾರೆ, ಇದು ಬಹಳ ಸಾಧುವಾದ ಸಲಹೆ. ಇದನ್ನು ಅಗತ್ಯವಾಗಿ ತೆಗೆದುಕೊಳ್ಳಲೇ ಬೇಕು. ಆದರೆ ಪ್ಲಾನಿಂಗ್ ಕಮಿಷನ್ ಈ ಪ್ರಾಜೆಕ್ಟನ್ನು ಮೊದಲನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ತೆಗೆದುಕೊಳ್ಳಲು ಒಪ್ಪಲಿಲ್ಲ. ಆದ್ದರಿಂದ ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ತೆಗೆದುಕೊಳ್ಳುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇವೆಂದು ಹೇಳುತ್ತೇನೆ.

(ಶ್ರೀ ಕಡಿದಾಳ್ ಮಂಜಪ್ಪ.)

ಶ್ರೀ ಹುಚ್ಚೇಗೌಡರು ಮಾತನಾಡುವಾಗ ತುಂಗಾ ಅಣೆಕಟ್ಟಿಗೆ ಒಬ್ಬ ಎಗ್ಜಿಕ್ಯೂಟಿವ್ ಇಂಜಿನಿಯರು ಅನಾವಶ್ಯಕ, ಭದ್ರಾ ಜಲಾಶಯಕ್ಕೆ ಈಗಿರುವ ಐದು ಡಿವಿಷನ್ ಅನಾವಶ್ಯಕ ಎಂದು ಹೇಳಿದ್ದಾರೆ. ಎಸ್ಟಿಮೇಟ್ ಕಮಿಟಿಯವರೂ ಕೂಡ ಈ ವಿಚಾರ ಪ್ರಸ್ತಾಪ ಮಾಡಿದ್ದಾರೆಂದು ಜ್ಞಾಪಕವಿದೆ. ಇನ್ನು ಕೆಲವರು ಭದ್ರಾ ಜಲಾಶಯದಲ್ಲಿ ಇಷ್ಟೊಂದು ಎಗ್ಜಿಕ್ಯೂಟಿವ್ ಇಂಜಿನಿಯರುಗಳಿರುವುದು ಅನಗತ್ಯ ಎಂದು ಹೇಳಿದರು. ಅಮೇಲೆ ನಾನು ಇದನ್ನು ಸ್ಟ್ಯಾಂಡಿಂಗ್ ಟೆಕ್ನಿಕಲ್ ಅಡ್ವೈಜರಿ ಕಮಿಟಿಗೆ ತಿಳಿಸಿದೆ. ಅದು ನಿವೃತ್ತ ಚೀಫ್ ಇಂಜನಿಯರಿರುವ ಸಮಿತಿ. ಆ ಸಮಿತಿ ಕೂಲಂಕಷವಾಗಿ ಈ ವಿಚಾರ ಯೋಚನೆಮಾಡಿ ಈಗಿರತಕ್ಕ ಸಿಬ್ಬಂದಿ ಕಡಮೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ತೀರ್ಮಾನ ಕೊಟ್ಟಿತು. ಇದರ ಜೊತೆಗೆ ಟನಲ್ ಡಿವಿಷನ್ ಒಂದು ಅಗತ್ಯವಾಗಿ ಆಗಬೇಕಾಗಿದೆ. ಕೆಲಸವಾಗಬೇಕಾದರೆ ಸಾಕಾದಷ್ಟು ಸಿಬ್ಬಂದಿಯಿರಬೇಕಾಗುತ್ತದೆ. ಇದನ್ನು ಶ್ರೀ ಹುಚ್ಚೇಗೌಡರು ಮರೆಯಬಾರದು ಎಂದು ಅರಿಕೆಮಾಡುತ್ತೇನೆ.

ಗೊರೂರು ರಿಸರ್ವಾಯರ್ ಆವಶ್ಯಕವೆಂದು ಹೇಳಿದ್ದಾರೆ. ಆದರೆ, ಇದರಿಂದ ಸಾಗುವಳಿಗೆ ಬರುವ ವಿಸ್ತೀರ್ಣ ಕಡಮೆ; ಇದಕ್ಕೆ ಹಣ ಜಾಸ್ತಿ ಖರ್ಚಾಗುತ್ತದೆಂದು ಗೊತ್ತಾಗಿದೆ. ಆದ್ದರಿಂದ ನಿರ್ದಿಷ್ಟವಾಗಿ ಯಾವುದನ್ನೂ ಈ ದಿವಸ ಈ ವಿಚಾರದಲ್ಲಿ ಹೇಳಲು ನಾನು ತಯಾರಾಗಿಲ್ಲ.

ಶ್ರೀ ಸಿದ್ದಪ್ಪನವರು ಮಾವಿನಹೊಳೆ ಪ್ರಾಜೆಕ್ಟ್ 1948ರಲ್ಲೇ ಮಂಜೂರಾಗಿದ್ದರೂ ಸರ್ಕಾರ ಅದನ್ನು ಕೈಬಿಟ್ಟರೆಂದು ಹೇಳಿದರು. ವಿಚಾರ ಮಾಡಿದರೆ ಈ ಪ್ರಾಜೆಕ್ಟಿನಿಂದ ಸಾಗುವಳಿಗೆ ಬರಬಹುದಾದ ಜಮೀನಿಗೆ ಭದ್ರಾ ಜಲಾಶಯದಿಂದ ನೀರು ಪಡೆಯುವುದಕ್ಕೆ ಅನುಕೂಲವಿದೆ ಎಂದು ಹೇಳಿದರು. ಇದನ್ನು ಪುನಃ ವಿಮರ್ಶೆಮಾಡುತ್ತೇನೆ; ವಿಚಾರ ಸಂಪೂರ್ಣವಾಗಿ ಗೊತ್ತಿಲ್ಲ ಎಂದು ಅರಿಕೆ ಮಾಡುತ್ತೇನೆ.

ಭದ್ರಾ ಪ್ರಾಜೆಕ್ಟಿನಿಂದ ಚನ್ನಗಿರಿ ತಾಲ್ಲೂಕು ಸೂಳೇಕೆರೆಗೆ ನೀರನ್ನು ತೆಗೆದುಕೊಂಡು ಹೋಗಿ ಒಂದು ಬ್ಯಾಲೆನ್ಸಿಂಗ್ ರಿಸರ್ವಾಯಿರ್ ಮಾಡಬೇಕೆಂಬ ಸಲಹೆ ಸರ್ಕಾರದ ಮುಂದಿತ್ತು. ಈಚೆಗೆ ಇದು ಅನಾವಶ್ಯಕ, ಬೇರೆ ಕಡೆ ಕಾಲುವೆ ತೆಗೆದುಕೊಂಡು ಹೋಗಲು ಸಾಧ್ಯವಿದೆ ಎಂದು ಇಂಜಿನಿಯರುಗಳು ಅಭಿಪ್ರಾಯಪಟ್ಟಿದ್ದಾರೆ. ಆಖೈರು ತೀರ್ಮಾನವಾಗಿಲ್ಲ, ಜಾಗ್ರತೆ ತೀರ್ಮಾನಮಾಡಿ ರೈತರಿಗೆ ಅವರ ಸ್ಥಾನವೇನೆಂಬುದನ್ನು ತಿಳಿಸುವುದು ಆಗತ್ಯ, ಆರೀತಿ ಮಾಡುತ್ತೇವೆ ಎಂದು ಅರಿಕೆಮಾಡಿಕೊಳ್ಳುತ್ತೇನೆ.

ಶ್ರೀ ನಾರಾಯಣರೆಡ್ಡಿಯವರು ಕೋಲಾರ ಜಿಲ್ಲೆಯಲ್ಲಿ ಮೈನರ್ ಕೆರೆಗಳನ್ನು ಜೀರ್ಣೋದ್ಧಾರ ಮಾಡತಕ್ಕದ್ದು ಬಹಳ ಅಗತ್ಯವೆಂದು ಬಿರುಸಾಗಿ ಹೇಳಿದ್ದಾರೆ. ಅವರು ಬಡ್ಜೆಟ್ಟಿನಲ್ಲಿರುವ ಅಂಕಿಅಂಶಗಳನ್ನು ನೋಡಬೇಕು. ಕೋಲಾರ ಜಿಲ್ಲೆಯ ಕೆರೆಗಳ ಜೀರ್ಣೋದ್ಧಾರಕ್ಕೆ ಕಳೆದ ಮೂರು ವರ್ಷಗಳಿಂದ ಹೆಚ್ಚು ಮೊಬಲಗನ್ನು ಒದಗಿಸುತ್ತಿದ್ದೇವೆ. ಅವರ ಆವಶ್ಯಕತೆ ಬೇಕಾದಷ್ಟಿರಬಹುದು. ಆದರೆ ನಮ್ಮ ಸಾಧನ ಸಂಪತ್ತಿಗೂ ಕೂಡ ಒಂದು ಮಿತಿಯಿದೆ ಎಂಬುದನ್ನು ಅವರು ಅರಿಯಬೇಕು ಎಂದು ಅರಿಕೆಮಾಡಿಕೊಳ್ಳುತ್ತೇನೆ.

ಮುಲ್ಕ ಗೋವಿಂದರೆಡ್ಡಿಯವರು ಚೈನಾ ದೇಶದ ಉದಾಹರಣೆ ನಮ್ಮ ಮುಂದಿಟ್ಟಿದ್ದಾರೆ. ಅಲ್ಲಿ ಸರ್ವಾಧಿಕಾರ ಪ್ರಭುತ್ವವಿದೆ. ಈ ದಿವಸ ತಾವು ನನ್ನನ್ನು ಸರ್ವಾಧಿಕಾರಿಯಾಗಿ ಮಾಡುವುದಾದರೆ ಯಾರನ್ನಾದರೂ ಹಿಡಿದುಕೊಂಡು ಹೋಗಿ ಕೆಲಸ ಮಾಡಿಸುವುದಕ್ಕೆ ಸಾಧ್ಯ. ಆ ಅಧಿಕಾರ ಕೊಡುವುದಾಗಿದ್ದರೆ ಹಾಗೆ ಮಾಡಬಹುದಾಗಿತ್ತು. ಆದರೆ ಇಲ್ಲಿ ನಾವು ಪ್ರಜಾಪ್ರಭುತ್ವ ತತ್ವದ ಪ್ರಕಾರ ಇರುವ ಸರ್ಕಾರ ನಡೆಸುತ್ತಿದ್ದೇವೆ. ಅಲ್ಲಿರುವುದು ಕಮ್ಯೂನಿಸ್ಟ್ ತತ್ವದ ಪ್ರಕಾರ ಇರುವ ಸರ್ಕಾರ. ಅಲ್ಲಿ ಬಲಾತ್ಕಾರದಿಂದ ಜನರನ್ನು ಹಿಡಿದುಕೊಂಡು ಹೋಗಿ ಕೆಲಸ ಮಾಡಿಸುವುದಕ್ಕೆ ಅವಕಾಶವಿದೆಯೆಂಬುದನ್ನು ಶ್ರೀ ಗೋವಿಂದರೆಡ್ಡಿಯವರು ಮರೆಯಬಾರದು. ಹಿಂದೂಸ್ಥಾನದಲ್ಲಿ ಅದೇ ಸರ್ಕಾರ ಬಂದರೆ ನಮ್ಮನ್ನು ಕರೆದುಕೊಂಡು ಹೋಗಿ ಮಣ್ಣನ್ನು ಹೊರಿಸಲು ಸಾಧ್ಯವಿದೆ.

ಶ್ರೀ ನಾಗಪ್ಪಶೆಟ್ಟರು ಕಡ್ಲೆಒಡ್ಡಿನ ವಿಚಾರ ಪ್ರಸ್ತಾಪಮಾಡಿದ್ದಾರೆ. ಅದು ಈ ಡಿಮ್ಯಾಂಡಿಗೆ ಸಂಬಂಧಪಟ್ಟಿದ್ದಲ್ಲ. ಕಂಟ್ರಾಕ್ಟರುಗಳನ್ನು ರಿಜಿಸ್ಟರು ಮಾಡುವ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದರು. ಆ ವಿಚಾರ ಪರಿಶೀಲನೆಯಲ್ಲಿದೆ. ಅವರು ಹೇಳಿದಹಾಗೆ ರಿಜಿಸ್ಟರು ಮಾಡಬೇಕಾದರೆ ಆ ಬಗ್ಗೆ ಒಂದು ಕಾನೂನಾಗಬೇಕಾಗುತ್ತದೆ. ಈ ಮಾನ್ಯ ಸಭೆಯಿಂದ ರಚಿಸಲ್ಪಟ್ಟ ಒಂದು ಕಾನೂನು ಪ್ರಕಾರ ಆ ಕೆಲಸ ಮಾಡಲು ಸಾಧ್ಯ. ಆ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಅರಿಕೆಮಾಡಿಕೊಳ್ಳುತ್ತೇನೆ.

ಕಡ್ಲೆವೊಡ್ಡು ಸರ್ಕಾರದವರ ತೀವ್ರ ಪರ್ಯಾಲೋಚನೆಯಲ್ಲಿದೆಯೆಂದು ಹೇಳುತ್ತೇನೆ.

ಹಾಸನ ಜಿಲ್ಲೆಯ ಮಾನ್ಯ ಸದಸ್ಯರು, ಸರ್ಕಾರದದವರು ಹಾಸನ ಜಿಲ್ಲೆಯನ್ನು ಕಡೆಗಣ್ಣಿಂದ ನೋಡುತ್ತಿದ್ದಾರೆ ಎಂದು ಹೇಳಿದರು, ಸರ್ಕಾರದವರಿಗೆ ಎಲ್ಲಾ ಜಿಲ್ಲೆಗಳೂ ಒಂದೇ. ಎಲ್ಲಾ ಜನರೂ ಪ್ರಯೋಜನ ಹೊಂದಬೇಕೆಂಬುದೇ ಸರ್ಕಾರದವರ ಆಸೆ. ಸ್ಥಳೀಯ ಅಭಿಮಾನ (local patriotism) ಇರಬೇಕಾದದ್ದು ಅಗತ್ಯ. ಆದರೆ, ಅದು ಎಲ್ಲೆಮೀರಿ ಹೋಗಬಾರದೆಂದು ನಾನು ವಿನಯ ಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ. ಮಾತನಾಡುವಾಗ ಸರ್ಕಾರದವರು ಮಲೆನಾಡಿಗೆ ಹೇರಾಳವಾಗಿ ಹಣವನ್ನು ಖರ್ಚು ಮಾಡುತ್ತಿದ್ದಾರೆ ಎಂದು ಹೇಳಿದರು. ಆದರೆ, ಮಲೆನಾಡಿನವರು ಮಲೆನಾಡಿಗೆ ಸಾಕಾದಷ್ಟು ಗಮನ ಕೊಟ್ಟಿಲ್ಲವೆಂದು ಹೇಳುತ್ತಾರೆ. ಹೀಗೆ ಸದಸ್ಯರಲ್ಲಿ controversy ಮನೋಭಾವ ಕಾಣ ಬರುತ್ತದೆ. ಅದೇನೇ ಇರಲಿ, ಎಲ್ಲೆಲ್ಲಿ ಅವಶ್ಯಕತೆಯಿದೆಯೋ ಅಲ್ಲಲ್ಲಿ ಕೆಲಸ ಮಾಡಬೇಕಾದದ್ದು ಸರ್ಕಾರದವರ ಕರ್ತವ್ಯ. ಮೈದಾನ ಜಿಲ್ಲೆಗಳಲ್ಲಿ ಕ್ಷಾಮ ಕಾಲದಲ್ಲಿ ಹೇರಳವಾದ ಹಣವನ್ನು ಸರ್ಕಾರದವರು ಖರ್ಚು ಮಾಡಿದರು. ಆಗ ಮಲೆನಾಡಿನವರು ಏಕೆ ಇಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂದು ಸರ್ಕಾರದವರನ್ನು ಕೇಳಲಿಲ್ಲ. ನಾನು ಮಲೆನಾಡಿನವನು. ಮಲೆನಾಡಿನ ಸ್ಥಿತಿಗತಿಗಳನ್ನು ಚೆನ್ನಾಗಿ ಅರಿತಿದ್ದೇನೆ. ಮಲೆನಾಡಿನಲ್ಲಿ ಬೇಕಾದಷ್ಟು ಮಳೆ ಬರುತ್ತಿರಬಹುದು. ಆದರೆ ಆರೋಗ್ಯ ಇಲ್ಲ. ಸಂಚಾರ ಸೌಕರ್ಯಗಳಿಲ್ಲ. ಸಾಕಷ್ಟು ಜನ ಸಂಖ್ಯೆಯಿಲ್ಲ. ಜಮೀನು ಫಲವತ್ತಾದ್ದಲ್ಲ. ಅಲ್ಲಿರತಕ್ಕ ಸಮಸ್ಯೆ ಅದು. ಇಲ್ಲಿ, ಮೈದಾನದಲ್ಲಿ ಮಳೆಯಿಲ್ಲ. ಮಳೆಯಿಲ್ಲದೆ ಬೆಳೆ ಸರಿಯಾಗಿ ಆಗುವುದಿಲ್ಲ. ಮಳೆಯಾದರೆ ಬೆಳೆ ಚೆನ್ನಾಗಿ ಆಗುತ್ತದೆ. ಒಂದು ವರ್ಷದಲ್ಲಿ 2–3 ವರ್ಷಕ್ಕೆ ಆಗುವಷ್ಟು ಬೆಳೆ ಆಗುತ್ತದೆ. ಹೀಗೆ ಒಂದೊಂದು ಕಡೆ ಒಂದೊಂದು ತರಹ ಸಾಧಕಬಾಧಕಗಳಿವೆ. ಆದ್ದರಿಂದ ಮಲೆನಾಡಿಗೆ ಏನೇನು ಆಗಬೇಕೋ ಅದನ್ನು

ಮಾಡೋಣ. ಮೈದಾನಕ್ಕೆ ಏನೇನು ಕೆಲಸ ಕಾರ್ಯಗಳಾಗಬೇಕೋ ಅದನ್ನೂ ಮಾಡೋಣ.

ಶ್ರೀ ಕೆ. ಪ್ರಭಾಕರ್‌ರವರು ಒಂದೆರಡು ಕೆರೆ ಕಾಂಗಾರಿಗಳ ವಿಚಾರವಾಗಿ ನನ್ನ ಗಮನವನ್ನು ಸೆಳೆದಿದ್ದಾರೆ. ಅಯ್ಯೋ ಪಾಪ ಎಂದು ಹೇಳಿದರು. ಆ ಎರಡು ಕೆರೆಗಳೂ ನನಗೆ ಸಂಪೂರ್ಣವಾಗಿ ಗೊತ್ತಿವೆ. ಒಂದು ಕೆರೆ ಮರಸ ಹಳ್ಳಿ ಪ್ರಾಜೆಕ್ಟ್ ಎನ್ನುವುದು. ಈ ಪ್ರಾಜೆಕ್ಟ್ ವಿಚಾರವಾಗಿ ಎರಡು ವರ್ಷಗಳಿಂದ ಹೇಳುತ್ತಿದ್ದಾರೆ. ಈ ಪ್ರಾಜೆಕ್ಟ್ ವಿಚಾರವಾಗಿ ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದ್ದೇನೆ. ಈ ಪ್ರಾಜೆಕ್ಟ್ ತೆಗೆದುಕೊಂಡರೆ ಬೆಂಗಳೂರಿನ water supplyಗೆ ತೊಂದರೆಯಾಗುತ್ತದೆ, ಆದ್ದರಿಂದ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಆದರೂ ಶ್ರೀಮಾನ್ ಪ್ರಭಾಕರ್‌ರವರು ನನ್ನನ್ನು ಬಿಡುವ ಹಾಗೆಯೇ ಇಲ್ಲ.

ಶ್ರೀ ಕೆ. ಪ್ರಭಾಕರ್.—ಇದನ್ನು ಸಂಪೂರ್ಣವಾಗಿ ಪರೀಕ್ಷೆ ಮಾಡಿಸಬೇಕು, ಸ್ವಾಮಿ.

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೊಂದು ಮಂಚೇನಹಳ್ಳಿ ಕೆರೆ ಎಂಬುದು. ಇದು ಕೆರೆ ಅಲ್ಲ; ಕೆರೆ ಕಟ್ಟುವುದಕ್ಕೆ ಅವಕಾಶವಿದೆ. ಈ ಕೆರೆಯ ವಿಚಾರದಲ್ಲಿ ಎರಡು ಗುಂಪುಗಳು ಆ ಊರಿನಲ್ಲಿವೆ. ಒಂದು ಗುಂಪು 60 ವರ್ಷದ ಒಬ್ಬ ಮುದುಕನ ಮುಂಖಡತ್ವದಲ್ಲಿದೆ; ಇನ್ನೊಂದು ಗುಂಪು 65 ವರ್ಷದ ಒಬ್ಬ ಮುದುಕನ ಮುಖಂಡತ್ವದಲ್ಲಿ. ಇಬ್ಬರೂ ಬಹಳ ನ್ಯಾಯವಾಗಿಯೇ ಹೇಳುತ್ತಾರೆ. ಆದ್ದರಿಂದ allow me to give my own decision in the matter. But the project is being prepared. Their decision may be taken. ಒಟ್ಟಿನಲ್ಲಿ controversy ಇರುವುದರಿಂದ ಕೆಲವು ಸಂದರ್ಭಗಳಲ್ಲಿ ನಿಧಾನವಾಗುವುದು ಸ್ವಾಭಾವಿಕ.

ನಂಜನಗೂಡು ತಾಲ್ಲೂಕಿನ ಯಳಂದೂರು ವಿಚಾರವಾಗಿ ಶ್ರೀಮಾನ್ ರಾಚಯ್ಯನವರೂ ಮತ್ತು ರಾಜಶೇಖರ ಮೂರ್ತಿಯವರೂ ಪ್ರಸ್ತಾಪ ಮಾಡಿದ್ದಾರೆ. ಯಳಂದೂರಿನ ಇತಿಹಾಸದಲ್ಲೇ ಕೆರೆಗಳ ಜೀರ್ಣೋದ್ಧಾರದ ಕೆಲಸ ಹೋದ ವರ್ಷ ನಡೆದಷ್ಟು ನಡೆದಿಲ್ಲ. ಇದುವರೆಗೂ ಎಂದೂ ಆಗಿರಲಿಲ್ಲವೆಂದೇ ಹೇಳಬಹುದು.

ಶ್ರೀ ಎಂ. ರಾಜಶೇಖರ ಮೂರ್ತಿ.—ಯಾರ ದುಡ್ಡು ?

ಶ್ರೀ ಕಡಿದಾಳ್ ಮಂಜಪ್ಪನವರು.—ರೈತರುಗಳಿಂದ ಮುಚ್ಚಳಿಕೆ ಬರೆಸಿಕೊಂಡು ಹಣವನ್ನು ಸರ್ಕಾರದವರು advance ಮಾಡಿದ್ದಾರೆಂಬುದನ್ನು ಮಾನ್ಯ ಸದಸ್ಯರು ಮರೆಯಬಾರದು. ಇನ್ನೂ ಕೂಡ ಕೆರೆಗಳ ಜೀರ್ಣೋದ್ಧಾರದ ಕೆಲಸವನ್ನು ಮುಂದುವರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಜಹಗೀರ್‌ದಾರರ ದುಡ್ಡು!

ಶ್ರೀ ಕಡಿದಾಳ್ ಮಂಜಪ್ಪ.—ಆ ದುಡ್ಡು ಹತ್ತು ವರ್ಷಗಳ ಕೆಳಗಿತ್ತು !

ಶ್ರೀ ಬಿ. ರಾಚಯ್ಯ.—20 ವರ್ಷಗಳ ಹಿಂದೆಯೇ ಅದರ ಜವಾಬ್ದಾರಿಯನ್ನು ಸರ್ಕಾರದವರು ತೆಗೆದುಕೊಂಡರು. ಸರ್ಕಾರದವರು ಆಗಿನಿಂದಲೂ ಮಾಡಿಸಬೇಕಾದ್ದನ್ನು ಮಾಡಿಸಿಕೊಂಡು ಬಂದಿಲ್ಲವೆಂದು ಹೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ—Brushwood Anecut ವಿಚಾರವನ್ನು ಶ್ರೀಮಾನ್ ರಾಚಯ್ಯನವರು ಪ್ರಸ್ತಾಪ ಮಾಡಿದರು. ಕಾನೂನಿಗೆ ವಿರೋಧವಾಗಿಲ್ಲದೆ ಇದ್ದರೆ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಇನ್ನು local ಆಗಿರುವ ವಿಷಯಗಳಿಗೆ ಜವಾಬು ಕೊಡುವುದು ಸಾಧ್ಯವಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ, ತಮ್ಮಲ್ಲನೇಕರು ಒಪ್ಪಿಕೊಂಡಿರುವ ಹಾಗೆ, ನೀರಾವರಿ ಯೋಜನೆಗಳ ಕೆಲಸ ಕಾರ್ಯಗಳು ತಕ್ಕಷ್ಟು ತೃಪ್ತಿಕರವಾಗಿ ನಡೆಯುತ್ತಿವೆಯೆಂದು ಹೇಳಬಹುದು. ನಿರೀಕ್ಷಿಸಿದಷ್ಟು ತೃಪ್ತಿಕರವಾಗಿ ನಡೆಯದೆ ಇದ್ದರೂ ಹೆಚ್ಚಿಗೆ ಕೆಲಸ ಕಾರ್ಯಗಳು ನಡೆದಿವೆಯೆಂದು ನಾನು ಹೇಳಬಲ್ಲೆ.

ಮೈನರ್ ಕೆರೆಗಳ restorationನಿಗೆ 1949-50 ನೆಯ ಇಸವಿಯಲ್ಲಿ 5,18,717 ರೂಪಾಯಿಗಳ ಖರ್ಚಾಗಿತ್ತು. 1950-51 ರಲ್ಲಿ 9,2,031 ರೂಪಾಯಿಗಳು ಖರ್ಚಾದವ. 1951-52 ರಲ್ಲಿ 11,87,000 ರೂಪಾಯಿ ಖರ್ಚಾದವು. 1952-53 ರಲ್ಲಿ 12,53,000 ರೂಪಾಯಿಗಳು ಖರ್ಚಾದವು. 1953-54 ರಲ್ಲಿ 16,01,000 ರೂಪಾಯಿಗಳು ಖರ್ಚಾದವು. ಕೊನೆಯದಾಗಿ, ಈ ವರ್ಷ ಡಿಸೆಂಬರ್ ಆಖೈರ್‌ವರೆಗೆ 13,96,984 ರೂಪಾಯಿಗಳು ಖರ್ಚಾಗಿವೆ. ಇದನ್ನು ನೋಡಿದರೆ, ಪ್ರತಿ ವರ್ಷವೂ ಜಾಸ್ತಿ ಜಾಸ್ತಿಯಾಗಿ ಖರ್ಚಾಗುತ್ತಿವೆಯೆಂಬುದು ವ್ಯಕ್ತವಾಗುತ್ತದೆ. ಹಾಗೆಯೇ ಜೀರ್ಣೋದ್ಧಾರವಾದ ಕೆರೆಗಳ ಸಂಖ್ಯೆಯನ್ನ ನೋಡುವುದಾದರೆ, 1949-50 ರಲ್ಲಿ 128 ಕೆರೆಗಳು ಜೀರ್ಣೋದ್ಧಾರವಾಗಿದ್ದವು. ಇನ್ನೊಂದು ವ್ಯತ್ಯಾಸವನ್ನು ಮಾನ್ಯ ಸದಸ್ಯರು ಗಮನಿಸಬೇಕು. ರೆಸ್ಟೋರೇಷನ್ ಕೆಲಸವೇ ಬೇರೆ, ordinary ರಿಪೇರಿ ಕೆಲಸವೇ ಬೇರೆ. Ordinary ರಿಪೇರಿ ಕೆಲಸ restoration ನಲ್ಲಿ ಸೇರುವುದಿಲ್ಲ. 1950-51 ರಲ್ಲಿ 86 ಕೆರೆಗಳು ರೆಸ್ಟೋರ್ ಆದವು. 1951-52 ರಲ್ಲಿ 124 ಕೆರೆಗಳು restore ಆದುವು. 1952-53 ರಲ್ಲಿ 215 ಕೆರೆಗಳು restore ಆದುವು. 1953-54 ರಲ್ಲಿ 191 ಕೆರೆಗಳು restore ಆದುವು. ಈ ವರ್ಷವಾದರೋ 800 ಕೆರೆಗಳ ಕಾಮಗಾರಿಗಳು ನಡೆಯುತ್ತಿವೆ.

ಶ್ರೀ ಎಸ್. ಸಿದ್ದಪ್ಪ.—ಏಕದಂ ! !

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಇನ್ನು ಮೇಲೆ ವರ್ಷಕ್ಕೆ 800 ರಂತೆ ಕೊಡುತ್ತೀರಾ ?

Sri Kadidal MANJAPPA.—We will try. ತಮ್ಮ ಕೈಗೆ ಕೊಟ್ಟಿರತಕ್ಕ 'ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ನಡೆದಿರುವ ಕಾರ್ಯ ಕಲಾಪಗಳ ಸೂಕ್ಷ್ಮ ವರದಿ'ಯನ್ನು ನೋಡಿದರೆ, ನೀರಾವರಿ ಸಂಬಂಧವಾಗಿ ಏನೇನು ಕೆಲಸಕಾರ್ಯಗಳು ನಡೆದಿವೆಯೆಂಬುದು ಸ್ಪಷ್ಟವಾಗುತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆ ಬಹು ದೊಡ್ಡ ಇಲಾಖೆ. ನಮ್ಮ ಮಿತ್ರರಾದ ಸಿದ್ದಪ್ಪನವರು ಈ ಇಲಾಖೆಯ ಸಚಿವರಾಗಿದ್ದಾಗ ಬಹುಶಃ 3-4 ಕೋಟಿ ರೂಪಾಯಿಗಳಷ್ಟು ಖರ್ಚಾಗುತ್ತಿತ್ತೆಂದು ಕಾಣುತ್ತದೆ. ಇವೊತ್ತಿನ ದಿವಸ ಸುಮಾರು 11-12 ಕೋಟಿ ರೂಪಾಯಿಗಳವರೆಗೂ ಖರ್ಚಾಗುತ್ತಿವೆ. ಬರುವ ಸಾಲಿನಲ್ಲೂ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂಬ ಉದ್ದೇಶವಿಟ್ಟುಕೊಂಡಿದ್ದೇವೆ.

Sri B. HUTCHE GOWDA.—What is the quantum of work ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಬೇರೆ ವಿಷಯ. ನೀರಾವರಿ ಕಾಮಗಾರಿಗಳಿಗಾಗಿ ಮುಂದಿನ ವರ್ಷಕ್ಕೆ ಏಳು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ನಾನು ಉದ್ದೇಶವಿಟ್ಟುಕೊಂಡಿದ್ದೇನೆ. ಈ ಬಾಬಿನಲ್ಲಿ ಈಗ ಏಳು ಕೋಟಿ 77 ಲಕ್ಷ ರೂಪಾಯಿಗಳಷ್ಟು ಹಣ ವೆಚ್ಚವಾಗುತ್ತಿದೆ.

ಅಧ್ಯಕ್ಷರು.—ಏಳು ಕೋಟಿ 77 ಲಕ್ಷ 73 ಸಾವಿರದ ಚಿಲ್ಲರೆ ಆಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಇಷ್ಟೊಂದು ಹಣ ವೆಚ್ಚವಾಗುವ ಕಡೆ ಅಲ್ಲಲ್ಲೇ ಸಣ್ಣ ಪುಟ್ಟ ಲೋಪ ದೋಷಗಳು ಕಂಡುಬರುವುದು ಸ್ವಾಭಾವಿಕ. ಮತ್ತೆ ಕೆಲವು ಕಡೆ ಈ ಅಧಿಕಾರಿಗಳು ನಿರ್ಲಕ್ಷ್ಯ ಮನೋಭಾವದಿಂದ ನಡೆದುಕೊಂಡಿರಬಹುದು; ಮತ್ತೆ ಕೆಲವು ಅಧಿಕಾರಿಗಳು ಕೆಲಸ ಕಾರ್ಯಗಳನ್ನು ನಿಧಾನ ಮಾಡಿರಬಹುದು. ಇನ್ನು ಕೆಲವರು ಅಕ್ರಮ ನಡವಳಿಕೆಗಳನ್ನೂ ನಡೆಸಿರಬಹುದು. ಹೀಗೆಲ್ಲಾ ವರ್ತಿಸುವುದಕ್ಕೆ ಅವಕಾಶವಿದೆ; ಸಾಧ್ಯವೂ ಇದೆ. ಇದೆಲ್ಲವನ್ನೂ ತಡೆಗಟ್ಟುವುದಕ್ಕೆ ಏನೇನು ಪ್ರಯತ್ನಗಳನ್ನು ನಾನು ಮಾಡಬಹುದಾಗಿತ್ತೋ ಅವುಗಳನ್ನೆಲ್ಲಾ ಮಾಡಿದ್ದೇನೆ ಎಂದು ಹೇಳುತ್ತೇನೆ. ಈ ನ್ಯೂನತೆಗಳನ್ನೆಲ್ಲಾ ಸಾಧ್ಯವಾದ ಮಟ್ಟಿಗೂ ನಿರ್ಮೂಲ ಮಾಡಬೇಕೆಂದು ನಾನೇ ನೋಹೃತ್ಪೂರ್ವಕವಾಗಿ ಪ್ರಯತ್ನ ಮಾಡಬೇಕೆಂದು ಮನಸ್ಸು ಮಾಡಿದ್ದೇನೆ, ಅದರಂತೆ ಕಾರ್ಯಕ್ರಮಗಳನ್ನೂ ಸಹ ಈಗಾಗಲೆ ಕೈಗೊಂಡಿರುತ್ತೇನೆ.

ಅನೇಕ ಮಾನ್ಯ ಸದ್ಯಸರು ಈ ಎಸ್ಟಿಮೇಟ್ ಸಮಿತಿಯವರು ತಮ್ಮ ವರದಿಯಲ್ಲಿ ಸೂಚಿಸಿರುವ ಪ್ರಕಾರ ಈ ಇಂಜಿನಿಯರಿಂಗ್ ಇಲಾಖೆಯನ್ನು ಪುನಃ ರಚನೆ ಮಾಡಬೇಕೆಂಬ ವಿಚಾರವಾಗಿ ಒತ್ತಾಯಪಡಿಸಿದ್ದಾರೆ. ಆದರೆ ಈ ಸಂಬಂಧವಾಗಿ ನಾವು ಈಗಾಗಲೇ ಚೀಫ್ ಇಂಜಿನಿಯರ್ ಅವರಿಗೂ, ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರಿಗೂ ಮತ್ತು ಎಗ್ಜಿಕ್ಯುಟಿವ್ ಇಂಜಿನಿಯರ್ ಅವರಿಗೂ ಅಧಿಕಾರಗಳನ್ನು ಹೆಚ್ಚು ಮಾಡಿದ್ದೇವೆ. ಮೊದಲು ಎಗ್ಜಿಕ್ಯುಟಿವ್ ಇಂಜಿನಿಯರಿಗೆ ಅಡ್ಮಿನಿಸ್ಟ್ರೇಟೀವ್ ಮತ್ತು ಟೆಕ್ನಿಕಲ್ ಸ್ಯಾಂಕ್ಷನ್ ಬಗ್ಗೆ ಐದು ಸಾವಿರದವರೆಗೆ ಮಾತ್ರ ಅಧಿಕಾರವಿತ್ತು. ಈಗ ಆ ಅಧಿಕಾರವನ್ನು 7½ ಸಾವಿರ ರೂಪಾಯಿಗಳಿಗೆ ಹೆಚ್ಚಿಸಿರುತ್ತೇವೆ. ಇವರು ಇನ್ನು ಟೆಂಡರುಗಳ ಬಗ್ಗೆ 15 ಸಾವಿರ ರೂಪಾಯಿಗಳ ತನಕ ಬರತಕ್ಕಂಥ ಟೆಂಡರುಗಳನ್ನು ಅಂಗೀಕಾರ ಮಾಡಿಕೊಳ್ಳಬಹುದು. ಇದೇ ರೀತಿ ಆ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರಿಗೂ ಕೂಡ ಮೊದಲು ಅವರಿಗೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಬಗ್ಗೆ 10 ಸಾವಿರ ರೂಪಾಯಿಗಳವರೆಗೂ ಮಾತ್ರ ಅಧಿಕಾರವಿತ್ತು. ಈಗ ಅದನ್ನು 15 ಸಾವಿರಕ್ಕೆ ಹೆಚ್ಚಿಸಿದ್ದೇವೆ. ಇನ್ನು ಟೆಕ್ನಿಕಲ್ ಸ್ಯಾಂಕ್ಷನ್ ಬಗ್ಗೆ ಅವರಿಗೆ 25 ಸಾವಿರದವರೆಗೂ ಅಧಿಕಾರ ಕೊಡಲಾಗಿದೆ. ಇವರು 50 ಸಾವಿರದ ತನಕ ಟೆಂಡರುಗಳನ್ನು ಅಂಗೀಕಾರ ಮಾಡಿಕೊಳ್ಳಬಹುದು. ಇನ್ನು ಚೀಫ್ ಇಂಜಿನಿಯರ್ ಅವರಿಗೆ 25 ಸಾವಿರದವರೆಗೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್‌ಗೆ ಅಧಿಕಾರ ಕೊಟ್ಟಿದ್ದೇವೆ. 50 ಸಾವಿರದ ತನಕ ಟೆಕ್ನಿಕಲ್ ಸ್ಯಾಂಕ್ಷನ್‌ಗೆ ಅಧಿಕಾರ ಕೊಟ್ಟಿದ್ದೇವೆ. ಒಂದು ಲಕ್ಷದವರೆಗೂ ಟೆಂಡರುಗಳನ್ನು ಅಂಗೀಕಾರ ಮಾಡತಕ್ಕಂಥ ಅಧಿಕಾರವನ್ನು ಕೂಡ ಇವರಿಗೆ ಕೊಡಲಾಗಿದೆ.

ಶ್ರೀ ಬಿ. ರಾಚಯ್ಯ.—ತಾವು ಈ ಅಸಿಸ್ಟೆಂಟ್ ಇಂಜಿನಿಯರ್‌ಗಳಿಗೇನು ಮಾಡಿದ್ದೀರಿ ?

7-30 P.M.

ಶ್ರೀ ಕಡಿದಾಳ್ ಮಂಜಪ್ಪ.—ಇತ್ತೀಚೆಗೆ ಇವರುಗಳಿಗೆ ಅಂಥ ಯಾವ ಅಧಿಕಾರಗಳನ್ನೂ ಕೊಟ್ಟಿಲ್ಲ. ಈಗೇನೋ ಇವರಿಗೆ 500 ರೂಪಾಯಿಗಳವರೆಗೂ ಸ್ಯಾಂಕ್ಷನ್ ಮಾಡುವ ಅಧಿಕಾರ ಕೊಟ್ಟಿದ್ದೇವೆ. ಈ ಒಂದು ಅಧಿಕಾರ ಈದಿವಸ ಅವರಿಗೆ ಇದ್ದೇ ಇದೆ. ಆದರೆ ಇವರಿಗೆ ಸರಿಯಾದ ಒಂದು ಅಂಕೌಂಟ್ ಸಿಬ್ಬಂದಿಯಿಲ್ಲ. ಹೀಗಾಗಿ ಈ ದಿವಸ ಇದೊಂದು ಬಹಳ ವಾದಗ್ರಸ್ತವಾದಂಥ ವಿಚಾರವಾಗಿದೆ. ಇದು ವಾದಗ್ರಸ್ತ ವಿಚಾರ. ಅಸಿಸ್ಟೆಂಟ್ ಇಂಜಿನಿಯರುಗಳಿಗೆ ಅಂದಾಜು ಮಂಜೂರು ಮಾಡತಕ್ಕ ವಿಚಾರದಲ್ಲಿ ಇನ್ನೂ ಹೆಚ್ಚಿನ ಅಧಿಕಾರಕೊಡಬೇಕೆಂದು ಹೇಳುತ್ತಾರೆ. ಕೆಲವರ ಕೈಗೆ ಈ ಅಧಿಕಾರ ಸಿಕ್ಕಿದರೆ ಸರಿಯಾದ ರೀತಿಯಲ್ಲಿ ಅದು ಉಪಯೋಗವಾಗಬಹುದೋ ಇಲ್ಲವೋ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಅನುಭವವಿಲ್ಲದಿರುವವರ ಕೈಯಲ್ಲಿ ಈ ಅಧಿಕಾರ ಸಿಕ್ಕಿದರೆ ಸ್ವಲ್ಪ ಕಷ್ಟವಾಗಬಹುದೆನಿಸುತ್ತದೆ. ಇದು ಯೋಚನೆ ಮಾಡಬೇಕಾದ ವಿಚಾರ. ಆದರೂ ಶ್ರೀಮಾನ್ ದೇವರಾಜ ಅರಸಿನವರೂ ಮಾಸ್ಕರೆನ್ಯಾಸ್‌ರವರೂ ಹೆಚ್ಚು ಅಧಿಕಾರ ಕೊಡಬೇಕೆಂದು ಹೇಳಿದ್ದಾರೆ. ಇದನ್ನು ಪುನಃ ಯೋಚನೆ ಮಾಡುತ್ತೇನೆಂದು ಹೇಳುತ್ತೇನೆ.

Mr. SPEAKER.—The question is:

"That a sum not exceeding Rs. 81,32,000 be granted to the Government to defray the charges which will come in course of payment during the year ending 31st day of March 1956, in respect of 'other Revenue Expenditure financed from ordinary Revenue."

The motion was adopted.

Mr. SPEAKER.—The question is:

"That sums not exceeding the sums specified in the motions for Demands for Grants for the year 1955-56, included in the list of Demends distributed to members be granted to the Government to defray the charges which will come in course of payment during the year ending with 31st day of March 1956 in respect of Demands Nos. 9, 37 and 40."

The motion was adopted.

(As directed by the Speaker the motions for Demands for Grants adopted by the House are reproduced below).

DEMAND NO. 9.—IRRIGATION.

19. CONSTRUCTION OF IRRIGATION, NAVIGATION, EMBANKMENT AND DRAINAGE WORKS.

"That a sum not exceeding Rs. 19,92,000 be granted to the Government to defray the charges which will come in course of payment during the year ending 31st

day of March 1956, in respect of 'Construction of Irrigation, Navigation, Embankment and Drainage Works'."

DEMAND NO. 37—WORKING EXPENSES IRRIGATION WORKS.

XVII. I.N.E. AND D. WORKS FOR WHICH CAPITAL ACCOUNTS ARE KEPT—WORKING EXPENSES.

"That a sum not exceeding Rs. 37,97,000 be granted to the Government to defray the charges which will come in course of payment during the year ending 31st day of March 1956, in respect of I.N.E.D. Works for which capital accounts are kept—Working Expenses.

DEMAND NO. 40—IRRIGATION.

68. CONSTRUCTION OF IRRIGATION, NAVIGATION, EMBANKMENT AND DRAINAGE WORKS OUTSIDE THE REVENUE ACCOUNT.

"That a sum not exceeding Rs. 5,68,52,800 be granted to the Government to defray the charges which will come in course of payment during the year ending 31st day of March 1956, in respect of 'Construction of Irrigation, Navigation, Embankment and Drainage Works outside the Revenue Account'."

Mr. SPEAKER.—The House will now rise and meet at 8-30 A.M. tomorrow.

The House adjourned at Thirty-eight Minutes past Seven of the Clock to meet again at Thirty Minutes past Eight of the Clock on Wednesday the 23rd March 1955.